# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 12 | ಮಾರ್ಚ್ 2025 | ಬೆಂಗಳೂರು | ₹ 10/-




## ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ

## 10

# ದಶಕದ ಸಂಭ್ರಮ



ಗುಜರಾತಿನಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಲಖ್‌ಪತಿ ದೀದಿ ರವರೊಂದಿಗೆ ಸಂವಾದ



ಮಾರಿಷಸ್‌ನ ಪೋರ್ಟ್ ಲೂಯಿಸ್‌ನಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ಮಾರಿಷಸ್ ಗಣರಾಜ್ಯದ ಅಧ್ಯಕ್ಷ ಶ್ರೀ ಧರಂಬೀರ್ ಗೋಖೂಲ್ ಭೇಟಿ



ಮಾರಿಷಸ್ ವತಿಯಿಂದ ಪ್ರಧಾನಿ ಶ್ರೀ ಮೋದಿ ರವರಿಗೆ ಗ್ರ್ಯಾಂಡ್ ಕಮಾಂಡರ್ ಆಫ್ ದಿ ಆರ್ಡರ್ ಆಫ್ ದಿ ಸ್ಟಾರ್ ಮತ್ತು ಕೀ ಆಫ್ ದಿ ಇಂಡಿಯನ್ ಓಷನ್ ಪ್ರಶಸ್ತಿ



ರಾಜ್ಯಪಾಲರ ಕುಲಾಧಿಪತಿ ಸ್ಥಾನಕ್ಕೆ ಕತ್ತರಿ ಹಾಕಿದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ವತಿಯಿಂದ ಪಾದಯಾತ್ರೆಯ ಮೂಲಕ ಪ್ರತಿಭಟನೆ



ಪರಿಶಿಷ್ಟ ಜಾತಿ, ಪಂಗಡಗಳ ಅಭಿವೃದ್ಧಿಗೆ ಮೀಸಲಿಟ್ಟ ಹಣ ದುರುಪಯೋಗ ಪಡಿಸಿದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಬೃಹತ್ ಪ್ರತಿಭಟನೆ



ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಹಾಗೂ ನಾಯಕರಿಂದ ಮಂಡ್ಯ ಜಿಲ್ಲೆಯ ಕೊತ್ತತ್ತಿ ಗ್ರಾಮದ ರೈತರೊಂದಿಗೆ ಭತ್ತನಾಟಿ ಕಾರ್ಯಕ್ರಮ

# ಅತಿಯಾದ ತುಷ್ಟೀಕರಣ, ಕಾಂಗ್ರೆಸ್ ಅಧಿಕಾರಸ್ಥರ ಉದ್ಧಟತನ

ಡಿಸೆಂಬರ್ 9, 2006 ರ ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ (NDC) ಸಭೆಯಲ್ಲಿ ಮಾತನಾಡುತ್ತಾ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಈ ದೇಶದ ಸಂಪನ್ಮೂಲದ ಮೇಲೆ ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರಿಗೇ ಮೊದಲ ಹಕ್ಕು ಅಂದಿದ್ದರು. ಅಂದು ಅವರು ಈ ಹೇಳಿಕೆ ವ್ಯಾಪಕವಾಗಿ ಟೀಕೆಗೂಳಗಾಗಿತ್ತು. ಕಾಂಗ್ರೆಸ್ ಪಕ್ಷ ಎಂದಿಗೂ ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ ಮುಸ್ಲಿಂ ಸಮುದಾಯವನ್ನು ಓಲೈಸುವ ಸಂಗತಿ ಗೊತ್ತಿರುವುದೇ. ಆದರೆ ಸಾಂವಿಧಾನಿಕ ಹುದ್ದೆಯಲ್ಲಿ ಕುಳಿತ ವ್ಯಕ್ತಿಯೊಬ್ಬರು ಎಲ್ಲರ ಸಮ್ಮುಖದಲ್ಲಿ ಇದನ್ನು ಪ್ರಸ್ತಾಪಿಸುವ ಮೂಲಕ ಇವರ ಉದ್ದೇಶಗಳೇನು ಎನ್ನುವುದನ್ನು ಹೇಳಿದರು. ತಮ್ಮದು ಪಂಥ ನಿರಪೇಕ್ಷ, ಜಾತ್ಯಾತೀತವಾದ ಎಂದು ಹೇಳುತ್ತಲೇ ಬಂದ ಕಾಂಗ್ರೆಸ್ ಪಕ್ಷ ಕೇವಲ ಒಂದು ಸುಮದಾಯವನ್ನು ಓಲೈಕೆ ಮಾಡುವುದೇ ಜ್ಯಾತ್ಯಾತೀತ ನಿಲುವು, ಅದುವೇ ಸಹಜವಾದ ಎಂಬಂತೆ ಬಿಂಬಿಸುತ್ತಿದೆ.

ರಾಜ್ಯದಲ್ಲಿ ಕಳೆದ ಎರಡು ವರ್ಷದಿಂದ ಅಧಿಕಾರದಲ್ಲಿರುವ ಸಿದ್ದರಾಮಯ್ಯನವರ ಸರಕಾರ ತುಷ್ಟೀಕರಣದ ರಾಜಕಾರಣವನ್ನು ತನ್ನ ದೈನಂದಿನ ಆಡಳಿತದಲ್ಲಿ ಮಾಡಿಕೊಂಡು ಬಂದರೂ, ಅದನ್ನು ಸರಕಾರದ ನೀತಿಯ ಭಾಗವನ್ನಾಗಿ ಮಾಡೀತೋ ಅನ್ನುವ ಅನುಮಾನಗಳಿಗೆ ಈ ಸಾರಿಯ ಬಜೆಟ್ ಮೂಲಕ ಸ್ಪಷ್ಟವಾದ ಉತ್ತರ ಕೊಟ್ಟರು. ಮನಮೋಹನ್ ಸಿಂಗ್ ಅವರ ಮಾತುಗಳನ್ನು ತಮ್ಮ ಸರಕಾರದ ನೀತಿಗಳ ಮೂಲಕ ಅಕ್ಷರಷಹಃ ಜಾರಿಗೆ ತರುವ ಕೆಲಸ ಮಾಡಿದ್ದಾರೆ. ಮುಸ್ಲಿಮರಿಗೆ ಸರಕಾರಿ ಗುತ್ತಿಗೆಯಲ್ಲಿ ಮೀಸಲಾತಿ ಧರ್ಮದ ಆಧಾರದಲ್ಲಿ ಕಲ್ಪಿಸುವುದು ಸಂವಿಧಾನ ವಿರೋಧಿ ಎಂದು ಗೊತ್ತಿದ್ದರೂ ಜಾರಿ ಮಾಡಿದ್ದಾರೆ. ತಮ್ಮನ್ನು ತಾವು ಸಂವಿಧಾನ ಮತ್ತು ಬಾಬಾ

## ಸಂಪಾದಕೀಯ

ಸಾಹೇಬ್ ಅಂಬೇಡ್ಕರ್ ಅವರ ಪ್ರತಿಪಾದಿಸುವ ಮೌಲ್ಯಗಳ ರಕ್ಷಕರು ಎಂದು ಬಿಂಬಿಸಿಕೊಳ್ಳುವ ಸಿದ್ದರಾಮಯ್ಯ, ಈಗ ಇಂತಹ ನೀತಿಗಳನ್ನು ಜಾರಿಗೆ ತರುವ ಮೂಲಕ ತಮ್ಮದು ಕೇವಲ ಮುಸ್ಲಿಮರ ಓಲೈಕೆಗೆ ಇರುವ ಸರಕಾರವಾಗಿದ್ದು, ಉಳಿದ ಎಲ್ಲಾ ವಿಚಾರಗಳು ಚುನಾವಣೆಯಲ್ಲಿ ಜನಸಾಮಾನ್ಯರನ್ನು, ಅದರಲ್ಲೂ ದಲಿತರನ್ನು ದಿಕ್ಕು ತಪ್ಪಿಸಲು ಹಾಕಿಕೊಂಡ ಮುಖವಾಡ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಅಲ್ಪಸಂಖ್ಯಾತರ ಹೆಸರಿನಲ್ಲಿ ಕೇವಲ ಮುಸ್ಲಿಮರಿಗಷ್ಟೇ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ದುರಂತ ಎಂದರೆ ಹಿಂದಿನ ಬಿಜೆಪಿ ಸರಕಾರದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲಾ ಶಾಲೆಗಳ ಹೆಣ್ಣುಮಕ್ಕಳಿಗೆ ಆತ್ಮರಕ್ಷಣಾ ಕೌಶಲ್ಯವನ್ನು ಕಲ್ಪಿಸಿಕೊಡಲು ಓಬವ್ವ ಆತ್ಮರಕ್ಷಣಾ ಯೋಜನೆ ಜಾರಿಗೆ ಬಂದಿತ್ತು. ಈಗಿನ ಸಿದ್ದರಾಮಯ್ಯನವರ ಸರಕಾರ ಅದನ್ನು ನಿಲ್ಲಿಸಿ ಕೇವಲ ಮುಸ್ಲಿಮ್ ಹೆಣ್ಣುಮಕ್ಕಳಿಗಷ್ಟೇ ಈ ಯೋಜನೆಯನ್ನು ಸೀಮಿತಗೊಳಿಸಿದೆ.

ರಾಜ್ಯದ ಉಪಮುಖ್ಯಮಂತ್ರಿಯವರು ಸರಕಾರಿ ಕಾರ್ಯಕ್ರಮದಲ್ಲಿ ರಾಜಕೀಯ ಮುಖಂಡರು ಹೇಗೆ ವರ್ತಿಸಬೇಕು ಎನ್ನುವ ಶಿಷ್ಟಾಚಾರಗಳೆಲ್ಲವನ್ನು ಮೀರಿ ಮಾತನಾಡಿದ್ದು ನಿಜಕ್ಕೂ ಅತ್ಯಂತ ಖಂಡನೀಯ, ತಮ್ಮ ರಾಜಕೀಯ ಉದ್ದೇಶಗಳಿಗೆ ರಾಜ್ಯದ ಸಿನಿಮಾ ತಾರೆಯರು ಬೆಂಬಲ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ವೇದಿಕೆಯಲ್ಲಿ ನಿಂತು ನಟ್ಟು ಬೋಲ್ಟು ಟೈಟ್ ಮಾಡುತ್ತೇನೆ ಎನ್ನುವ ಅವರ ಈ ಮಾತು, ಉಪಮುಖ್ಯಮಂತ್ರಿ ಸ್ಥಾನಕ್ಕೆ ಗೌರವ ತರುವಂತಹುದಲ್ಲ. ಇದು ವೈಯುಕ್ತಿಕ ರಾಗ ದ್ವೇಷಗಳನ್ನು ಮಾಡದೆ ನಿಷ್ಪಕ್ಷಪಾತವಾಗಿ ಕರ್ತವ್ಯ ನಿರ್ವಹಿಸುವೆನೆಂಬ ತಾವು ಮಾಡಿದ ಪ್ರಮಾಣ ವಚನಕ್ಕೆ ವಿರುದ್ಧವಾದುದು ಎಂಬ ಅರಿವಿದ್ದರೂ ಮಾತನಾಡಿರುವುದು ಅಹಂಕಾರದ ಪರಮಾವಧಿಯೇ. ಈ ಹಿಂದೆ ಅನುದಾನ ಕೇಳಿ ಬರುವ ಶಾಸಕರು ತಮ್ಮ ಮುಂದೆ ತಗ್ಗಿ ಬಗ್ಗಿ ನಡೆಯಬೇಕು ಎಂದಿದ್ದು ಇನ್ನೂ ಜನರಿಂದ ಮಾಸಿಲ್ಲ ಎಂಬುದನ್ನು ಮಾನ್ಯ ಶಿವಕುಮಾರ್‌ರವರು ಅರಿಯಬೇಕು.

ಇನ್ನು ಚಿಕ್ಕಬಳ್ಳಾಪುರದ ಶಾಸಕ ಪ್ರದೀಪ್ ಈಶ್ವರ್ ಕೂಡ ಸರಕಾರಿ ಕಾರ್ಯಕ್ರಮದಲ್ಲಿ ಇದೇರೀತಿಯ ಉದ್ಧಟನದ ಉತ್ತರ ಹಾಗು ಬೇಜವಾಬ್ದಾರಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಇದಲ್ಲವನ್ನೂ ಗಮನಿಸಿದಾಗ ರಾಜ್ಯದಲ್ಲೀಗ ಇರುವುದು ಪ್ರಜಾಪ್ರಭುತ್ವ ಸರಕಾರವೋ ಅಥವಾ ಒಂದು ಅನಾಗರೀಕ ಸರಕಾರವೋ ಎನ್ನುವ ಅನುಮಾನವನ್ನು ಮೂಡಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿ ಮತದಾರರೇ ಮಹಾ ಪ್ರಭುಗಳು, ಅವರು ಇದೆಲ್ಲವನ್ನು ಗಮನಿಸುತ್ತಿದ್ದು ಸೂಕ್ತವಾದ ಸಮಯದಲ್ಲೂ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ಮರೆಯಬಾರದು.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ


**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ನಮ್ಮ ಜೀವನ ಸಾರ್ಥಕವಾಗುವುದು ನಾವು ಎಷ್ಟು ಸುಖ, ಸಂತೋಷದಿಂದ ಇದ್ದೇವೆ ಎಂಬುದರಿಂದಲ್ಲ.... ನಮ್ಮಿಂದಾಗಿ ಎಷ್ಟು ಜನ ಸುಖ ಶಾಂತಿ ಸಂತಸದಿಂದ ಇದ್ದಾರೆ ಎಂಬುದರಿಂದ**

**- ಡಾ. ಬಿ.ಆರ್. ಅಂಬೇಡ್ಕರ್**





**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞ ನಗರ, ಕಾಕ್ಸ್ ಟೌನ್,
ಬೆಂಗಳೂರು 560 005


## ಈ ಸಂಚಿಕೆಯಲ್ಲಿ





- **ದೀವಟಿಗೆ :** ಮಹಿಳಾ ಸಬಲೀಕರಣ – ಶಿಕ್ಷಣದ ಪ್ರವರ್ತಕಿ ಸಾವಿತ್ರಿ ಬಾಯಿ ಫುಲೆ .... 05
- ಮಾರಿಷಸ್‌ನಲ್ಲಿ ಮೋದಿ ಮೋಡಿ....................................................09
- ಅಧಿವೇಶನ ಹಗರಣಗಳ ಚರ್ಚೆಗೆ ಬಾರದ ಕಾಂಗ್ರೆಸ್ ಸರ್ಕಾರ.......................12
- ಹಿಂದುಗಳ ತುಚ್ಛೀಕರಣ – ಮುಸಲ್ಮಾನರ ತುಷ್ಟೀಕರಣ..............................15
- ಅಟಲ್‌ಜೀ ರವರೊಂದಿಗಿನ ಒಡನಾಟಗಳ ಒಂದಿಷ್ಟು ನೆನಪು .........................19
- ಮತ್ತೆ ಹುಟ್ಟಿ ಬಾರದ ಅಂಬೇಡ್ಕರರು! ..........................................25
- ಎಸ್‌ಸಿ–ಎಸ್‌ಟಿ, ಟಿಎಸ್‌ಪಿ ಹಣ ಲೂಟಿ ಮಾಡುತ್ತಿರುವ ಕಳ್ಳ ಕೈ.....................28
- ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ...........................................31
- ಮಾಸದ ಮಾಧುರ್ಯ 94ನೇ ಕಾರ್ಯಕ್ರಮದಲ್ಲಿ **'ಜನಪದ ಸಂಗೀತ'** ..............33
- **ಮನ್ ಕಿ ಬಾತ್**– ಪ್ರಾಣಿ ಮತ್ತು ಮಾನವ ಸಂಘರ್ಷ ...............................34



**ಸಮಸ್ತ ನಾಡಿನ ಜನತೆಗೆ**
**ಯುಗಾದಿ ಹಬ್ಬದ ಶುಭಾಷಯಗಳು**



**ಕಹಿಯಾದ ಬೇವಿನ ಅಂಚಿನಲ್ಲಿ ಬೆಲ್ಲದ ಸಿಂಚನ ಸಿಗಲಿ,**
**ನಿಮ್ಮ ಬಾಳಿನಲಿ ಹೊಸ ಚೇತನ, ಉತ್ಸಾಹ ನೆಮ್ಮದಿ ಇರಲಿ,**
**ಭರವಸೆಯ ಹೊಸ ಚೈತನ್ಯದೊಂದಿಗೆ ಮುಂದೆ ಸಾಗೋಣ...**

'ಸರ್ವೇ ಜನಾಃ ಸುಖಿನೋ ಭವಂತು'


ದೀವಟಿಗೆ

## ಮಹಿಳಾ ಸಬಲೀಕರಣ ಮತ್ತು ಶಿಕ್ಷಣದ ಪ್ರವರ್ತಕಿ

# ಸಾವಿತ್ರಿ ಬಾಯಿ ಫುಲೆ

ಡಾ. ಹರೀಶ್ ಆತ್ರೇಯ
ಕಾರ್ಯಕರ್ತರು

ಸಾವಿತ್ರಿಬಾಯಿ ಫುಲೆ (ಜನವರಿ 3, 1831 – ಮಾರ್ಚ್ 10, 1897) ಒಬ್ಬ ಪ್ರವರ್ತಕ ಭಾರತೀಯ ಸಮಾಜ ಸುಧಾರಕಿ, ಶಿಕ್ಷಣರಂಗದಲ್ಲಿ ಕಾರ್ಯನಿರ್ವಹಿಸಿದ ಸಾಧಕಿ ಮತ್ತು ಕವಿಯಿತ್ರಿ. 19 ನೇ ಶತಮಾನದಲ್ಲಿ ಮಹಿಳಾ ಹಕ್ಕುಗಳು ಮತ್ತು ಶಿಕ್ಷಣವನ್ನು ಪ್ರತಿಪಾದಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದವರು. ಮಹಾರಾಷ್ಟ್ರದ ನೈಗಾಂವ್‌ನಲ್ಲಿ ಜನಿಸಿದ ಅವರು ಭಾರತದ ಮೊದಲ ಮಹಿಳಾ ಶಿಕ್ಷಕಿಯಾದರು ಮತ್ತು ಅವರ ಪತಿ ಜ್ಯೋತಿರಾವ್ ಫುಲೆ ಅವರೊಂದಿಗೆ ಅಂಚಿನಲ್ಲಿರುವ ಸಮುದಾಯಗಳನ್ನು ಸಾಕ್ಷರರನ್ನಾಗಿಸಲು ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸಲು ಅವಿಶ್ರಾಂತವಾಗಿ ಶ್ರಮಿಸಿದರು.



### ಮಹಿಳಾ ಶಿಕ್ಷಣವನ್ನು ಪ್ರೋತ್ಸಾಹಿಸುವಲ್ಲಿ ಫುಲೆಯವರ ಸಾಹಸ

1848 ರಲ್ಲಿ, ಫುಲೆಸ್ ಪುಣೆಯಲ್ಲಿ ಭಿಡೆ ವಾಡಾದಲ್ಲಿ ಹುಡುಗಿಯರಿಗಾಗಿ ಮೊದಲ ಶಾಲೆಯನ್ನು ಸ್ಥಾಪಿಸಿದರು, ಇದು ಭಾರತೀಯ ಶಿಕ್ಷಣದಲ್ಲಿ ಮಹತ್ವದ ಮೈಲಿಗಲ್ಲೆಂದು ಪರಿಗಣಿಸಲಾಗಿದೆ. ಈ ಕಾರ್ಯವು ಮಹಿಳೆಯರಿಗೆ ಶಿಕ್ಷಣದ ಪ್ರವೇಶವನ್ನು ನಿರ್ಬಂಧಿಸುವ ಸಾಮಾಜಿಕ ರೂಢಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು. ತೀವ್ರ ವಿರೋಧ ಮತ್ತು ಸಾಮಾಜಿಕ ಬಹಿಷ್ಕಾರವನ್ನು ಎದುರಿಸುತ್ತಿದ್ದರೂ, ಸಾವಿತ್ರಿಬಾಯಿ ಮಹಿಳೆಯರು ಮತ್ತು ಅಂಚಿನಲ್ಲಿರುವ ಸಮುದಾಯಗಳಿಗೆ ಶೈಕ್ಷಣಿಕ ಅವಕಾಶಗಳನ್ನು ವಿಸ್ತರಿಸುವ ಮೂಲಕ ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ತರಬೇತಿ ಪಡೆದ ಶಿಕ್ಷಕರ ಅಗತ್ಯತೆಯನ್ನು ಅರ್ಥಮಾಡಿಕೊಂಡ ಸಾವಿತ್ರಿಬಾಯಿ ಮತ್ತು ಜ್ಯೋತಿರಾವ್ ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಆರಂಭಿಸುವ ಮೂಲಕ ಶೈಕ್ಷಣಿಕ ಕ್ಷೇತ್ರಕ್ಕೆ ತರಬೇತಿ ಪಡೆದ ಶಿಕ್ಷಕರ ಕೊರತೆಯನ್ನು ನೀಗಿಸಿದರು. ಇದರಿಂದಾಗಿ ಮಹಿಳೆಯರು ಬೋಧನಾ ವೃತ್ತಿಯನ್ನು ಮುಂದುವರಿಸಲು ಪ್ರೋತ್ಸಾಹಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು, ಇದರಿಂದಾಗಿ ಮಹಿಳಾ ಶಿಕ್ಷಣಕ್ಕೆ ಅನುಕೂಲಕರ ವಾತಾವರಣವನ್ನು ಬೆಳೆಸಲಾಯಿತು.

### ಸಾಮಾಜಿಕ ಸುಧಾರಣೆಗಳು ಮತ್ತು ಮಹಿಳೆಯವರ ಪರ ವಕಾಲತ್ತು

ಆಧುನಿಕ ಭಾರತದ ನಾರಿಶಕ್ತಿಗೆ ಕಳಸ ಪ್ರಾಯರಾಗಿ ಅಂದಿನ ಸಾಮಾಜಿಕ ಪಿಡುಗುಗಳಾಗಿದ್ದ ಬಾಲ್ಯ ವಿವಾಹ, ಸತಿಪದ್ದತಿ ಜಾತಿ ಮತ್ತು ಲಿಂಗ ಆಧಾರಿತ ತಾರತಮ್ಯದಂತಹ ಸಾಮಾಜಿಕ ಅನ್ಯಾಯಗಳ ವಿರುದ್ಧವಾಗಿಯೂ ಅವರು ಧ್ವನಿ ಎತ್ತುವ ಸಲುವಾಗಿ ಮಹಿಳಾ ಸೇವಾ ಮಂಡಲವನ್ನು ಸ್ಥಾಪಿಸಿದರು, ಮಹಿಳೆಯರು ತಮ್ಮ ನೋವು ಸಂಕಟಗಳನ್ನು ಮುಕ್ತವಾಗಿ ವ್ಯಕ್ತಪಡಿಸಲು ಸಂಘಟಿತರಾಗಿ ಕೆಲಸ ಮಾಡಲು ಇದು ಒಂದು ವೇದಿಕೆಯಾಯಿತು.

ವಿಧವಾ ಪುನರ್ವಿವಾಹ, ಗರ್ಭಿಣಿ ವಿಧವೆಯರ ಬದುಕಿಗೆ ನೆರವು, ಇವುಗಳ ಬಗ್ಗೆ ಸಮಾಜದಲ್ಲಿದ್ದ ಪೂರ್ವಾಗ್ರಹವನ್ನು ತೊಡೆದು ಹಾಕುವಲ್ಲಿ ನಿರಂತವಾಗಿ ಕೆಲಸ ಮಾಡಿದರು. ಮಹಿಳೆಯರನ್ನು ಸಾಮಾಜಿಕ ಜೀವನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರೇಪಿಸಿದರು. ಸಾವಿತ್ರಿಬಾಯಿ ಫುಲೆಯವರು ಓರ್ವ ಬ್ರಾಹ್ಮಣ ವಿಧವೆಯ ಮಗುವನ್ನು ದತ್ತು ಪಡೆಯುವ ಮೂಲಕ ಸಮಾಜಕ್ಕೆ ಮಾದರಿಯಾದರು.

### ಸಾಹಿತ್ಯ ಕ್ಷೇತ್ರದಲ್ಲಿ ಫುಲೆಯವರ ಕೊಡುಗೆ

ಸಾವಿತ್ರಿ ಬಾಫುಲೆಯವರದ್ದು ಬಹುಮುಖಿ ಪ್ರತಿಭೆಯುಳ್ಳ ವ್ಯಕ್ತಿತ್ವವಾಗಿತ್ತು. ಅವರು ಓರ್ವ ಸಮಾಜ ಸುಧಾರಕರು, ಶಿಕ್ಷಕಿ, ಹಾಗು ಶಿಕ್ಷಣ ತಜ್ಞರಾಗಿರುವುದರ ಜೊತೆಗೆ ಒಬ್ಬ ಉತ್ತಮ ಸಾಹಿತಿಯೂ ಆಗಿದ್ದರು. ಅವರು ಸಬಲೀಕರಣದ ವಿಚಾರಗಳನ್ನು ತಮ್ಮ ಕವಿತೆಗಳ ಮೂಲಕವೂ ಹಂಚಿಕೊಂಡಿದ್ದಾರೆ. ಈ ಮೂಲಕ ಅವರು ಆಧುನಿಕ ಭಾರತದ ಮೊದಲ ತಲೆಮಾರಿನ ಮಹಿಳಾ ಲೇಖಕರಲ್ಲಿ ಒಬ್ಬರೆನಿಸಿದ್ದಾರೆ.

1854ರಲ್ಲಿ ಮಹಿಳೆಯರ ಬಗೆಗಿನ ಶೋಷಣೆಗಳ ಕುರಿತು ರಚಿಸಿದ ಕಾವ್ಯ ಫುಲೆ ಎನ್ನುವ ಕವನ ಸಂಕಲನವನ್ನು ಹೊರತರುತ್ತಾರೆ. 1892ರಲ್ಲಿ ಬವನ್ ಕಾಶಿ ಸುಬೋಧ ರತ್ನಾಕರ್ ಎನ್ನುವ ಕೃತಿಯನ್ನು ಹೊರತಂದರು, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಶಿಕ್ಷಣದ ಮಹತ್ವದ ವಿಷಯಗಳನ್ನು ಈ ಕೃತಿಯಲ್ಲಿ ಫುಲೆ ಚರ್ಚಿಸಿದ್ದಾರೆ ತಮ್ಮ ಬರಹಗಳ ಮೂಲಕ, ಅವರು ದಮನಿತ ವರ್ಗಗಳನ್ನು ಅವರ ಹಕ್ಕುಗಳು ಮತ್ತು ಅವರು ಗೌರವಯುತವಾದ ಬದುಕನ್ನು ಕಟ್ಟಿಕೊಳ್ಳಲು ನಿರಂತರವಾಗಿ ಪ್ರೇರಣದಾಯಿಯಾದರು. ಮುಂದಿನ ದಿನಗಳಲ್ಲಿ ಇವರ ಬರಹಗಳು ಡಾ. ಬಿ.ಆರ್. ಅಂಬೇಡ್ಕರ್ ಅವರ ಮೇಲೂ ಪ್ರಭಾವ ಬೀರಿತ್ತು.







# ಜನರ ರಕ್ಷಕ ಜನೌಷಧಿಗೆ 10 ದಶಮಾನೋತ್ಸವ ಸಂಭ್ರಮ..!!!

## ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ

**ಕೋಟ್ಯಾಂತರ ಕುಟುಂಬಗಳ ವೈದ್ಯಕೀಯ ವೆಚ್ಚವನ್ನು ಶೇ.90 ರಷ್ಟು ಕಡಿಮೆ ಮಾಡಿದ ಪ್ರಧಾನ ಮಂತ್ರಿ ಜನೌಷಧಿ ಯೋಜನೆ**



**ಡಾ. ಲಕ್ಷ್ಮಣ್ ಹೆಚ್,**
ರಾಜ್ಯ ಸಮಿತಿ ಸದಸ್ಯರು,
ರಾಜ್ಯ ಬಿಜೆಪಿ ವೈದಕೀಯ ಪ್ರಕೋಷ್ಠ

**ಪ್ರ**ಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಸರ್ಕಾರದಲ್ಲಿ ಜಾರಿಯಾದ ಯೋಜನೆಗಳಲ್ಲಿ ಭಾರತದ ಭವಿಷ್ಯವನ್ನು ರೂಪಿಸಬಲ್ಲ, ದೂರದೃಷ್ಟಿತ್ವ ಸಾಕಷ್ಟಿದೆ. ಕೋಟ್ಯಾಂತರ ಕುಟುಂಬಗಳ ವೈದ್ಯಕೀಯ ವೆಚ್ಚವನ್ನು ಶೇ.90 ರಷ್ಟು ಕಡಿಮೆ ಮಾಡಿದ ಪ್ರಧಾನ ಮಂತ್ರಿ ಜನೌಷಧಿ ಯೋಜನೆ ದೇಶದ ಜನಮೆಚ್ಚಿದ ಯೋಜನೆಯಾಗಿದೆ.

ಭಾರತದ ಪ್ರತಿಯೊಬ್ಬ ನಾಗರಿಕರಿಗೂ ಕೈಗೆಟುಕುವ ಬೆಲೆಯಲ್ಲಿ ಗುಣಮಟ್ಟದ ಔಷಧವನ್ನು ಒದಗಿಸಲು ಇದು ಬಹಳ ಅಗತ್ಯವಾಗಿತ್ತು. ಬ್ರಾಂಡೆಡ್ ಔಷಧಗಳು ತುಂಬಾ ದುಬಾರಿಯಾಗಿದ್ದು ಬಡವರಿಗೆ ಸುಲಭವಾಗಿ ಸಿಗುತ್ತಿರಲಿಲ್ಲ. ಆದರೆ ವಿಶೇಷ ಔಷಧಿಗಳಿಗೆ ಸರಿಸಮಾನವಾಗಿರುವ ಜೆನೆರಿಕ್ ಔಷಧಗಳು ತುಂಬಾ ಅಗ್ಗವಾಗಿವೆ. ಆದ್ದರಿಂದ ಸಮಂಜಸವಾದ ಬೆಲೆಯ ಉತ್ತಮ ಗುಣಮಟ್ಟದ ಜೆನೆರಿಕ್ ಔಷಧವು ಮಾರುಕಟ್ಟೆಯಲ್ಲಿ ಲಭ್ಯವಾದರೆ, ಅದು ಬಡವರಿಗೆ ಹೆಚ್ಚಾಗಿ ಪ್ರಯೋಜನವನ್ನು ನೀಡುತ್ತದೆ. ಆ ಕಾರಣಕ್ಕಾಗಿ ಶ್ರೀ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರದಿಂದ ಈ ಯೋಜನೆಯನ್ನು ಪ್ರಾರಂಭಿಸಲಾಯಿತು.

## ಮೊದಲೇ ಇತ್ತು - ಆದರೆ ಇರಲಿಲ್ಲ

ಆರಂಭದಲ್ಲಿ ಇದನ್ನು ಯುಪಿಎ ಸರ್ಕಾರವು 2008 ರಲ್ಲಿ 11 ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಪ್ರಾರಂಭಿಸಿತ್ತು. ಆದರೆ ಜನರಿಗೆ ಉಪಯೋಗವಾಗುವಂತಹ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡುವ ಆಲೋಚನೆಗಳು ಯುಪಿಎ ಸರ್ಕಾರಕ್ಕಿರಲಿಲ್ಲ. ಅದಕ್ಕೆ ಯುಪಿಎ ಸರ್ಕಾರದ ವೈಫಲ್ಯ ಆದ ಯೋಜನೆಗಳ ಸಾಲಿಗೆ ಈ ಯೋಜನೆಯು ಸೇರಿತ್ತು. ಯೋಜನೆಯ ಅವೈಜ್ಞಾನಿಕ ಜಾರಿಯಿಂದ ಯುಪಿಎ ಕಾಲದ ಜನೌಷಧಿ ಯೋಜನೆಯು ವಿಫಲವಾಗಿತ್ತು.

## ಮೋದಿ ಸರ್ಕಾರದಿಂದ ಹೊಸ ರೂಪ

ಪ್ರಧಾನಿ ಶ್ರೀ ಮೋದಿಯವರ ನೇತೃತ್ವದ ಸರ್ಕಾರ ಬಂದ ನಂತರ ಇಡೀ ಯೋಜನೆಯನ್ನು ಪರಿಷ್ಕರಿಸಲಾಯಿತು ಮತ್ತು ಹೊಸ ರೂಪ ಪಡೆಯಿತು. ಎಲ್ಲಾ ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಒಳಗೊಂಡಂತೆ ಯೋಜನೆಯನ್ನು ದೇಶಾದ್ಯಂತ ವಿಸ್ತರಿಸಲು ಒಂದು ಕ್ರಿಯಾ ಯೋಜನೆಯುನ್ನು ರೂಪಿಸಲಾಯಿತು. ಜೆನೆರಿಕ್ ಔಷಧಿಗಳ ಪಟ್ಟಿಯುನ್ನು ಪುನರಚಿಸಲಾಯಿತು. ಜೀವರಕ್ಷಕ ಔಷಧಿಗಳು ಪ್ರಧಾನಮಂತ್ರಿ ಜನೌಷಧಿ ಮಳಿಗೆಗಳಲ್ಲಿ ಲಭ್ಯವಾಗುವಂತೆ ಮಾಡಲಾಯಿತು.



## ಅನಂತ ಕುಮಾರ್ ಸೂತ್ರಧಾರಿ

ರಾಜಕೀಯ ಮುತ್ಸದ್ದಿ, ಬಡವರ ಬಗ್ಗೆ ಕಾಳಜಿ ಹೊಂದಿದ್ದ ಅದಮ್ಯ ಚೇತನ ಬೆಂಗಳೂರಿನ ಅನಂತಕುಮಾರ್ ಈ ಜನೌಷಧಿಯ ಪ್ರಮುಖ ರೂವಾರಿಗಳು. ರಾಜಕೀಯದಲ್ಲಿ ಸಕ್ರಿಯವಾಗಿದ್ದ ದಿ. ಅನಂತಕುಮಾರ್‌ಗೆ ಸಾಮಾನ್ಯ ಜನರ ಪರಿಸ್ಥಿತಿಯ ಅರಿವಿತ್ತು. ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ಗುಣಮಟ್ಟದ ಔಷಧಿಗಳು ಸಿಗಬೇಕೆಂಬುದು ಅನಂತ ಕುಮಾರ್ ಅವರ ಮಹತ್ವಾಕಾಂಕ್ಷೆಯಾಗಿತ್ತು. ಅದರ ಪರಿಣಾಮ ಜನೌಷಧಿ ಯೋಜನೆಯ ರೂಪುರೇಷೆಯನ್ನು ತಯಾರಿಸಿ, ಅದರ ಪ್ರಮುಖ ಸೂತ್ರಧಾರರಾಗಿ ಮುಂದೆ ನಿಂತು ಯೋಜನೆ ಜಾರಿಗೊಳಿಸುವಲ್ಲಿ ಯಶಸ್ವಿಯಾದರು. ಆಗ ಸಚಿವರಾಗಿದ್ದ ಅನಂತಕುಮಾರ್ ರವರು ಈ ಯೋಜನೆಯನ್ನು ಆಸಕ್ತಿವಹಿಸಿ ಸಮರ್ಪಕವಾಗಿ ಜಾರಿಯಾಗುವುದಕ್ಕೆ ಕಾರಣರಾದರು.



## ಯೋಜನೆಗೆ ದಶಮಾನೋತ್ಸವ ಸಂಭ್ರಮ

ಜನಮೆಚ್ಚಿದ ಜನೌಷಧಿ ಯೋಜನಗೆ ಈಗ ದಶಮಾನೋತ್ಸವ ಸಂಭ್ರಮ. ಅದೆಷ್ಟೋ ಬಡವರ ಜೀವ ಉಳಿಸಿದ, ಆರ್ಥಿಕವಾಗಿ ಕಾಪಾಡಿದ ಈ ಯೋಜನೆಯನ್ನು ಸಂಭ್ರಮಿಸಲು ಪ್ರತಿ ವರ್ಷ ಮಾರ್ಚ್ 7 ರಂದು ಜನೌಷದಿ ದಿನಾಚರಣೆ ಆಚರಿಸಲು ಕೇಂದ್ರದ ಆರೋಗ್ಯ ಸಚಿವರಾದ ಶ್ರೀ ಜಗತ್ ಪ್ರಕಾಶ್ ನಡ್ಡಾ ರವರು ಹೇಳಿದ್ದಾರೆ. ಅದರಂತೆ ಪ್ರತಿ ರಾಜ್ಯದಲ್ಲೂ ಈ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.

## ಪ್ರಧಾನಮಂತ್ರಿ ಭಾರತೀಯ ಸಾರ್ವಜನಿಕ ಔಷಧ ಯೋಜನೆ

ಈ ಯೋಜನೆಯನ್ನು 2016 ರಲ್ಲಿ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನಾ (PMBJP) ಎಂದು ಮರುನಾಮಕರಣ ಮಾಡಲಾಯಿತು. ಸಾರ್ವಜನಿಕರಿಗೆ ಕೈಗೆಟುಕುವ ದರದಲ್ಲಿ ಅತ್ಯಂತ ಗುಣಮಟ್ಟದ ಜನೌಷಧಿಯುನ್ನು ಒದಗಿಸುವ ಒಂದು ಸದುದ್ದೇಶದಿಂದ ಈ ಯೋಜನೆಯನ್ನು ಹಂತ ಹಂತವಾಗಿ ದೇಶದ ಎಲ್ಲಾ ಭಾಗಗಳಿಗೆ ವಿಸ್ತರಿಸಲು ಯೋಜನೆಯನ್ನು ರೂಪಿಸಲಾಯಿತು. ಗುಣಮಟ್ಟ ಮತ್ತು ಪರಿಣಾಮಕಾರಿತ್ವ ಎರಡರಲ್ಲೂ ಹೆಚ್ಚು ದುಬಾರಿ ಬ್ರಾಂಡೆಡ್ ಔಷಧಿಗಳಿಗೆ ಸಮಾನವಾಗಿರುತ್ತದೆ.

BUREAU OF PHARMA PUBLIC SECTOR UNDERTAKINGS OF INDIA (BPPI) ಯನ್ನು ಭಾರತ ಕೇಂದ್ರದ ಮೋದಿಸರ್ಕಾರವು ಔಷಧಿ ಇಲಾಖೆ ಅಡಿಯಲ್ಲಿ ಸ್ಥಾಪಿಸಲಾಗಿದೆ. ಎಲ್ಲಾ CPSU ಗಳ ಬೆಂಬಲದೊಂದಿಗೆ ಕೇಂದ್ರದ ಮೂಲಕ ಜನೌಷಧ ಖರೀದಿ ಪೂರೈಕೆ ಮತ್ತು ಮಾರುಕಟ್ಟೆಯನ್ನು ಸಂಘಟಿಸಲು ಈ ಯೋಜನೆಯನ್ನು ಆರಂಭದಲ್ಲಿ ಕೇಂದ್ರ ಸರ್ಕಾರವು ಮತ್ತು ಭಾರತದ

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು 2015 ರಲ್ಲಿ ಮರುಪ್ರಾರಂಭಿಸಿದರು. ದೇಶದ ವಿವಿಧ ರಾಜ್ಯ ಮತ್ತು ಜಿಲ್ಲೆಯಲ್ಲಿ ಜನೌಷಧಿ ಮೆಡಿಕಲ್ ಸ್ಟೋರ್‌ಗಳನ್ನು ವಿಶೇಷ ಮಾರಾಟ ಮಳಿಗೆಗಳ ಮೂಲಕ ಜನರಿಕ್ ಔಷಧಿಗಳನ್ನು ಮಾರಾಟ ಮಾಡುವ ಮೂಲಕ ಈ ಅಭಿಯಾನವನ್ನು ಕೈಗೊಳ್ಳಲಾಯಿತು. ಸೆಪ್ಟೆಂಬರ್ 2015 ರಲ್ಲಿ ಸರ್ಕಾರವು ಪ್ರಧಾನಮಂತ್ರಿ ಜನೌಷಧಿ ಯೋಜನೆ (PMJAY) ಎಂದು ಪರಿಷ್ಕರಿಸಲಾಯಿತು. PMJAY ಯೋಜನೆಗೆ ಮತ್ತಷ್ಟು ಉತ್ತೇಜನೆ ನೀಡಲು 2016 ರಲ್ಲಿ ಇದನ್ನು ಮತ್ತೆ ಪ್ರಧಾನಮಂತ್ರಿ ಭಾರತೀಯ ಜನೌಷಧ ಯೋಜನೆ (PM BJY) ಎಂದು ಮರುನಾಮಕರಣ ಮಾಡಲಾಯಿತು.

ಜನೌಷಧಿ ಕೇಂದ್ರದಲ್ಲಿ ಬ್ರಾಡೆಂಡ್ ಔಷಧಗಳ ಸಮಾನ ಬೆಲೆಗಿಂತ 50-90% ಕಡಿಮೆ ದರದಲ್ಲಿ ಜನರಿಕ್ ಔಷಧಿಗಳನ್ನು ನೀಡಲಾಗುತ್ತಿದೆ. ಕಡಿಮೆ ಆದಾಯ ಇರುವ ಕುಟುಂಬಗಳಿಗೆ ಅತ್ಯಂತ ಪ್ರಯೋಜನೆ ಮತ್ತು ಉಪಕಾರಿಯಾಗಿದೆ. ಅಲ್ಲದೆ ಈ ಯೋಜೆನೆ ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ವೈದ್ಯಕೀಯ ವೆಚ್ಚ ಕಡಿಮೆ ಮಾಡಿದ ಆರೋಗ್ಯ ರಕ್ಷಕವಾಗಿದೆ.




## ಯೋಜನೆಯ ಹಾದಿ

- ದೇಶದಲ್ಲಿ 2024-25 ರಲ್ಲಿ ಸರಿಸುಮಾರು 14,080 ಜನೌಷಧಿ ಕೇಂದ್ರಗಳಿವೆ. ಈ ಯೋಜನೆಯಡಿ ಕರ್ನಾಟಕದಲ್ಲಿ 1,225 ಜನೌಷಧಿ ಕೇಂದ್ರಗಳಿವೆ.
- ಪ್ರಧಾನಮಂತ್ರಿ ಕನಸಿನ ಯೋಜನೆಯನ್ನು ಪರಿಣಾಮಕಾರಿಯಾಗಿಸಲು ಸ್ತ್ರೀಯರ ಸಬಲಿಕರಣಕ್ಕಾಗಿ ಶೇ.35 ಮಹಿಳೆಯರಿಗೆ ಜನೌಷಧ ಕೇಂದ್ರಗಳ ನಿರ್ವಹಣೆಯನ್ನು ನೀಡಲಾಗಿದೆ.
- 2016 ರಲ್ಲಿ ಒಟ್ಟು 199 ಜನೌಷಧಿಗಳ ಮಾರಾಟದಿಂದ ಪ್ರಾರಂಭವಾದ ಈ ಯೋಜನೆಯಡಿ, 2017 ರಲ್ಲಿ 98 ರೀತಿ ಕಾಯಿಲೆಗಳಿಗೆ 700 ಕ್ಕೂ ಹೆಚ್ಚು ಜನರಿಕ್ ಔಷಧಿಗಳನ್ನು ಮತ್ತು 164 ಶಸ್ತ್ರಚಿಕಿತ್ಸೆ ವಸ್ತುಗಳನ್ನು ಮಾರಾಟ ವ್ಯಾಪ್ತಿಗೆ ಸೇರಿಸಲಾಯಿತು.
- ಮಾರ್ಚ್ 2018 ರಲ್ಲಿ ಸುವಿಧ ಹೆಸರಿನಲ್ಲಿ ಮಹಿಳೆಯರಿಗೆ ನೈರ್ಮಲ್ಯಕರವಸ್ತ್ರ (Sanitary Napkin)ಗಳನ್ನು ಮಾರಾಟವನ್ನು ಪ್ರಾರಂಭಿಸಲಾಯಿತು.
- 2019 ರಲ್ಲಿ 900 ವಿಧದ ಜನೌಷಧಿಗಳನ್ನು ಮತ್ತು 164 ಶಸ್ತ್ರಚಿಕಿತ್ಸೆ ವಸ್ತುಗಳ ಮಾರಾಟವನ್ನು ಪ್ರಾರಂಭಿಸಲಾಯಿತು.
- 2024 ರ ಹೊತ್ತಿಗೆ 2047 ಬಗೆಯ ಜೆನರಿಕ್ ಔಷಧಿ ಮತ್ತು 300 ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆ ಉತ್ಪನ್ನಗಳು ಇಡೀ ದೇಶಾದ್ಯಂತ ಮಾರಾಟ ಮಾಡಲಾಗುತ್ತಿದೆ.
- ಪ್ರಸ್ತುತ 5 ಆಯುರ್ವೇದ ಉತ್ಪನ್ನ ಗಳನ್ನೂ ಸಹ ಮಾರಾಟದ ವ್ಯಾಪ್ತಿಗೆ ತರಲಾಗಿದೆ.
- ಈ ಯೋಜನೆಯಲ್ಲಿ ಕಳೆದ 10 ವರ್ಷಗಳಲ್ಲಿ 5,600 ಕೋ.ರೂಗಳಿಗೂ ಹೆಚ್ಚು ಮೌಲ್ಯದ ಜನೌಷಧಿಗಳನ್ನು ಮಾರಾಟ ಮಾಡಲಾಗಿದೆ. 30,000 ಕೋ.ರೂ. ಉಳಿತಾಯವಾಗಿದೆ ಸುಮಾರು ಶೇ.50-90% ರವರೆಗೆ ಕಡಿಮೆ ಬೆಲೆಗೆ ಔಷಧಿಗಳು ಸಿಗುತ್ತದೆ.
- ಜನೌಷಧಿ ಕೇಂದ್ರದಲ್ಲಿ Sanitary Napkin ಗಳನ್ನು ಒಂದು ರೂಪಾಯಿಗೆ ಮಾರಾಟ ಮಾಡಲಾಗಿದೆ. ಇಲ್ಲಿಯವರೆಗೆ 19 ಕೋಟಿ Napkin ಗಳು ದೇಶಾದ್ಯಂತ ಮಾರಾಟವಾಗಿದೆ.



# ಮಾರಿಷಸ್‌ನಲ್ಲಿ ಮೋದಿ ಮೋಡಿ

**ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಮಾರಿಷಸ್ ಭೇಟಿ ಮಾರಿಷಸ್-ಭಾರತ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ವದ ಹೆಜ್ಜೆಯಾಗಿದ್ದು, ಭದ್ರತೆ, ಆರ್ಥಿಕತೆ, ಶಿಕ್ಷಣ ಮತ್ತು ಸಾಂಸ್ಕೃತಿಕ ಸಹಕಾರವನ್ನು ಹೊಸ ಹಂತಕ್ಕೆ ಕೊಂಡೊಯ್ಯಲಿದೆ. ಭವಿಷ್ಯದಲ್ಲಿ ಹಿಂದೂ ಮಹಾಸಾಗರ ಪ್ರದೇಶದ ರಾಜಕೀಯ ಸಮತೋಲನದ ಮೇಲೆ ಇದರ ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ.**



ಮೋದಿಯವರ ಮತ್ತೊಂದು ವಿದೇಶಿ ಪ್ರವಾಸ ಅಭೂತಪೂರ್ವ ಯಶಸ್ಸನ್ನು ಕಂಡಿದೆ. ಮೋದಿ ಮಾರಿಷಸ್‌ಗೆ ಭೇಟಿ ನೀಡಿದ್ದು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದ್ದು, ಎರಡು ದೇಶಗಳಿಗೆ ಉಪಯುಕ್ತವಾಗಲಿದೆ. ಈ ಭೇಟಿಯು ಮೋದಿಯವರ ವಿದೇಶಿ ಪ್ರವಾಸದ ಹೆಗ್ಗುರುತುಗಳ ಸಾಲಿನಲ್ಲಿ ಒಂದಾಗಿದೆ ಎಂದರೆ ತಪ್ಪಿಲ್ಲ.

## ಸ್ವಾಗತಕ್ಕೆ ಬಂದ ಮಾರಿಷಸ್ ಪ್ರಧಾನಿ

ಮಾರಿಷಸ್‌ನ ರಾಷ್ಟ್ರೀಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲು ಮೋದಿ ರವರಿಗೆ ಪೋರ್ಟ್ ಲೂಯಿಸ್‌ಗೆ ಬಂದಿಳಿದ ಮೋದಿಯವರಿಗೆ ಸ್ವತಃ ಮಾರಿಷಸ್ ಪ್ರಧಾನಿ ನೇಮಿಚಂದ್ರ ರಾಮ್‌ಗೂಲಾಮ್ ಅವರು ಅದ್ದೂರಿ ಸ್ವಾಗತ ನೀಡಿದರು. ಭಾರತೀಯರ ಮೂಲದವರು ಮೋದಿ ಆಗಮನವನ್ನು ಹಬ್ಬದ ರೀತಿಯಲ್ಲಿ ಸ್ವಾಗತಿಸಿದ್ದು, ಭಾರತೀಯ ಪರಂಪರೆ, ಸಂಗೀತ, ನೃತ್ಯ ಮತ್ತು ಕಲೆಗಳ ಸಮನ್ವಯದ ಪ್ರದರ್ಶನದ ಮೂಲಕ ಭವ್ಯ ಸ್ವಾಗತ ನೀಡಿದರು.

## ಕಡಲ ಭದ್ರತೆಗೆ ಮೋದಿ ಕರೆ

ಮಾರಿಷಸ್ ರಾಜಧಾನಿ ಪೋರ್ಟ್ ಲೂಯಿಸ್‌ನಲ್ಲಿ ಹಮ್ಮಿಕೊಳ್ಳಲಾದ ಭಾರತೀಯ ಸಮುದಾಯದ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ ಮಾರಿಷಸ್ ಭಾರತದ ಸಾಗರ್ ನೋಟದಲ್ಲಿದೆ' ಎಂದು ಬಣ್ಣಿಸಿ, ಹಿಂದೂ ಮಹಾಸಾಗರದ ಸುರಕ್ಷತೆಗೆ ಕರೆ ನೀಡಿದರು. 'ಸಾಗರ್' (ಸೆಕ್ಯುರಿಟಿ ಅಂಡ್ ಗ್ರೋಥ್ ಫಾರ್ ಆಲ್ ಇನ್ ದಿ ರೀಜಿಯನ್) ದೃಷ್ಟಿಕೋನವನ್ನು ಉಲ್ಲೇಖಿಸಿ, ಇದು ಹಿಂದೂ ಮಹಾಸಾಗರ ಪ್ರದೇಶದ ಕಡಲ ಭದ್ರತೆ, ಆರ್ಥಿಕ ಸಹಕಾರ, ಸುಸ್ಥಿರ ಅಭಿವೃದ್ಧಿಯನ್ನು ಹೆಚ್ಚಿಸುವ ಗುರಿ ಹೊಂದಿರುವ ಕಾರ್ಯತಂತ್ರದ ಭಾಗವಾಗಿದೆ. ಮೂಲಸೌಕರ್ಯ ಯೋಜನೆಗಳನ್ನು ಹೊಂದಿರುವ ದೇಶಗಳನ್ನು ಆಕರ್ಷಿಸಿ ನಂತರ ಅವುಗಳನ್ನು ಸಾಲದ ಸುಳಿಯಲ್ಲಿ ಸಿಲುಕಿಸುವ ಚೀನಿ ಹೂಡಿಕೆಗಳಿಗೆ ಪ್ರತಿಯಾಗಿ ಕಾರ್ಯನಿರ್ವಹಿಸುವ ಗುರಿಯನ್ನು ಈ ಸಾಗರ್ ಹೊಂದಿದೆ ಎಂದರು.

ಭಾರತ ಮತ್ತು ದ್ವೀಪರಾಷ್ಟ್ರದ ಐತಿಹಾಸಿಕ ಸಂಬಂಧವನ್ನು ಸ್ಮರಿಸಿದ ಮೋದಿ, ಬ್ರಿಟಿಷ್ ವಸಾಹತುಶಾಹಿಗಳಿಂದ ಚಿತ್ರಹಿಂಸೆ ಕೊಡಿಸಲು ಭಾರತೀಯ ಸ್ವಾತಂತ್ರ್ಯ ಹೋರಾಟಗಾರರನ್ನು ಮೋಸದಿಂದ ಈ ದ್ವೀಪರಾಷ್ಟ್ರಕ್ಕೆ ಕರೆ ತರಲಾಗಿತ್ತು. ಅಂಥ ಕಠಿಣ ಸಮಯದಲ್ಲಿ ಭಗವಾನ್ ರಾಮ ಮತ್ತು ರಾಮಚರಿತಮಾನಸ ಅವರಿಗೆ ಶಕ್ತಿ-ಸ್ಫೂರ್ತಿ ನೀಡಿತ್ತು. ಇಲ್ಲಿ 1998ರಲ್ಲಿ ನಡೆದ ಅಂತಾರಾಷ್ಟ್ರೀಯ ರಾಮಾಯಣ ಸಮ್ಮೇಳನದಲ್ಲಿ ಭಾಗವಹಿಸಲು ಬಂದಿದ್ದೆ, ಅಂದಿನ ಆ ಅನುಭವ ಇಂದಿಗೂ ಹಾಗೇ ಇದೆ ಎಂದು ನೆನಪಿಸಿಕೊಂಡರು.

## ಮೋದಿಗೆ ಮಾರಿಷಸ್‌ನ ಅತ್ಯುನ್ನತ ಗೌರವ

ಮಾರಿಷಸ್ ಅಧ್ಯಕ್ಷ ಧರಂ ಗೋಕುಲ್, ಮೋದಿ ಅವರಿಗೆ ಮಾರಿಷಸ್ ಅತ್ಯುನ್ನತ ಗೌರವ 'ದ ಗ್ರಾಂಡ್ ಕಮಾಂಡರ್ ಆಫ್ ದ ಆರ್ಡರ್ ಆಫ್ ದ ಸ್ಟಾರ್ ಅಂಡ್ ಕೀ ಆಫ್ ದ ಇಂಡಿಯನ್ ಓಷನ್' ಪ್ರದಾನ ಮಾಡಿದರು. ಪ್ರಧಾನಿ ಮೋದಿ ಈ ಗೌರವಕ್ಕೆ ಪಾತ್ರರಾದ

ಮೊದಲ ಭಾರತೀಯ ಹಾಗೂ ಐದನೇ ದೇಶಿ ಪ್ರಜೆ ಎನಿಸಿಕೊಂಡಿದ್ದಾರೆ. ಈ ಕುರಿತು ಸಂತಸ ವ್ಯಕ್ತಪಡಿಸಿದ ಮೋದಿ, 'ಇದು 140 ಕೋಟಿ ಭಾರತೀಯರಿಗೆ ಸಂದ ಗೌರವ' ಎಂದಿದ್ದಾರೆ. ಈ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಒಟ್ಟು 21 ರಾಷ್ಟ್ರಗಳ ಅತ್ಯುನ್ನತ ಗೌರವಕ್ಕೆ ಭಾಜನರಾದಂತಾಗಿದೆ.

## ಕುಂಭಮೇಳದ ಜಲ ಉಡುಗೊರೆ



ಮಾರಿಷಸ್‌ನ ಅಧ್ಯಕ್ಷ ದಂಪತಿಗಳಿಗೆ ಮಹಾಕುಂಭ ಮೇಳದ ಪವಿತ್ರ ಜಲ, ಬಿಹಾರದ ಪ್ರಸಿದ್ಧ ಖಾದ್ಯವಾದ ಮಖಾನದ ಜೊತೆ ವಿಶೇಷ ಶೈಲಿಯ ಬನಾರಸ್‌ನ ಸಿರೆಯನ್ನು ಗುಜರಾತಿನ ಪಾರಂಪರಿಕ ಸಡೆಲಿ ಪೆಟ್ಟಿಗೆಯಲ್ಲಿ ಹಾಕಿ ಉಡುಗೊರೆಯಾಗಿ ನೀಡುವ ಮೂಲಕ ಹಿಂದೂ ಸಂಸ್ಕೃತಿಯ ಮೌಲ್ಯವನ್ನು ಪ್ರಚುರ ಪಡಿಸಿದರು.ಇನ್ನು ಪ್ರಧಾನಿಯ ಭೇಟಿ ಸಂದರ್ಭದಲ್ಲಿ ಹಲವು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಹಿಂದೂ ಮಹಾಸಾಗರದಲ್ಲಿ ಸ್ಥಿರತೆಯನ್ನು ಉಳಿಸಲು ಭಾರತ ಮತ್ತು ಮಾರಿಷಸ್ ಒಟ್ಟಿಗೆ ಕಾರ್ಯನಿರ್ವಹಿಸುವ ಒಪ್ಪಂದ ಮಾಡಿಕೊಂಡಿದ್ದು, ಸಮುದ್ರದ ಮಾರ್ಗಗಳ ಸುರಕ್ಷತೆ, ಸಮುದ್ರದ ಬಾಹ್ಯಾಕ್ರಮಣ ತಡೆಗಟ್ಟಲು ಉಭಯ ದೇಶಗಳು ಜಂಟಿ ನೌಕಾ ಅಭ್ಯಾಸಗಳು ಮತ್ತು ಬುದ್ಧಿಮತ್ತೆ ಹಂಚಿಕೊಳ್ಳುವ ಬಗ್ಗೆ ಒಪ್ಪಂದ ಏರ್ಪಟ್ಟಿದೆ. ಭಾರತ ಮತ್ತು ಮಾರಿಷಸ್ ಸ್ಥಳೀಯ ಕರೆನ್ಸಿಯಲ್ಲಿಯೇ ವ್ಯಾಪಾರವನ್ನು ನಡೆಸಲು ಒಪ್ಪಂದ ಮಾಡಿಕೊಂಡಿವೆ, ಇದರಿಂದ ಅಮೆರಿಕನ್ ಡಾಲರ್ ಅಥವಾ ಇತರ ಕರೆನ್ಸಿಗಳ ಅವಲಂಬನೆ ಕಡಿಮೆಯಾಗಲಿದೆ. ಜೊತೆಗೆ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (JTJC) ಅಭಿವೃದ್ಧಿಗೆ ಸಹಕರಿಸುವ ಒಪ್ಪಂದಕ್ಕೆ ಸಹ ಸಹಿ ಮಾಡಲಾಗಿದೆ.

## ಅಂತರಾಷ್ಟ್ರೀಯ ರಾಜಕಾರಣ ಹಿನ್ನೆಲೆ


ಚಾಗೋಸ್ ದ್ವೀಪಗಳ ವಾದ ಈ ಭೇಟಿಯ ಪ್ರಮುಖ ಸಂಗತಿಗಳಲ್ಲೊಂದು. ಚಾಗೋಸ್ ದ್ವೀಪಗಳ ವಾದದ ವಿಚಾರವಾಗಿ ಭಾರತ ಮಾರಿಷಸ್‌ಗೆ ಬೆಂಬಲ ನೀಡಲಿದೆ. ಈ ದ್ವೀಪಗಳು ಈಗ ಬ್ರಿಟನ್ ಮತ್ತು ಅಮೆರಿಕದ ಹಿಡಿತದಲ್ಲಿದ್ದು, ನ್ಯಾಯಯುತವಾಗಿ ಮಾರಿಷಸ್‌ಗೆ ಸೇರಬೇಕಾದ್ದರಿಂದ ಭಾರತ ಮಾರಿಷಸ್‌ನ ಪರವಾಗಿ ನಿಂತಿದ್ದು, ಅಮೆರಿಕಾ ಮತ್ತು ಬ್ರಿಟನ್‌ಗೆ ಹಿನ್ನಡೆಯಾಗಿದೆ.

## ಇಂಡೋ-ಪೆಸಿಫಿಕ್ ಪ್ರದೇಶದ ಮೇಲೆ ಪರಿಣಾಮ



ಇಂಡೋ-ಪೆಸಿಫಿಕ್ ಪ್ರದೇಶವು ಜಾಗತಿಕ ಭದ್ರತೆ ಮತ್ತು ವಾಣಿಜ್ಯ ವಹಿವಾಟಿಗೆ ಪ್ರಮುಖ ತಾಣವಾಗಿದೆ. ಮಾರಿಷಸ್ ಹಾಗೂ ಚಾಗೋಸ್ ದ್ವೀಪಗಳ ಸ್ವಾಮಿತ್ವದ ವಾದಕ್ಕೆ ಸ್ಪಷ್ಟನೆ ನೀಡಿದ್ದು, ಭಾರತ ಈ ಪ್ರದೇಶದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಲು ಮಾರಿಷಸ್‌ನೊಂದಿಗೆ ಸೇನಾ ಸಹಕಾರವನ್ನು ಬಲಪಡಿಸಿದೆ. ಇದು ಚೀನಾ ಮತ್ತು ಪಾಕಿಸ್ತಾನಗಳನ್ನು ಎದುರಿಸಲು ಸಹಕಾರ ನೀಡಲಿದೆ. ಪ್ರಧಾನಮಂತ್ರಿ ಮೋದಿಯವರು ಮಾರಿಷಸ್‌ನಲ್ಲಿ ಅಟಲ್ ಬಿಹಾರಿ ವಾಜಪೇಯಿ ಪಬ್ಲಿಕ್ ಸರ್ವಿಸ್ ಮತ್ತು ಇನೋವೇಷನ್ ಇನ್‌ಸ್ಟಿಟ್ಯೂಟ್ ಉದ್ಘಾಟಿಸಿದರು. ಇದರಿಂದ ಆಪ್ತನಿರ್ವಹಣಾ ತರಬೇತಿ ಮತ್ತು ಆಡಳಿತ ಗುಣಮಟ್ಟವನ್ನು ಸುಧಾರಿಸಲು ನೆರವಾಗಲಿದೆ. ಜೊತೆಗೆ, ಕ್ಯಾಪ್ ಮಲ್‌ಹ್ಯೂರ್‌ನಲ್ಲಿ ಹೊಸ ಆರೋಗ್ಯ ಕೇಂದ್ರದ ಉದ್ಘಾಟನೆಯ ಮೂಲಕ ವೈದ್ಯಕೀಯ ಕ್ಷೇತ್ರದಲ್ಲಿ ಸಹ ಸಹಕಾರ ಒದಗಿಸಲಾಗಿದೆ.

ಒಟ್ಟಾರೆ, ಈ ಭೇಟಿ ಮಾರಿಷಸ್-ಭಾರತ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ಮಹತ್ವದ ಹೆಜ್ಜೆಯಾಗಿದ್ದು, ಭದ್ರತೆ, ಆರ್ಥಿಕತೆ, ಶಿಕ್ಷಣ ಮತ್ತು ಸಾಂಸ್ಕೃತಿಕ ಸಹಕಾರವನ್ನು ಹೊಸ ಹಂತಕ್ಕೆ ಕೊಂಡೊಯ್ಯಲಿದೆ. ಭವಿಷ್ಯದಲ್ಲಿ ಹಿಂದೂ ಮಹಾಸಾಗರ ಪ್ರದೇಶದ ರಾಜಕೀಯ ಸಮತೋಲನದ ಮೇಲೆ ಇದರ ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ.





ಅಧಿವೇಶನ

# ಬಹುಸಂಖ್ಯಾತರ ಭಾವನೆಗಳಿಗೆ ಧಕ್ಕೆ, ಅಲ್ಪಸಂಖ್ಯಾತರ ಓಲೈಕೆ ಹಗರಣಗಳ ಚರ್ಚೆಗೆ ಬಾರದ ಕಾಂಗ್ರೆಸ್ ಸರ್ಕಾರ

**ಸದಾ ಮುಸ್ಲಿಮರ ಓಲೈಕೆ ಬಿಟ್ಟರೆ ಒಂದಿಲ್ಲೊಂದು ಅಪವಾದಗಳ ಸುತ್ತ ಗಿರಿಕಿ ಹೊಡೆಯುವುದೇ ರಾಜ್ಯ ಕಾಂಗ್ರೆಸ್ ಸರ್ಕಾರದ ಕೆಲಸವಾಗಿದೆ. ಜನರ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಕರೆಯುವ ವಿಧಾನಮಂಡಲ ಅಧಿವೇಶನದಲ್ಲೂ ಕಾಂಗ್ರೆಸ್‌ದು ಕಾಟಾಚಾರದ ಉಪಸ್ಥಿತಿಯಾಗಿದೆ. ಮಾ.3 ರಿಂದ ಆರಂಭವಾದ ರಾಜ್ಯದ ಬಜೆಟ್ ಅಧಿವೇಶ ಮಾ.21 ರ ವರೆಗೆ ನಡೆಯಲಿದೆ.**

ಮಹೇಶ್ ಹೆಗಡೆ
ಪತ್ರಕರ್ತರು



## ರಾಜ್ಯಪಾಲರಿಂದ ಸುಳ್ಳು ಹೇಳಿಸಿದ ಸರ್ಕಾರ

ಮೊದಲನೇ ದಿನ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ರಾಜ್ಯಪಾಲರ ಬಳಿ ಸುಳ್ಳು ಹೇಳಿಸಿದಂತಿದೆ. ಭಾಷಣದ ಆರಂಭದಲ್ಲೇ ಸರ್ಕಾರ ಅಭಿವೃದ್ಧಿಯಲ್ಲಿ ವೇಗವನ್ನು ಪಡೆದುಕೊಂಡಿದೆ ಎಂಬ ಸಾಲು ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿಗೆ ಅಭಾಸವೆಂಬಂತಿದೆ. ರಾಜ್ಯದಲ್ಲಿ ಎಲ್ಲೂ ಯಾವುದೇ ಕಾಮಗಾರಿಯ ಶಂಕು ಸ್ಥಾಪನೆಗಳೇ ನಡೆಯುತ್ತಿಲ್ಲ ಅಂದಮೇಲೆ ಅಭಿವೃದ್ಧಿ ವೇಗ ಹೇಗೆ ಸಾಧ್ಯ ಎಂದು ಪ್ರಶ್ನೆ ಮೂಡುವುದು ಸಹಜ. ಈ ಬಗ್ಗೆ ಕಾಂಗ್ರೆಸ್ ಸರ್ಕಾರದ ಶಾಸಕರುಗಳೆ ಅಸಮಧಾನ ಹೊರಹಾಕಿದ್ದರ ಬಗ್ಗೆಯೂ ವರದಿಯಾಗಿದೆ.

## ಸದನದಲ್ಲಿ ಬಿಜೆಪಿ

ವಿರೋಧ ಪಕ್ಷದ ನಾಯಕರಾದ ಶ್ರೀ ಆರ್ ಅಶೋಕ್ ಮತ್ತು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಬಿಜೆಪಿಯ ಎಲ್ಲಾ ಶಾಸಕರ ಒಂದಾಗಿ ಸದನದಲ್ಲಿ ಹೋರಾಟವನ್ನು ಮಾಡಿದ್ದು, ಜನರ ಧ್ವನಿಯಾಗಿ ಸರ್ಕಾರವನ್ನು ಪ್ರಶ್ನಸಿದ್ದಾರೆ. ಕೆಪಿಎಸ್‌ಸಿ ಹಗರಣ, ಗ್ರೇಟರ್ ಬೆಂಗಳೂರು ವಿಧೇಯಕ, ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ, ಗೃಹ ಲಕ್ಷ್ಮೀ ಹಣ ಬಿಡುಗಡೆ ವಿಳಂಬ, ನೂತನಗಳ ಮುಚ್ಚುವಿಕೆ ಸೇರಿದಂತೆ ಸರ್ಕಾರದ ಲೋಪ, ಹಗರಣಗಳ ಬಗ್ಗೆ ಒಗ್ಗಟ್ಟಿನ ಹೋರಾಟ ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ತೀವ್ರ ಸ್ವರೂಪ ಪಡೆದುಕೊಳ್ಳಲಿದೆ.

## ವಿರೋಧದ ನಡುವೆ ಮಂಡನೆಯಾದ ವಿಧೇಯಕ

ತೀವ್ರ ವಿರೋಧದ ನಡುವೆಯೂ ತನ್ನ ಸ್ವಾರ್ಥಕ್ಕಾಗಿ ಕಾಂಗ್ರೆಸ್ ಸರ್ಕಾರ ಗ್ರೇಟರ್ ಬೆಂಗಳೂರು-2024 ವಿಧೇಯಕವನ್ನು ಮಂಡಿಸಿ ವಿರೋಧ ಪಕ್ಷದ ಅನುಪಸ್ಥಿತಿಯಲ್ಲಿ ಒಪ್ಪಿಗೆಯನ್ನು ಪಡೆದುಕೊಂಡಿತು. ಅಲ್ಲದೆ ಅರಮನೆ ಭೂ ಕಬಳಿಕೆ ವಿಧೇಯಕ-2025ನ್ನು ಸಹ ವಿರೋಧದ ನಡುವೆ ಒಪ್ಪಿಗೆ ಪಡೆದಿದೆ. ಮೈಕ್ರೋಫೈನಾನ್ಸ್‌ಗೆ ಸಂಬಂಧಿಸಿದ ವಿಧೇಯಕವನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಧೇಯಕಗಳನ್ನು ವಿರೋಧಗಳ ನಡುವೆಯೆ ಒಪ್ಪಿಗೆಯನ್ನು ಪಡೆದುಕೊಂಡಿರುವುದು ವಿಷಾದನೀಯ.

## ಓಲೈಕೆ ಬಜೆಟ್

ಇನ್ನು ತನ್ನ 16 ನೇ ಬಜೆಟ್ ಮಂಡನೆ ಮಾಡಿರುವ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಓಲೈಕೆ ಬಜೆಟ್ ಮಂಡನೆ ಮಾಡಿದಂತಿದೆ. ಅಲ್ಪಸಂಖ್ಯಾತರ ಕಲ್ಯಾಣ ಎಂದು ಹೇಳುತ್ತಾ ಕೇವಲ ಮುಸ್ಲಿಂ ಸಮುದಾಯದವರಿಗೆ ಭರಪೂರ ಯೋಜನೆಗಳನ್ನು ನೀಡಿದ್ದಾರೆ. ಓಲೈಕೆ ರಾಜಕಾರಣ ಎಲ್ಲಿಗೆ ತಲುಪಿದೆ ಎಂದರೆ ಸರ್ಕಾರಿ ಯೋಜನೆಗಳ ಗುತ್ತಿಗೆ ನೀಡುವಲ್ಲಿ ಮುಸ್ಲಿಮರಿಗೆ ಶೇ.4 ರಷ್ಟು ಮೀಸಲಾತಿಯನ್ನು ನೀಡಿದೆ. ಬಹುಸಂಖ್ಯಾತರ ವಿರೋಧದ ನಡುವೆಯೂ ಸಿದ್ದರಾಮಯ್ಯನವರ ಈ ನಡೆ ಮೊಂಡುತನದ ಪರಮಾವಧಿಯಾಗಿದೆ.

## ಕೆಪಿಎಸ್‌ಸಿ ಗಲಾಟೆ

ಕೆಪಿಎಸ್‌ಸಿ ನಡೆಸುವ ಕೆಎಎಸ್ ಪರೀಕ್ಷೆಯಲ್ಲಿನ ಗೊಂದಲದಲ್ಲಿ ಅಭ್ಯರ್ಥಿಗಳು ಹೈರಾಣರಾಗಿದ್ದರೆ, ಈ ಬಗ್ಗೆ ಪ್ರಶ್ನೆ ಮಾಡಿದ ವಿರೋಧಪಕ್ಷಕ್ಕಾಗಲಿ, ಹೋರಾಟಗಾರರಿಗಾಗಲಿ ಸರ್ಕಾರ ಸ್ಪಷ್ಟನೆ ಕೊಡುವ ಬದಲು, ಇದು ಅಧಿಕಾರಿಗಳು ಮಾಡಿದ್ದು, ಸರ್ಕಾರ ಮಾಡಿದ ತಪ್ಪಲ್ಲ ಎಂದು ಹೇಳುವ ಮೂಲಕ ನುಣುಚಿಕೊಳ್ಳುವ ಪ್ರಯತ್ನ ಮಾಡಿದೆ.

## ಅಭಿವೃದ್ಧಿಯೂ ಆಗಿಲ್ಲ ವಿಕಾಸವೂ ಆಗಿಲ್ಲ



ರಾಜ್ಯಪಾಲ ಭಾಷಣದ ಬಗ್ಗೆ ಪ್ರತಿಕ್ರಿಯಿಸಿದ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಅವರು, ರಾಜ್ಯಪಾಲರ ಬಾಯಲ್ಲಿ ಸರ್ಕಾರ ಅಭಿವೃದ್ಧಿ ಹಾಗೂ ವಿಕಾಸ ಎಂಬ ಸುಳ್ಳು ನುಡಿಸಿದೆ. ಯಾವುದೇ ಅಭಿವೃದ್ಧಿ ಕಾರ್ಯವಾಗದಿದ್ದರೂ, ಚಾಂಪಿಯನ್ ಎಂದು ಕಾಂಗ್ರೆಸ್ ಸರ್ಕಾರ ಹೇಳಿಕೊಂಡಿದೆ. ರಾಜ್ಯಪಾಲರನ್ನು ಹೀಯಾಳಿಸುವ ಮಾತಾಡಿ, ಅವರ ಅಧಿಕಾರಗಳನ್ನು ಕಿತ್ತುಕೊಂಡು, ಈಗ ಅವರ ಕೈಯಲ್ಲೇ ನಾವೇ ನಂ.1 ಎಂಬ ರೀತಿ ಹೇಳಿಸಲಾಗಿದೆ. ಬಾಣಂತಿಯರು ಹಾಗೂ ಮಕ್ಕಳು ಸಾಯುತ್ತಿದ್ದಾರೆ. ಆದರೆ ಮಕ್ಕಳನ್ನು ಕಾಪಾಡಲು ಕಟಿಬದ್ಧ, ಪರಿಶಿಷ್ಟ ಜಾತಿ, ವರ್ಗದವರ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ ಎನ್ನುತ್ತಾರೆ.

ಇತ್ತ ವಾಲ್ಮೀಕಿ ನಿಗಮದಲ್ಲಿ 187 ಕೋಟಿ ರೂ. ಲೂಟಿ ಮಾಡಲಾಗಿದೆ. ಕಳೆದ 19 ತಿಂಗಳಲ್ಲಿ ಗಂಭೀರ ಕಾನೂನು ಉಲ್ಲಂಘನೆಯಾಗಿಲ್ಲ ಎಂದು ಉಲ್ಲೇಖಿಸಿದ್ದಾರೆ. ಅತ್ಯಾಚಾರಗಳು, ಬ್ಯಾಂಕ್ ದರೋಡೆ, ಮೈಸೂರಿನಲ್ಲಿ ಪೊಲೀಸ್ ಠಾಣೆ ಮೇಲೆ ದಾಳಿ ಸೇರಿ ಅನೇಕ ಘಟನೆಗಳು ನಡೆದಿವೆ. ಆದರೂ ಸರ್ಕಾರದ ಪ್ರಕಾರ ಇವೆಲ್ಲ ಗಂಭೀರ ಘಟನೆಗಳಲ್ಲ. ಮೈಕ್ರೋ ಫೈನಾನ್ಸ್‌ನಿಂದ ಜನರು ಸಾಯುತ್ತಿದ್ದರೂ ಅದು ಸರ್ಕಾರಕ್ಕೆ ಗಂಭೀರವಾಗಿ ಕಂಡಿಲ್ಲ, ಲೂಟಿ ಮಾಡುತ್ತಿದ್ದರೂ ಪಾರದರ್ಶಕ ಆಡಳಿತ ಎಂದು ಹೇಳಿದ್ದಾರೆ.



## ನಟ್-ಬೋಲ್ಟ್ ಸಡಿಲವಾಗಿವೆ

ರಾಜ್ಯಪಾಲ ಭಾಷಣದ ಬಗ್ಗೆ ಪ್ರತಿಕ್ರಿಸಿದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು, ಸರ್ಕಾರದ ನಟ್ ಮತ್ತು ಬೋಲ್ಟ್ ಎರಡೂ ಸಡಿಲ ಆಗಿವೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಇದು ರಾಜ್ಯಪಾಲರ ಭಾಷಣದಲ್ಲಿ ಗೋಚರಿಸುತ್ತಿದೆ ಎಂದರು. ಒಂದು ಕಡೆ ಹೈನುಗಾರಿಕೆಗೆ ಪ್ರೋತ್ಸಾಹಧನದ ಪ್ರಸ್ತಾಪ ಮಾಡಿದ್ದಾರೆ. ಸಾವಿರಾರು ಕೋಟಿ ರೂಪಾಯಿ ಹಳೆಯ ಪ್ರೋತ್ಸಾಹಧನ ಬಾಕಿ ಉಳಿಸಿಕೊಂಡಿದ್ದಾರೆ. ಪ್ರಾದೇಶಿಕ ಅಸಮಾನತೆ ಹೋಗಲಾಡಿಸಲು 90 ಸಾವಿರ ಕೋಟಿ ರೂ.ಖರ್ಚು ಮಾಡುವುದಾಗಿ ಹೇಳಿದ್ದಾರೆ. ಆದರೆ ಎಷ್ಟು ಖರ್ಚಾಗಿದೆ ಎಂದು ಹೇಳಬೇಕು ಎಂದರು. ರಾಜ್ಯಪಾಲರ ಭಾಷಣ ಕೇಳಿಸಿಕೊಂಡರೆ ರಾಜ್ಯಪಾಲರ ಸಮಯವನ್ನೂ ಸರ್ಕಾರ ವ್ಯರ್ಥ ಮಾಡಿದೆ. ಅಭಿವೃದ್ಧಿ ವೇಗವನ್ನು ಚುರುಕುಗೊಳಿಸುವುದರಲ್ಲಿ ಮತ್ತು ಸರ್ಕಾರದ ಹಣಕಾಸಿನ ವ್ಯವಸ್ಥೆಯನ್ನು ಇನ್ನಷ್ಟು ಸದೃಢಗೊಳಿಸುವಲ್ಲಿ ಯಶಸ್ವಿಯಾಗಿದೆ ಎಂಬ ಹಸಿ ಸುಳ್ಳನ್ನು ರಾಜ್ಯಪಾಲರ ಬಾಯಲ್ಲಿ ಹೇಳಿಸಿದೆ ಎಂದು ಹೇಳಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ ಪಾಪರ್ ಚೀಟಿ ಎತ್ತಿಕೊಂಡ ಕಾಂಗ್ರೆಸ್ ಸರ್ಕಾರ ಕೇವಲ ಸುಳ್ಳುಗಳನ್ನು ಪಟ್ಟಿ ಮಾಡಿ ರಾಜ್ಯಪಾಲರ ಕಡೆಯಿಂದ ಹೇಳಿಸಿದ್ದಾರೆ. ಸುಳ್ಳುಗಳ ಸರಮಾಲೆಯೊಂದಿಗೆ ಸರ್ಕಾರ ನಡೆಯುತ್ತಿದ್ದು ಇದನ್ನೇ ನಿಜ ಎಂಬುವಂತೆ ಬಿಂಬಿಸುವ ಪ್ರಯತ್ನ ಮಾಡಿದೆ ಎಂದು ಹೇಳಿದರು.

ಒಟ್ಟಾರೆ ಹಗರಣ, ಆರೋಪ,ಅಪವಾದಗಳ ಸುತ್ತ ಗಿರಕಿ ಹೊಡೆಯುತ್ತಿರುವ ಕಾಂಗ್ರೆಸ್ ಸರ್ಕಾರ ಅಧಿವೇಶನದಲ್ಲಿ ಯಾವುದಕ್ಕೂ ಉತ್ತರ ಕೊಡುವ ಮನಸ್ಥಿತಿಯಲ್ಲಿರುವುದು ಕಂಡುಬರುತ್ತಿಲ್ಲ. ಜನರ ತೆರಿಗೆ ಹಣದಲ್ಲಿ ಸರ್ಕಾರ ಜಾಲಿ ಮೂಡಿನಲ್ಲಿ ಇರುವುದು ಸಾರ್ವಜನಿಕರು ಗಮನಿಸುತ್ತಿದ್ದು, ಉತ್ತರಕೊಡಲು ಸಿದ್ದರಾಗಿದ್ದಾರೆ.

# ಹಿಂದುಗಳ ತುಚ್ಛೀಕರಣ ಮುಸಲ್ಮಾನರ ತುಷ್ಟೀಕರಣ

## ಕಾಂಗ್ರೆಸ್ ಸರಕಾರದ ಬಜೆಟ್‌ನ ಮೂಲ ಮಂತ್ರ...



ಎಸ್. ವಿಶ್ವನಾಥ ಭಟ್,
ಆರ್ಥಿಕ ಚಿಂತಕರು ಮತ್ತು ಬಿಜೆಪಿ ಮುಖಂಡರು

**ಹಿಂ**ದುಗಳ ತುಚ್ಛೀಕರಣ- ಮುಸಲ್ಮಾನರ ತುಷ್ಟೀಕರಣ, ಈ ಘೋಷವಾಕ್ಯವೇ ಸಿದ್ದರಾಮಯ್ಯನವರ ಸರ್ಕಾರದ 2025 26ರ ಬಜೆಟ್ ಮೂಲ ಮಂತ್ರ. ದೇಶದ ಸಂವಿಧಾನದ ಮೇಲೆ ಪ್ರಮಾಣ ಮಾಡುತ್ತಾ ಆದರೆ ಸವಿಂಧಾನದ ಆಶಯಕ್ಕೆ ಸಂಪೂರ್ಣವಾಗಿ ವಿರೋಧವಾಗಿ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸರಕಾರದ ಕಾಮಗಾರಿಗಳಲ್ಲಿ ಧರ್ಮದ ಆಧಾರದ ಮೇಲೆ ಮುಸಲ್ಮಾನ ಸಮುದಾಯದವರಿಗೆ ಕಾಂಗ್ರೆಸ್ ಸರ್ಕಾರದಿಂದ ಮೀಸಲು ಕಲ್ಪಿಸಲಾಗಿದೆ. ಪ್ರಾಯಶಃ ಪಾಕಿಸ್ತಾನದಲ್ಲೂ ಬಜೆಟ್‌ನಿಂದ ಮುಸಲ್ಮಾನರಿಗೆ ಈ ಮಟ್ಟಕ್ಕೆ ಸಹಾಯ ಹಸ್ತ ಸಿಗುತ್ತಿರಲಿಲ್ಲ.

ಇದೊಂದೇ ಅಲ್ಲ, ಅಲ್ಪಸಂಖ್ಯಾತರ 169 ವಸತಿ ಶಾಲೆ ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 25,000 ಮುಸಲ್ಮಾನ್ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಯನ್ನು ನೀಡಲಾಗುತ್ತದೆ ಎಂಬ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಲಾಗಿದೆ. ಲವ್ ಜಿಹಾದ್‌ನಲ್ಲಿ ಕೊಲೆಯಾಗಿದ್ದು ನೇಹಾ, ನೆಹ್ರುನ್ನೀಸಾ ಅಲ್ಲ. ಆದರೆ ಕಾಂಗ್ರೆಸ್ ಮುಖ್ಯಮಂತ್ರಿಗಳು ಆತ್ಮ ರಕ್ಷಣೆಗೆ ತರಬೇತಿ ಕೊಡಲು ಹೊರಟಿರುವುದು ಅಲ್ಪಸಂಖ್ಯಾತ ಹುಡುಗಿಯರಿಗೆ, ಅಂದರೆ ಮುಸಲ್ಮಾನ ಹುಡುಗಿಯರಿಗೆ! ಹಿಂದೂ ಹುಡುಗಿಯರಿಗಲ್ಲ!

ಇಂದು ರಾಜ್ಯದಲ್ಲಿ ಮುಸಲ್ಮಾನ ಹುಡುಗಿಯರು ಬಲಿಪಶುವಾದ ಉದಾಹರಣೆಯೇ ಇಲ್ಲ, ಬಲಿಪಶು ಆಗುತ್ತಾ ಇರುವಂತಹದ್ದು ಹಿಂದೂ ವಿದ್ಯಾರ್ಥಿನಿಯರು ಮತ್ತು ಹಿಂದೂ ಹುಡುಗಿಯರು. ಪರಿಸ್ಥಿತಿ ಹೀಗಿರುವಾಗ ಕಾಂಗ್ರೆಸ್ ಸರ್ಕಾರ ಹಿಂದೂ ಹೆಣ್ಣು ಮಕ್ಕಳ ರಕ್ಷಣೆಗಿಂತ ಮುಸಲ್ಮಾನ ಹೆಣ್ಣುಮಕ್ಕಳ ರಕ್ಷಣೆಗೆ ಟೊಂಕ ಕಟ್ಟಿ ನಿಂತು ಬಿಟ್ಟಿದೆ. ಮುಸಲ್ಮಾನ ಹೆಣ್ಣು ಮಕ್ಕಳಿಗೆ ಆತ್ಮ ರಕ್ಷಣೆಗೆ ತರಬೇತಿ ನೀಡುವುದಾದರೆ, ಅತಿಹೆಚ್ಚು ಅಗತ್ಯವಿರುವ ಹಾಗೂ ವಸತಿ ಶಾಲೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದೂ ವಿದ್ಯಾರ್ಥಿನಿಯರಿಗೆ ಮೊದಲು ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಯನ್ನು ನೀಡಲೇಬೇಕು. ಏಕೆಂದರೆ ಅವರು ಲವ್ ಜಿಹಾದ್‌ನ ಬಲಿ ಪಶುಗಳು. ಬೇಸರದ ಸಂಗತಿಯೆಂದರೆ, ಕೃಷ್ಣದೇವರಾಯ ಆಳಿದಂತ ನಾಡಿನಲ್ಲಿ ಮುಂದೆ Caliphateನ ಸ್ಥಾಪನೆಗೆ ಕಾಂಗ್ರೆಸ್ ಸರ್ಕಾರದ ಒಬ್ಬ ಹಿಂದೂ ಮುಖ್ಯಮಂತ್ರಿಗಳಿಂದ ಭೂಮಿ ಪೂಜೆಯಾಗುತ್ತಿದೆಯಲ್ಲಾ, ಮುಸ್ಲಿಂ ತುಷ್ಟೀಕರಣದ ನೀತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ.

ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ, ಪ್ರಮುಖವಾಗಿ ಕಳೆದ ಒಂದು ವರ್ಷದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ತೀವ್ರವಾಗಿ ಬಿಗಡಾಯಿಸಿದೆ. ಒಂದು ವರ್ಷದಿಂದ ಡ್ರಗ್ಸ್‌ನಂತಹ ಮಾದಕ ವಸ್ತುಗಳ ವ್ಯವಹಾರ ರಾಜ್ಯದಲ್ಲಿ ದೊಡ್ಡಮಟ್ಟದಲ್ಲಿ ನಡೆಯುತ್ತಿದೆ. ಅಷ್ಟೇ ಪ್ರಮುಖವಾಗಿರುವುದು ರಾಜ್ಯಾದ್ಯಂತ ಅಕ್ರಮ ನಿವಾಸಿಗರ ಜಾಲ. ಇವರು ದೇಶದ ಆಂತರಿಕ ಭದ್ರತೆಗೆ ಸವಾಲಾಗಿದ್ದಾರೆ. ಚಿಕ್ಕಮಗಳೂರು, ಬೆಂಗಳೂರು ಭಯೋತ್ಪಾದಕರ ಸ್ಲೀಪರ್ ಸೆಲ್ ಆಗುತ್ತಿವೆ. ಕಾಂಗ್ರೆಸ್ ಸರಕಾರದ ಅಲಿಖಿತ ಬೆಂಬಲದಿಂದ ಹಾಗೂ ತುಷ್ಟಿಕರಣ ರಾಜಕಾರಣದಿಂದಾಗಿ ದ್ರೋಹಿ ಶಕ್ತಿಗಳಿಗೆ ಮತಾಂಧತೆಯ ಅಮಲು ಬಂದಿದ್ದು ನಮ್ಮ ನಾಡಿನಲ್ಲಿ ನಮಗೇ ಭದ್ರತೆ ಇಲ್ಲದಂತಾಗಿದೆ. ಸಿದ್ದರಾಮಯ್ಯನವರ ಬಜೆಟ್‌ನಲ್ಲಿ ಈ ಭೀಕರ ಸಮಸ್ಯೆಗಳಿಗೆ ಉತ್ತರವಿಲ್ಲ, ಬದಲಿಗೆ ತುಷ್ಟಿಕರಣಕ್ಕೆ ಅನುದಾನವಿದೆ.

### ರಾಜ್ಯದ ಪ್ರಸ್ತುತ ಪರಿಸ್ಥಿತಿ

ದೇಶದಲ್ಲಿ ಹಣದುಬ್ಬರ ಇಳಿಮುಖದಲ್ಲಿದ್ದರೂ ಕರ್ನಾಟಕದಲ್ಲಿ ಎಲ್ಲ ಸರಕು ಮತ್ತು ಸೇವೆಗಳ ಮೇಲೆ ಕಾಂಗ್ರೆಸ್ ಸರ್ಕಾರ ಹೆಚ್ಚಿನ ತೆರಿಗೆ ವಿಧಿಸುತ್ತಿರುವುದರಿಂದ ಮಧ್ಯಮ ವರ್ಗದವರ ಮೇಲೆ ಬೆಲೆ ಏರಿಕೆಯ ಅಗಧಾ ಪ್ರಹಾರ ನಿರಂತರವಾಗಿದೆ. ಕರ್ನಾಟಕ ಬಿಜೆಪಿ ಸರ್ಕಾರದ ಅವಧಿಯಲ್ಲಿ, ಸಮಗ್ರ ದಕ್ಷಿಣ ಭಾರತದಲ್ಲಿ ಅತ್ಯಂತ ಕಡಿಮೆ ನಿರುದ್ಯೋಗ ದರವನ್ನು ಹೊಂದಿತ್ತು. ಇಂದು ಅದೇ ಕರ್ನಾಟಕ ಇಂದು ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದೆ. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಇಲ್ಲಿಯವರೆಗಿನ ತನ್ನ 9 ವರ್ಷಗಳ ಆಡಳಿತದಲ್ಲಿ ನಿರಂತರವಾಗಿ Karnataka start ecosystemನ್ನ ಪೋಷಿಸಿತು. ಪರಿಣಾಮವಾಗಿ ದೀರ್ಘಕಾಲ ಅಂದರೆ 2024ರ ಅಂತ್ಯದ ತನಕ ಬೆಂಗಳೂರು ಭಾರತದ StartUpನ ರಾಜಧಾನಿಯಾಗಿತ್ತು. ಕರ್ನಾಟಕದಲ್ಲಿ ಉದ್ಯೋಗಿಗಳನ್ನು ಉದ್ಯೋಗದಾತರನ್ನಾಗಿ ಪರಿವರ್ತಿಸುತ್ತಿದ್ದ ಹಾಗೂ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಮಾಡುತ್ತಿದ್ದ ವಲಯವದು. ಆದರೆ ಕಳೆದ ವಾರ ಬಿಡುಗಡೆಯಾದ

ವರದಿಯ ಪ್ರಕಾರ ಮಹಾರಾಷ್ಟ್ರದಲ್ಲಿನ ಫಡ್ನವೀಸ್ ನೇತೃತ್ವದ ಬಿಜೆಪಿ ಸರ್ಕಾರದ ಕಳೆದ 15 ತಿಂಗಳ ಅನವರತ ಶ್ರಮದಿಂದಾಗಿ ಇಂದು ಮುಂಬೈ ಭಾರತದ ಸ್ಟಾರ್ಟಪ್‌ನ ರಾಜಧಾನಿಯಾಗಿದೆ; Both in absolute numbers and absolute investments. ಅದರೊಂದಿಗೆ Data Centre ನಲ್ಲೂ ಅಗ್ರಸ್ಥಾನದಲಿದ್ದ ಕರ್ನಾಟಕವನ್ನು 6 ತಿಂಗಳ ಹಿಂದೆಯೇ ಹಿಂದಕ್ಕೆ ತಳ್ಳಿ ಮಹಾರಾಷ್ಟ್ರ ಡೇಟಾ ಸೆಂಟರ್‌ನಲ್ಲೂ ಅಗ್ರಸ್ಥಾನಕ್ಕೆ ಬಂದಿದೆ. 2022ರಲ್ಲಿ ಬಿಜೆಪಿ ಸರ್ಕಾರದ ಆಡಳಿತಲ್ಲಿದ್ದಾಗ ಕರ್ನಾಟಕಕ್ಕೆ ದಾಖಲೆ ಮಟ್ಟದಲ್ಲಿ 1,63,795 ಕೋ.ರೂ ದೇಶಿ ಬಂಡವಾಳ ಹೂಡಿಕೆ (FDI) ಹರಿದು ಬಂದಿದೆ; Highest in the country at 38%, ..more than $22bn!!

ಆದರೆ ಇಂದು 2024-25 ರ ಸಾಲಿನಲ್ಲಿ ಕರ್ನಾಟಕಕ್ಕೆ ಹರಿದು ಬಂದ FDI ಕೇವಲ 3.5 ಬಿಲಿಯನ್. ಬಿಜೆಪಿ ಅಧಿಕಾರದಲ್ಲಿರುವ ಮಹಾರಾಷ್ಟ್ರದಲ್ಲಿ ಕಳೆದ ಒಂಬತ್ತು ತಿಂಗಳಲ್ಲಿ 16 ಬಿಲಿಯನ್ ಡಾಲರ್ ಊಈಐ ಹರಿದು ಬಂದಿದೆ..1,39,000ಕೋ.ರೂ. ಮಾನ್ಯ ಬೊಮ್ಮಾಯಿಯವರು ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರ ಹಸ್ತಾಂತರ ಮಾಡುವಾಗ:

- 2022ರಲ್ಲಿ ಅಭಿವೃದ್ಧಿಯ ದರದಲ್ಲಿ ಕರ್ನಾಟಕ ದಕ್ಷಿಣ ಭಾರತದಲ್ಲೇ ಅಗ್ರಸ್ಥಾನದಲ್ಲಿತ್ತು.
- ನೀತಿ ಆಯೋಗದ innovation index ನಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿತ್ತು.
- ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ದೇಶದ 50% ಸಾಮರ್ಥ್ಯದೊಂದಿಗೆ ಕರ್ನಾಟಕ ಅಗ್ರಸ್ಥಾನದಲ್ಲಿತ್ತು.
- Ease of doing businessನಲ್ಲಿ 2016ರಲ್ಲಿ ಸಿದ್ದರಾಮಯ್ಯನವರ ಆಡಳಿತದ ಕಾಲಘಟ್ಟದಲ್ಲಿ 13ನೇ ಸ್ಥಾನದಲ್ಲಿದ್ದ ಕರ್ನಾಟಕ ಬಿಜೆಪಿ ಸರ್ಕಾರದ ಅವಧಿಯಲ್ಲಿ 2022-23ರಲ್ಲಿ ಅಗ್ರಸ್ಥಾನದಲ್ಲಿತ್ತು.
- New education policyಯನ್ನು ದೇಶದಲ್ಲಿ ಮೊದಲು ಅನುಷ್ಠಾನಗೊಳಿಸಿದ ರಾಜ್ಯ ಕರ್ನಾಟಕವಾಗಿತ್ತು.
- ಈ ರೀತಿಯ ಅನೇಕ ಸಾಧನೆಗಳಿಂದ ದಕ್ಷಿಣ ಭಾರತದಲ್ಲೇ ಕರ್ನಾಟಕ ಅತ್ಯಂತ ಕಡಿಮೆ ನಿರುದ್ಯೋಗ ದರವನ್ನು ಹೊಂದಿತ್ತು (2.7%!).

2022ರಲ್ಲಿ explosive growth ನ ಅಂಚಿನಲ್ಲಿದ್ದ ಕರ್ನಾಟಕ 2030ರ ಆಸುಪಾಸಿನಲ್ಲಿ ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನು ಸಾಧಿಸುವ ಗುರಿಯನ್ನು ಪ್ರಕಟಿಸಿತ್ತು. ಅದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಲು ಕರ್ನಾಟಕದ ಬಿಜೆಪಿ ಸರ್ಕಾರ ನೀಲ ನಕ್ಷೆಯನ್ನೂ ಪ್ರಕಟಿಸಿತ್ತು.

2023ರ ರಾಜ್ಯದ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಕಳೆದ 21 ತಿಂಗಳುಗಳ ಅವಧಿಯಲ್ಲಿ ಯಾವ ಹೊಸ ಹೂಡಿಕೆಯೂ ಬಂದಿಲ್ಲ. Congress Foxconn ತೋರಿಸಬಹುದು. Foxconn ಇಂದಿನದ್ದಲ್ಲ. ಹಿಂದಿನ ಬಿಜೆಪಿ ಸರ್ಕಾರದ ನಿರಂತರ ಶ್ರಮದ ಫಲವಿದು. ಚುನಾವಣೆಯ ಕಾರಣದಿಂದಾಗಿ ಮುಂದೂಡಲಾಯಿತು, ಅಷ್ಟೇ.

ಬೆಂಗಳೂರಿನ ಬಳಿ ಬಿಡದಿಯಲ್ಲಿರುವ Toyota Kirloskar car ಉತ್ಪಾದನೆಯ ಘಟಕವಿದೆ. ಆ ಸಂಸ್ಥೆ 21,000 ಕೋಟಿ ರೂ ಬಂಡವಾಳ ಹೂಡಿಕೆಯ ಹಾಗೂ 26,000 ಯುವಕರಿಗೆ ಕೆಲಸ ನೀಡಲಿರುವ electric ಮತ್ತು hybrid car ಗಳನ್ನು ಉತ್ಪಾದನೆ ಮಾಡುವ ತನ್ನ ನೂತನ ಘಟಕವನ್ನು ಕರ್ನಾಟಕದ ಬಿಡದಿಯಲ್ಲಿ ವಿಸ್ತರಿಸುವ ಬದಲಿಗೆ ಮಹಾರಾಷ್ಟ್ರದ ಸಂಭಾಜಿ ನಗರದಲ್ಲಿ ಆರಂಭಿಸಲು 827 ಎಕರೆ ಭೂಮಿಯಲ್ಲಿ ಶಂಕುಸ್ಥಾಪನೆ ಮಾಡಿದೆ, ಕರ್ನಾಟಕದಲ್ಲಲ್ಲ!

2025-26ರ ಬಜೆಟ್ ನಲ್ಲಿ ರಾಜ್ಯದ ಅಭಿವೃದ್ಧಿಗೆ ಮತ್ತು ಯುವ ಪೀಳಿಗೆಗೆ ಉದ್ಯೋಗ ಸಷ್ಟಿಗೆ ಸಂಬಂಧಪಟ್ಟಂತೆ ಯಾವುದೇ ಯೋಜನೆ ಇಲ್ಲ. ನೂತನ ತಂತ್ರಜ್ಞಾನ ಸಂಸ್ಥೆಗಳು, ಔಷಧಿ ಉತ್ಪಾದನಾ ಘಟಕಗಳು, ಹೊಸ ಹೊಸ StattUp ಇಂದು ಮಹಾರಾಷ್ಟ್ರ, ಸೀಮಾಂಧ್ರ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಹರಿಯಾಣ ಕಡೆಗೆ ಧಾವಿಸುತ್ತಿವೆ; ಕರ್ನಾಟಕದ ಕಡೆ ತಿರುಗಿಯೂ ನೋಡುತ್ತಿಲ್ಲ, ಕಾರಣ ಕಾಂಗ್ರೆಸ್ ಸರ್ಕಾರಕ್ಕೆ ಅಧಿಕಾರದಲ್ಲಿರುವುದು, ಮತ ಬ್ಯಾಂಕ್ ಓಲೈಸುವುದು ಪ್ರಾಮುಖ್ಯವೇ ಹೊರತು ರಾಜ್ಯದ ಪ್ರಗತಿಯಲ್ಲ, ಯುವಪೀಳಿಗೆಗೆ ಉದ್ಯೋಗ ಸೃಷ್ಟಿಯಲ್ಲ. ಪರಿಣಾಮವಾಗಿ, ಯಾವ ಕರ್ನಾಟಕಕ್ಕೆ 2022ರ ತನಕ ದೇಶದ ಮೂಲೆ ಮೂಲೆಗಳಿಂದ ಉದ್ಯೋಗವನ್ನು ಅರಸಿಕೊಂಡು ಯುವಕರು ಬರುತ್ತಿದ್ದರೋ, ಅದೇ ಕರ್ನಾಟಕದ ಯುವಕರು ಇನ್ನು ಮುಂದೆ ಕೆಲಸವನ್ನು ಅರಸಿಕೊಂಡು ಬೇರೆ ರಾಜ್ಯಗಳಿಗೆ ವಲಸೆ ಹೋಗುವ ಪರಿಸ್ಥಿತಿಯನ್ನು ಸಿದ್ದರಾಮಯ್ಯನವರ ಸರ್ಕಾರ ನಿರ್ಮಿಸಿದೆ. ಇದೇ ಕರ್ನಾಟಕದ ಜನತೆಯ ಪ್ರಮುಖವಾಗಿ ಯುವ ಪೀಳಿಗೆಯ ದುರಂತ.

ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದ 2024-25 ನೇ ಸಾಲಿನ ಬಜೆಟ್‌ನಲ್ಲಿ ಎಲ್ಲ ಇಲಾಖೆಗಳಿಗೆ ಸಮಗ್ರವಾಗಿ 3.22 ಲಕ್ಷ ಕೋಟಿ ರೂ ಹಂಚಿಕೆಯಾಗಿತ್ತು. ಕಳೆದ ಡಿಸೆಂಬರ್ ಅಂತ್ಯಕ್ಕೆ ಎರಡು ಲಕ್ಷ ಕೋಟಿ ರೂ ಬಿಡುಗಡೆಯಾಗಿದ್ದು 1.75 ಲಕ್ಷ ಕೋಟಿ ರು ವೆಚ್ಚವಾಗಿದೆ. ಅಂದರೆ ವಾರ್ಷಿಕ ಗುರಿಯ ಶೇಕಡ 54.55ರಷ್ಟು ಮಾತ್ರ ಸಾಧಿಸಲಾಗಿದೆ. ತೆರಿಗೆ ಸಂಗ್ರಹಣೆಯಲ್ಲಿ 10,000 ಕೋಟಿ ರೂ ಕೊರತೆಯ ಜೊತೆಗೆ ವಿತ್ತೀಯ ಶಿಸ್ತನ್ನು ನಿಭಾಯಿಸಬೇಕಾದ ಕಾರಣದಿಂದಾಗಿ ಅನುದಾನದ ಬಿಡುಗಡೆಯನ್ನು ಕಡಿಮೆ ಮಾಡಿದ್ದಾರೆ; ಜೊತೆಗೆ ಬಳಕೆಯ ಪ್ರಮಾಣವನ್ನು ಅದಕ್ಕಿಂತಲೂ ಮಾಡಿದ್ದಾರೆ. ಈ ರೀತಿ ಹಂಚಿಕೆಯಾದ ಅನುದಾನಗಳನ್ನು ವೆಚ್ಚ ಮಾಡದೆ ವಿತ್ತೀಯ ಶಿಸ್ತನ್ನು ಸಾಧಿಸಿರುವುದೇ ಹೊರತು, ಪ್ರಗತಿಯಿಂದಲ್ಲ! ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗೇ ಇದ್ದರೂ ಆಯ್ದ ಬದ್ಧತಾ ವೆಚ್ಚಗಳಿಗೆ ಹಣ ಸಂಪನ್ಮೂಲವನ್ನು ಒದಗಿಸುವುದು ಅನಿವಾರ್ಯ.

**ಕರ್ನಾಟಕ ಬಜೆಟ್ ಮೂರು ವರ್ಷಗಳ ಹೋಲಿಕೆಯ ಪಕ್ಷಿ ನೋಟ**
**2022-23 ಮತ್ತು 2025-26 (ಕೋ.ರೂ.ಗಳಲ್ಲಿ)**

| | 2022-23 | 2025-26 |
|---|---|---|
| ಬಡ್ಡಿ | 29,395 | 45,600 (55% ಏರಿಕೆ) |
| ವೇತನ | 41,228 | 85,860 |
| ಪಿಂಚಣಿ | 24,016 | 38,580 |
| ಎಸ್‌ಎಸ್‌ಪಿ | 10,822 | 10,835 |
| ಗ್ಯಾರಂಟಿ | | 51,034 |
| ಬದ್ಧತಾ ವೆಚ್ಚ | 1,05,521 | 2,31,879 (ಇಮ್ಮಡಿ) |
| ವಾರ್ಷಿಕ ಸಾಲ | 44,549 | 1,16,000 (160% ಏರಿಕೆ) |
| ಒಟ್ಟು ಹೊಣೆಗಾರಿಕೆಗಳು | 5,22,847 | 7,64,655 (46.25% ಏರಿಕೆ) |
| ಒಟ್ಟು ಹೊಣೆಗಾರಿಕೆಗಳು (GSDP %) | 23.97% | 24.91% |
| ಬಂಡವಾಳ ವೆಚ್ಚ | 60,599 | 71,336 |
| ವಿತ್ತೀಯ ಕೊರತೆ | 46,622 | 90,428 |
| ವಿತ್ತೀಯ ಕೊರತೆ (GSDP %) | 2.14% | 2.95% |
| ಜಿಎಸ್‌ಡಿಪಿ | 21,81,217 | 30,70,103 |
| ರಾಜ್ಯಸ್ವ ಸ್ವೀಕೃತಿ | 2,29,080 | 2,92,477 |
| ರಾಜ್ಯದ ಸ್ವಂತ ತೆರಿಗೆ | 1,43,702 | 2,08,100 |
| ಕೇಂದ್ರದ ತೆರಿಗೆಯ ಪಾಲು | 34,596 | 51,877 |

**ಮೇಲಿನ ಕೋಷ್ಟಕವನ್ನು ಗಮನಿಸಿ...**

- ಸಿದ್ದರಾಮಯ್ಯನವರ ಸರ್ಕಾರದ ಕೇವಲ ಮೂರೇ ವರ್ಷದಲ್ಲಿ ಬದ್ಧತಾ ವೆಚ್ಚ ಇಮ್ಮಡಿ!
- ಸಾಲದ ಮೇಲಿನ ಬಡ್ಡಿಯ ಪಾವತಿ 55% ಏರಿಕೆಯಾಗಿದೆ.
- ಸಮಗ್ರ ಸಾಲ 5,22,847 ಕೋ.ರೂ. ನಿಂದ 7,64,655 ಕೋ.ರೂ. 46% ಏರಿಕೆ!
- ವಾರ್ಷಿಕ ಸಾಲದ ಎತ್ತುವಳಿ 44559. ಕೋ ರೂ ನಿಂದ 1,16,000 ಕೋಟಿ ರೂ ತಲುಪಿದೆ;.. 160% ಏರಿಕೆ! ಈ ವೇಗದಲ್ಲಿ 2028ರ ವೇಳೆಗೆ ರಾಜ್ಯದ ಸಮಗ್ರ ಸಾಲ 10 ಲಕ್ಷ ಕೋಟಿ ದಾಟಲಿದೆ. Real Debt Trap !! ಸಿದ್ದರಾಮಯ್ಯನವರ ಸರ್ಕಾರ ಕರ್ನಾಟಕವನ್ನು ಸಾಲದ ಸುಳಿಯಲ್ಲಿ ಸಿಲುಕಿಸುವುದು ಮಾತ್ರವಲ್ಲ, ಕರ್ನಾಟಕ ರಾಜ್ಯವನ್ನು ದಿವಾಳಿ ಮಾಡಲು ಹೊರಟಿದೆ!!
- ಪ್ರಗತಿಗೆ ಆಧಾರವಾದ ಬಂಡವಾಳ ವೆಚ್ಚದ ಲೆಕ್ಕಾಚಾರ ನೋಡಿ.

2022-23ರಲ್ಲಿ 60,599 ಕೋ.ರೂ. ಬಂಡವಾಳ ವೆಚ್ಚಕ್ಕೆ ಬಿಜೆಪಿ ಸರ್ಕಾರ ಮಾಡಿದ ಸಾಲ ಕೇವಲ 44,549 ಕೋ.ರೂ. (73.5%) ಉಳಿದ 26.5% ಹಣವನ್ನು ತನ್ನ ರಾಜ್ಯಸ್ವದಿಂದ ಪೂರೈಸಿದೆ. ಸಿದ್ದರಾಮಯ್ಯನವರು 2025 26ರಲ್ಲಿ 71336 ಕೋಟಿ ರೂ ಬಂಡವಾಳ ವೆಚ್ಚಕ್ಕೆ ಮಾಡಿದ ಸಾಲ ರೂ. 1,16,000 ಕೋಟಿ ರೂ! 162% ಸಾಲ!! ಉಳಿದ 44,64 ಕೋಟಿ ರೂ ಏನಾಯಿತು? ಕರ್ನಾಟಕ ರಾಜ್ಯ ಸಿದ್ದರಾಮಯ್ಯನವರ ಸರ್ಕಾರದ ಆರ್ಥಿಕ ನೀತಿಗಳಿಂದಾಗಿ ಅಪಾಯದ ತುಟ್ಟತುದಿಯಲ್ಲಿದೆ!

**ಪಂಚ ಗ್ಯಾರಂಟಿಗೆ 51,004 ಕೋಟಿ ರೂ ಕಾಯ್ದಿರಿಸಲಾಗಿದೆ**

ಉಚಿತ ಗ್ಯಾರಂಟಿ ಯೋಜನೆಗಳ ಭರವಸೆ ಮೂಲಕ ಅಧಿಕಾರಿಕ್ಕೆ ಬಂದ ಕಾಂಗ್ರೆಸ್ ಪಕ್ಷ ಈಗ ಹಣ ಹೊಂದಿಸಲು ಪರದಾಡುತ್ತಿದ್ದು ಎಲ್ಲಾ ವಸ್ತುಗಳ ಮೇಲೆ ಶುಲ್ಕ ವಿಧಿಸುವ ಸ್ಥಿತಿ ತಲುಪಿದೆ. ಗ್ಯಾರೆಂಟಿಗಳಿಗಾಗಿ ಬೊಕ್ಕಸ ಹಿಗ್ಗಿಸಿಕೊಳ್ಳಲು ಪರ್ಯಾಯ ಆರ್ಥಿಕ ಸಂಪನ್ಮೂಲಗಳ ಹುಡುಕಾಟ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಹೆಚ್‌ಎಂಟಿ ಯಿಂದ ಅರಣ್ಯ ಭೂಮಿ ಹಿಂಪಡೆಯುವುದು, ಕೋಟ್ಯಾಂತರ ಬೆಲೆ ಬಾಳುವ ಬೆಂಗಳೂರು ಮೈಸೂರು Infrastructure corridor ಸ್ವಾಧೀನಕ್ಕೆ ತೆಗೆದುಕೊಳ್ಳುವ ಪ್ರಯತ್ನ, ಗ್ರಾಮೀಣ ಭಾಗದ 90 ಲಕ್ಷ ಆಸ್ತಿಗಳ ಮೇಲೆ ತೆರಿಗೆ ವಿಧಿಸುವ ಚಿಂತನೆ, ಹಾಲು, ನೀರಿನ ಮೇಲೆ ತೆರಿಗೆ – ಈ ಮೂಲಗಳಿಂದ ಮುಂದಿನ ದಿನಗಳಲ್ಲಿ ತೆರಿಗೆ ಸಂಗ್ರಹ ಮಾಡಲಾಗುವುದು. ಕೇವಲ ಜನನ ಪ್ರಮಾಣ ಪತ್ರವಲ್ಲ, ಮರಣ ಪ್ರಮಾಣ ಪತ್ರದ ಶುಲ್ಕವನ್ನೂ ಹೆಚ್ಚಿಸಿರುವ ಸರ್ಕಾರವಿದು.

ಬೆಂಗಳೂರಿನಿಂದ ನೇರವಾಗಿ ಡಿಬಿಟಿ ಮೂಲಕ ಫಲಾನುಭವಿಗಳಿಗೆ ಸಬ್ಸಿಡಿಗಳ ವರ್ಗಾವಣೆಯಾಗುತ್ತಿಲ್ಲ. ಈಗ ಜಿಲ್ಲಾಮಟ್ಟದ ಖಜಾನೆಯಿಂದ ಹಣ ಸಂದಾಯವು ಮಾಡದೆ ತಾಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳ ಖಾತೆಗೆ ಹಣ ವರ್ಗಾಯಿಸಿ ಅಲ್ಲಿಂದ ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗುತ್ತಿದೆ, ಏಕೆ ಎಂಬುದಕ್ಕೆ ಸರಕಾದರ ಬಳಿ ಉತ್ತರವಿಲ್ಲ. ನರೇಂದ್ರ ಮೋದಿ ಸರ್ಕಾರ ಡಿಬಿಟಿ ಮೂಲಕ ಇಲ್ಲಿಯವರೆಗೆ 38 ಲಕ್ಷ ಕೋ.ರೂ. ಫಲಾನುಭವಿಗಳಿಗೆ ಒಂದೇ ಮೂಲದಿಂದ ನೇರವಾಗಿ ವರ್ಗಾವಣೆ ಮಾಡಿದೆ. ಜೊತೆಗೆ ಕಾಂಗ್ರೆಸ್ ಪಕ್ಷದಂತೆ ಕಾರ್ಯಕರ್ತರಿಗೆ ಸರ್ಕಾರದ ಹಣವನ್ನು ಹಂಚಿಲ್ಲ.

2025 26ರ ಸಾಲಿನಲ್ಲಿ SCSP/ TSP ಒಟ್ಟು 42,018 ಕೋ.ರೂ. ಅನುದಾನ ನೀಡಲಾಗಿದೆ. ಕಳೆದ ವರ್ಷ ದುರುಪಯೋಗವಾದಂತೆ ಈ ಬಾರಿಯೂ ದುರುಪಯೋಗವಾಗುವುದಿಲ್ಲ ಎನ್ನುವ ಗ್ಯಾರಂಟಿಯಿಲ್ಲ, ಮನೆಯ ಯಜಮಾನನಿಗೆ ತಿಂಗಳಿಗೆ 6,000 ರೂ ಹೆಚ್ಚು ತೆರಿಗೆ ವಿಧಿಸಿ ಯಜಮಾನತಿಗೆ 2,000 ರೂ ಕೊಡುತ್ತಿರುವ ಗ್ಯಾರಂಟಿ ಯೋಜನೆ ಇದು.

| ಗ್ಯಾರಂಟಿ ಯೋಜನೆಗಳು | | | | ಲಕ್ಷ ಕೋ.ರೂ.ಗಳಲ್ಲಿ |
|---|---|---|---|---|
| ಇಲಾಖೆ | ಲೆಕ್ಕ 2023-24 | ಆಯವ್ಯಯ ಅಂದಾಜು 2024-25 | ಪರಿಷ್ಕೃತ ಅಂದಾಜು | ಆಯವ್ಯಯ ಅಂದಾಜು |
| ಗೃಹ ಲಕ್ಷ್ಮಿ | 16964.40 | 28608.40 | 28608.43 | 28608.00 |
| ಗೃಹ ಜ್ಯೋತಿ | 900.00 | 9657.00 | 9657.00 | 10100.00 |
| ಅನ್ನ ಭಾಗ್ಯ | 5706.00 | 8079.00 | 8079.03 | 6426.00 |
| ಶಕ್ತಿ | 3200.00 | 5015.00 | 5015.00 | 5300.00 |
| ಯುವನಿಧಿ | 88.88 | 650.00 | 410.15 | 600.00 |
| ಒಟ್ಟು | 34859.28 | 52009.40 | 51769.61 | 51034.00 |

**ಕೃಷಿ ಮತ್ತು ರೈತ :** ನಾನು ರೈತರ ಕುಲದ ಪರ! ರೈತರ ಬೇಡಿಕೆಗಳಿಗೆ ಸ್ಪಂದನೆ ನನ್ನ ಮೊದಲ ಆದ್ಯತೆ. ಎಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರದ ಎರಡನೆಯ ಅವಧಿಯಲ್ಲಿ ಕೃಷಿ ಪಂಪ್‌ಸೆಟ್‌ಗಳಿಗೆ ಟ್ರಾನ್ಸ್‌ಫಾರ್ಮರ್ ಸಮೇತ ಉಚಿತವಾಗಿ ಮೂಲ ಸೌಕರ್ಯ ಕಲ್ಪಿಸುವ ಯೋಜನೆಯನ್ನು ಸ್ಥಗಿತಗೊಳಿಸಲಾಗಿದೆ. ಕೃಷಿ ಕೊಳವೆ ಬಾವಿಗಳ ವ್ಯುತ್ ಸಂಪರ್ಕದ ಖರ್ಚು-ವೆಚ್ಚದ ಭಾರಕ್ಕೆ ರೈತರು ಬಸವಳಿದಿದ್ದಾರೆ.

ರೈತರಿಗೆ ವರವಾಗಿದ್ದ UNIP (ಅನಧಿಕೃತ ಪಂಪ್ ಸೆಟ್‌ಗಳ ಅಕ್ರಮ -ಸಕ್ರಮ) ಮತ್ತು ಶೀಘ್ರ ವಿದ್ಯುತ್ ಯೋಜನೆಗಳಿಗೆ ಇಂಧನ ಇಲಾಖೆಯು 2023ರ ಸೆಪ್ಟೆಂಬರ್‌ನಲ್ಲಿ ಕೊಕ್ ಕೊಟ್ಟಿದೆ. ಇದರಿಂದಾಗಿ ರೈತರೇ ಸ್ವಂತ ಖರ್ಚಿನಲ್ಲಿ ಕೃಷಿ ಕೊಳವೆ ಬಾವಿಗಳಿಗೆ ದ್ಯುತ್ ಸಂಪರ್ಕ ಪಡೆಯಬೇಕಾಗಿದೆ. ಇದರಿಂದಾಗಿ ಸಣ್ಣಪುಟ್ಟ ರೈತರು ಕೃಷಿಂದಲೇ ವಿಮುಖರಾಗುತ್ತಿದ್ದಾರೆ. Phase electricity Fail: ಬೆಳೆಗಳಿಗೆ ನೀರುಣಿಸಲು ನಿರಂತರವಾಗಿ 7 ಘಂಟೆ three phase ವಿದ್ಯುತ್ ನೀಡಬೇಕು. ಆದರೆ load shedding ನಿಂದಾಗಿ 3-4 ಘಂಟೆ ಮಾತ್ರ ವಿದ್ಯುತ್ ಪೂರೈಕೆ ಆಗುತ್ತಿದೆ. ನದಿಯಿಂದ ನೀರು ಗದ್ದೆಗೆ ಬರುವ ಮುನ್ನವೇ ವಿದ್ಯುತ್ ಕೈ ಕೊಡುತ್ತಿದೆ. ಈ ವಿದ್ಯುತ್ ಅಭಾವದಿಂದಾಗಿ ಬೆಳೆ ಉಳಿಸಿಕೊಳ್ಳಲು ರೈತರು ಪರದಾಡುತ್ತಿದ್ದಾರೆ. ಓಬಿರಾಯನ ಕಾಲದ ವಿದ್ಯುತ್ ಲೈನ್‌ಗಳಲ್ಲಿ ಹೊಸ ಬೇಡಿಕೆಯಷ್ಟು ವಿದ್ಯುತ್ ಪೂರೈಕೆ ಸಾಧ್ಯವಾಗದೇ ಬೇಸಿಗೆ ದಿನಗಳಲ್ಲಿ ಸಮಸ್ಯೆ ಉಲ್ಬಣವಾಗುತ್ತಿದೆ.

17,000 ಮೆಗಾ ವ್ಯಾಟ್ ಸದ್ಯ ರಾಜ್ಯದ ಪ್ರತಿದಿನದ ಬೇಡಿಕೆ. ಈಗ ಆಗುತ್ತಿರುವ ವಿದ್ಯುತ್ ಉತ್ಪಾದನೆ ಕೇವಲ 12,000 ಮೆಗಾ ವ್ಯಾಟ್. ಬೇಸಿಗೆಯಲ್ಲಿ ಪ್ರತಿದಿನ ವಿದ್ಯುತ್ ಬೇಡಿಕೆ 19,000 ಮೆಗಾ ವ್ಯಾಟ್ ದಾಟುವ ನೀರಿಕ್ಷೆ ಇದೆ. ದುರಂತವೆಂದರೆ 2018ರಲ್ಲಿ ಅಂದರೆ ಸಿದ್ದರಾಮಯ್ಯನವರ ಆಡಳಿತದ ಮೊದಲನೆಯ ಅವಧಿಯಲ್ಲಿ ವಿದ್ಯುತ್ ಕೊರತೆಯ ಸಮಸ್ಯೆಎದುರಿಸುತ್ತಿದ್ದ ಕರ್ನಾಟಕ ರಾಜ್ಯ, ಬಿಜೆಪಿ ಸರ್ಕಾರದ ಅವಧಿಯಲ್ಲಿ 2023ರ ವೇಳೆಗೆ- ಕಾಂಗ್ರೆಸ್‌ಗೆ ಅಧಿಕಾರ ಹಸ್ತಾಂತರ ಮಾಡುವಾಗ- ವಿದ್ಯುತ್ ಉತ್ಪಾದನೆಯಲ್ಲಿ ಹೆಚ್ಚುವರಿ ಸಾಧಿಸಿತ್ತು!! ಅಂತಹ ಕರ್ನಾಟಕವನ್ನು ಕೇವಲ ಎರಡು ವರ್ಷಗಳಲ್ಲಿ ವಿದ್ಯುತ್ ಕ್ಷಾಮದ ಭೀತಿಗೆ ತಳ್ಳುತ್ತಿರುವ ಸಾಧನೆ ಈ ಕಾಂಗ್ರೆಸ್ ಸರಕಾರದ್ದು. ಆದರೆ 2025-26ಸಾಲಿನ ಬಜೆಟ್‌ನಲ್ಲಿ ಈ ಸಮಸ್ಯೆಗೆ ಉತ್ತರವೇ ಇಲ್ಲ.

### ವಿದ್ಯಾರ್ಥಿಗಳ ಭವಿಷ್ಯ ಅಂಧಕಾರದಲ್ಲಿ

ರಾಜ್ಯದಲ್ಲಿ 1.41 ಲಕ್ಷ ಶಿಕ್ಷಕರ ಕೊರತೆ ಇದೆ. 6,400 ಸರಕಾರಿ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 22 ಲಕ್ಷ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ಗಣಿತ ಬೋಧಿಸಲು ಇರುವ ಶಿಕ್ಷಕರ ಸಂಖ್ಯೆ ಕೇವಲ 8895! ಈ ಮಕ್ಕಳ ಮುಂದಿನ ಭವಿಷ್ಯವನ್ನು ನೆನೆಸಿಕೊಂಡರೆ ಹೆದರಿಕೆಯಾಗುತ್ತದೆ. ಕಾಲೇಜುಗಳಲ್ಲೂ ಉಪನ್ಯಾಸಕರ ಕೊರತೆ ದೊಡ್ಡ ಮಟ್ಟದಲ್ಲಿದೆ. 438 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 400 ಕಾಲೇಜುಗಳಲ್ಲಿ ಪ್ರಾಂಶುಪಾಲರ ಹುದ್ದೆ ಖಾಲಿ ಇದೆ. ಶಾಲಾ ಕೊಠಡಿಗಳಿಲ್ಲದೆ ಮಕ್ಕಳನ್ನು ಗಿಡದ ನೆರಳಿನಡಿ, ದೇವಸ್ಥಾನದಲ್ಲಿ ಕೂರಿಸಿ ಪಾಠ ಮಾಡಲಾಗುತ್ತಿದೆ. ಸಮರ್ಪಕ ಕುಡಿಯುವ ನೀರು, ಶೌಚಗೃಹದ ಸಮಸ್ಯೆ, ಜೊತೆಗೆ ಹಾಸ್ಟೆಲ್‌ನಲ್ಲಿ ಸೀಟು ಸಿಗದೆ, ಬಾಡಿಗೆ ರೂನಲ್ಲಿ ಇದ್ದು ಓದುವ ಆರ್ಥಿಕ ಸಾಮರ್ಥ್ಯ ಇಲ್ಲದೆ ಅರ್ಧಕ್ಕೆ ಶಾಲೆ ಬಿಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಸಿದ್ದರಾಮಯ್ಯನವರ ಆಡಳಿತದಲ್ಲಿ ಗಣನೀಯವಾಗಿ ಏರುತ್ತಿದೆ. ಈ ಯಾವ ಸಮಸ್ಯೆಗಳಿಗೂ 2025-26ರಲ್ಲಿ ಬಜೆಟ್ ಅರ್ಥಪೂರ್ಣವಾಗಿ ಸ್ಪಂದಿಸಿಲ್ಲ.

ದೇಶದಲ್ಲಿ ಹೊಸದಾಗಿ 1200 ನೂತನ ವಿಶ್ವವಿದ್ಯಾಲಯಗಳ ನಿರ್ಮಾಣವಾಗಬೇಕು ಎಂಬದು ಶಿಕ್ಷಣ ತಜ್ಞರ ಅಭಿಪ್ರಾಯ. ಆದರೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ 9 ವಿಶ್ವವಿದ್ಯಾಲಯಗಳನ್ನು ಮುಚ್ಚಲು ಚಿಂತಿಸುತ್ತಿದೆ. (ಬಿಜೆಪಿಯ ತೀವ್ರ ವಿರೋಧದಿಂದ ತಾತ್ಕಾಲಿಕವಾಗಿ ಸರಕಾರ ಈ ನಿರ್ಧಾರದಿಂದ ಂದೆ ಸರಿದಿದೆ)

ಆರೋಗ್ಯ ವಲಯ

ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ನಮ್ಮ ಬೆಂಗಳೂರು ನಗರವು ಒಂದಾದರೂ ಶೌಚಾಲಯದಂತಹ ಮೂಲ ಸೌಕರ್ಯ ಒದಗಿಸುವಲ್ಲಿ ಬಹಳ ಹಿಂದಿದೆ. ಪ್ರಸ್ತುತ 1.4 ಕೋಟಿ ಜನಸಂಖ್ಯೆಗೆ ಕೇವಲ 803 ಸಾರ್ವಜನಿಕ ಶೌಚಾಲಯಗಳಿವೆ. ಇವುಗಳಲ್ಲಿ ಹೆಚ್ಚಿನವು ಕಾಲಿಡಲು ಆಗದ ಅಸಹ್ಯ ಪರಿಸ್ಥಿತಿಯಲ್ಲಿವೆ, ಬಳಕೆಗೆ ಯೋಗ್ಯವಾಗಿಲ್ಲ ಎಂದು ಆರ್.ವಿ. ವಿಶ್ವವಿದ್ಯಾಲಯ ನಡೆಸಿದ ಅಧ್ಯಯನದಲ್ಲಿ ಬಹಿರಂಗವಾಗಿದೆ.

ಜನರಿಗೆ ಗ್ಯಾರಂಟಿ ಭಾಗ್ಯಗಳ ಜೊತೆಗೆ ರಾಜ್ಯದ ಬಡ ಅಸಹಾಯಕ ಬಾಣಂತಿಯರಿಗೆ ಸಾನ ಗ್ಯಾರೆಂಟಿಯೂ ಸಿದ್ದರಾಮಯ್ಯನವರ ಸರ್ಕಾರ ನೀಡುತ್ತಿರುವುದು ವಾಸ್ತವದ ಸಂಗತಿ.



# ಅಟಲ್‌ಜೀ ನೆನಪುಗಳ ಬುತ್ತಿ...

## ಅಟಲ್‌ಜೀ ರವರೊಂದಿಗಿನ ಒಡನಾಟಗಳ ಒಂದಿಷ್ಟು ನೆನಪು...

### ಅಚ್ಚಾ.. ಚಾಯ್ ಪಿಲಾವ್ರೋ...

ಅಟಲ್ ಜಿ ಯವರು ಪ್ರಧಾನಿಗಳಾಗಿದ್ದ ಸಂದರ್ಭದಲ್ಲಿ ನಡೆದ ಘಟನೆ.. ಶ್ರೀ ಅನಂತ್ ಕುಮಾರ್‌ರವರು ಹೇಳಿದ್ದು ನೆನಪಿನಲ್ಲಿದೆ. ಒಮ್ಮೆ ಪ್ರಧಾನಿಗಳ ಭೇಟಿಯಾಗಲು ಶ್ರೀ ಯಡಿಯೂರಪ್ಪನವರ ಜೊತೆ ಅನಂತ್ ಕುಮಾರ್ ಅವರು ಪ್ರಧಾನಿಗಳ ಕಾರ್ಯಾಲಯಕ್ಕೆ ಹೋಗಿ ಅವರೊಂದಿಗೆ ವಿಷಯ ಪ್ರಸ್ತಾಪ ಮಾಡುತ್ತಿದ್ದರಂತೆ..

ಆಗ ಅಂದಿನ ಕೇಂದ್ರ ಸಚಿವೆಯಾಗಿದ್ದ ಮಮತಾ ಬ್ಯಾನರ್ಜಿ ಅವರು ಬಿರುಗಾಳಿಯಂತೆ ಬಾಗಿಲನ್ನು ತೆಗೆದುಕೊಂಡು ನುಗ್ಗಿ ಒಳ ಬರುತ್ತಾ ಕೋಪದಲ್ಲಿ ಅಟಲ್ ಜಿ ಆಪ್ ಇಸ್ತೀಫಾ ದೋ (ಅಟಲ್ ಜಿ ನೀವು ರಾಜೀನಾಮೆ ನೀಡಿ) ಎಂದು ದೊಡ್ಡ ದನಿಯಲ್ಲಿ ಹೇಳುತ್ತಾ ಯಡಿಯೂರಪ್ಪನವರ ಪಕ್ಕದಲ್ಲಿಯೇ ಕುಳಿತರಂತೆ.. ಮಮತಾ ಬ್ಯಾನರ್ಜಿ ಅವರ ಮುಖಭಾವ ಸಿಟ್ಟಿನಿಂದ ತುಂಬಿತ್ತು.. ಅವರ ನಡವಳಿಕೆಯಿಂದ ಕೋಪಗೊಂಡಿದ್ದ ಯಡಿಯೂರಪ್ಪನವರು ಮಮತಾ ಬ್ಯಾನರ್ಜಿ ಅವರನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದರಂತೆ. ಅನಂತ್ ಕುಮಾರ್ ಅವರು ಸೂಕ್ಷ್ಮವಾಗಿ ಯಡಿಯೂರಪ್ಪನವರ ಕೈ ಹಿಡಿದುಕೊಳ್ಳುತ್ತಿದ್ದರಂತೆ. ಇಂತಹ ಪ್ರಕ್ಷುಬ್ಧ ಸನ್ನಿವೇಶದಲ್ಲಿ ಅಟಲ್ ಜಿ ಯವರು ಅಷ್ಟೇ ಸಹಜತೆಯಿಂದ ತಣ್ಣಗೆ ಪ್ರತಿಕ್ರಿಯಿಸುತ್ತಾ ಅಚ್ಚಾ ಚಾಯ್ ಪಿಲಾವ್ರೋ ಎಂದಾಗ, ಸೇವಕನೊಬ್ಬ ಚಹಾ



ಡಾ. ಎ.ಎಚ್. ಶಿವಯೋಗಿಸ್ವಾಮಿ,
ರಾಜ್ಯ ಪ್ರಮುಖ್,
ಅಟಲ್‌ಜೀ ಜನ್ಮ ಶತಮಾನೋತ್ಸವ ಅಭಿಯಾನ

ತಂದು ಮಮತಾ ಬ್ಯಾನರ್ಜಿ ಅವರ ಮುಂದೆ ಇಟ್ಟನಂತೆ. ಗಟಗಟನೆ ಚಹಾ ಕುಡಿದ ಮಮತಾ ಬ್ಯಾನರ್ಜಿ ಬಂದಷ್ಟೇ ವೇಗವಾಗಿ ಬಿರುಗಾಳಿಯಂತೆ ಬಾಗಿಲು ತೆರೆದುಕೊಂಡು ಹೊರ ನಡೆದರಂತೆ. ಅನಂತ್ ಕುಮಾರ್ ಅವರು ಹೇಳಿದ ಮಾತು ಇನ್ನೂ ನೆನಪಿದೆ ಅಂದು ಯಡಿಯೂರಪ್ಪನವರು ಮಮತಾ ಬ್ಯಾನರ್ಜಿಯನ್ನು ನೋಡುತ್ತಿದ್ದ ರೀತಿ, ಅಟಲ್ ಜಿ ಯವರು ಇಲ್ಲದಿದ್ದಲ್ಲಿ ಮಮತಾ ಬ್ಯಾನರ್ಜಿಯ ಕೆನ್ನೆಗೆ ಬಾರಿಸುತ್ತಿದ್ದರೇನೋ ಎನ್ನಿಸುವಂತಿತ್ತು ಎಂದಿದ್ದರು.

24 ವಿವಿಧ ಸಿದ್ದಾಂತಗಳ ಪಕ್ಷಗಳ ತಂಡವನ್ನು ಎನ್.ಡಿ.ಎ. ಅಡಿಯಲ್ಲಿ ತಂದು ಐದು ವರ್ಷಗಳ ಕಾಲ ಪ್ರಪ್ರಥಮ ಕಾಂಗ್ರೆಸ್ಸೇತರ ಸರ್ಕಾರವನ್ನು ಯಶಸ್ವಿಯಾಗಿ ನಡೆಸಿದ ಅಟಲ್ ಜಿ ಯವರ ಕರ್ತೃತ್ವ ಶಕ್ತಿಯ ಗುಟ್ಟಿನ ಪರಿಚಯವೆಂದರೇ ಇದೇ . . .

## 1996ರ ಲೋಕಸಭಾ ಚುನಾವಣೆಯ ಸಂದರ್ಭ...

ಶ್ರೀ ಅಟಲ್ ಜಿ ಅವರು ದಾವಣಗೆರೆ ಲೋಕಸಭಾ ಚುನಾವಣಾ ಪ್ರಚಾರಕ್ಕೆ (ಅಂದಿನ ಅಖಂಡ ಚಿತ್ರದುರ್ಗ ಜಿಲ್ಲೆ) ಹರಿಹರಕ್ಕೆ ಬಂದಿದ್ದರು. ಅವರ ಜೊತೆ ಅಂದಿನ ವಿಧಾನ ಪರಿಷತ್ ಸದಸ್ಯರು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಆದ ಶ್ರೀ ಡಿ.ಎಚ್. ಶಂಕರಮೂರ್ತಿಯವರು ಬಂದಿದ್ದರು. ರಾಜ್ಯದಲ್ಲಿ ಅಂದಿನ ದಿನಗಳಲ್ಲಿ ಕೇಂದ್ರದ ಯಾವುದೇ ನಾಯಕರು ಬಂದಲ್ಲಿ ಭಾಷಣದ ಅನುವಾದವನ್ನು ಕನ್ನಡದಲ್ಲಿ ಶ್ರೀ ಶಂಕರಮೂರ್ತಿಗಳೇ ಮಾಡುತ್ತಿದ್ದರು. ದಾವಣಗೆರೆಯ ನಮ್ಮ ತಂಡ ಅವರ ಬಳಿ ಮಾತನಾಡಿ ಶ್ರೀ ಅಟಲ್ ಜಿ ಅವರ ಕಾರ್ಯಕ್ರಮ ದಾವಣಗೆರೆಗೂ ದಯಟ್ಟು ಕೊಡಿಸಿ ಎಂದು ವಿನಂತಿ ಮಾಡಿದೆವು. ಶಂಕರಮೂರ್ತಿಗಳು ಒಳ್ಳೆಯದು, ಒಂದು ಕೆಲಸ ಮಾಡಿ ಈಗ ಅಟಲ್ ಜಿ ವಾಪಸ್ ಬೆಂಗಳೂರಿಗೆ ಹೋಗುತ್ತಿದ್ದಾರೆ. ಅವರ ಕಾರಿನಲ್ಲಿ ನೀವು ಒಬ್ಬರು ಹೋಗಿ ನಾಳೆ ಬೆಳಗ್ಗೆ ಬೆಂಗಳೂರಿನಲ್ಲಿ ಯಡಿಯೂರಪ್ಪನವರು ಹಾಗೂ ಅನಂತ್ ಕುಮಾರ್ ಅವರಿಗೆ ಭೇಟಿ ಮಾಡಿ ನಿಶ್ಚಯ ಮಾಡಿಕೊಳ್ಳಿ ಎಂದು ಹೇಳಿ, ಅವರು ಶಿವಮೊಗ್ಗಕ್ಕೆ ಹೊರಟರು. ನಾವು ಅಂದಿನ ನಮ್ಮ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾದ ಜಿ ಕೆ ಸುರೇಶ್ ಅವರಿಗೆ ಅಟಲ್ ಜಿ ಅವರ ಜೊತೆ ಕಾರಿನಲ್ಲಿ ಬೆಂಗಳೂರಿಗೆ ಕಳಿಸಿದೆವು.

## ಮುಂದಿನ ವಿಷಯ... ಸುರೇಶ್ ಅವರ ಅನುಭವ ಅವರ ಮಾತುಗಳಲ್ಲಿ..:

ನಾವು ಹರಿಹರದಿಂದ ಹೊರಟಾಗ ರಾತ್ರಿ ಸುಮಾರು 9 ರಿಂದ 9:30 ಆಗಿತ್ತು. ಕಾರಿನಲ್ಲಿ ಅಟಲ್ ಜಿ ಅವರು ಹಿಂದೆ ಕುಳಿತಿದ್ದು, ನಾನು ಚಾಲಕರ ಪಕ್ಕದಲ್ಲಿ ಕುಳಿತಿದ್ದೆನು. ದಾವಣಗೆರೆ ದಾಟುತ್ತಿರುವಾಗ ಅಟಲ್ ಜಿ ಯವರು ಏ ಕೌನ್ ಸಾ ಶಹರ್ ಹೈ ಎಂದು ಕೇಳಿದರು..

ಆಗ ನಾನು ಎ ದಾವಣಗೆರೆ ಹೈ.. ಆಪ್ ಇದರ್ ಆನೆವಾಲೆ ಹೈ ಎಂದೆನು. ಆಗ ಅವರು ನನಗೆ ಇದರ್..? ಮೈ ತೊ ನ ಆವೂಂಗಾ ಎಂದರು..! ಚಿತ್ರದುರ್ಗ ದಾಟುವ ವೇಳೆಗೆ ಅವರು ನಮ್ಮ ವಾಹನ ನಿಲ್ಲಿಸಿ ಎಸ್ಕಾರ್ಟ್ ವಾಹನದವರಿಗೆ ಕರೆದು, ನೀವು ನಿಮ್ಮ ಪಾಡಿಗೆ ಹೋಗಿರಿ... ನಾವು ಕುಮಾರ ಕೃಪ ಗೆಸ್ಟ್ ಹೌಸ್‌ಗೆ ಬರುತ್ತೇವೆ ಎಂದು ಅವರನ್ನು ಕಳಿಸಿಬಿಟ್ಟರು..

ನಂತರ ಆರಾಮಾಗಿ ಕಣ್ಣು ಮುಚ್ಚಿಕೊಂಡು ಮಲಗಿದರು.. ಮಾರ್ಗ ಮಧ್ಯದಲ್ಲಿ ಒಮ್ಮೆ ಎಚ್ಚರಗೊಂಡು ಗಾಡಿ ನಿಲ್ಲಿಸಲು ಹೇಳಿದರು. ಹಾಗೂ ಮರದ ಪಕ್ಕ ಹೋಗಿ ನಿಂತು ಜಲ ಬಾಧೆ ತೀರಿಸುತ್ತಿದ್ದರು.. ನನಗೆ ತುಂಬಾ ಗಾಬರಿಯಾಗಿತ್ತು. ಅಪರಾತ್ರಿಯ ವೇಳೆ ಯಾರು ಜನಸಂಚಾರವಿಲ್ಲದ ರಸ್ತೆ, ನಾನು ಚಾಲಕ ಬಿಟ್ಟರೆ ಮತ್ತಾರು ಜೊತೆಯಲ್ಲಿ ಇಲ್ಲ.. ಏನಾದರೂ ತೊಂದರೆ ಆದರೆ ಎಂದು ಮನಸ್ಸಿನಲ್ಲಿ ಆತಂಕ ಉಂಟಾಯಿತು. ಯಾವುದರ ಪರಿವೇ ಇಲ್ಲದಂತೆ ಅಟಲ್ ಜಿ ಯವರು ಹಾಯಾಗಿ ತಮ್ಮದೇ ಲೋಕದಲ್ಲಿದ್ದು ನಂತರ ನಿಧಾನವಾಗಿ ನಡೆದು ಬಂದು ಕಾರನ್ನು ಏರಿದರು..! ಕಾರು ಹೊರಟಾಗ ನೆಮ್ಮದಿಯ ನಿಟ್ಟುಸಿರು ಬಿಟ್ಟೆನು.

ತಡರಾತ್ರಿ ಕುಮಾರ ಕೃಪ ಗೆಸ್ಟ್ ಹೌಸ್ ಗೆ ತಲುಪಿದೆವು. ಬೆಳಗ್ಗೆ ಶ್ರೀ ಅನಂತ್ ಕುಮಾರ್ ಅವರು ಮೊದಲು ಬಂದರು.. ಅವರ ಬಳಿ ನಾನು ದಾವಣಗೆರೆಗೆ ಅಟಲ್ ಜಿ ಅವರ ಕಾರ್ಯಕ್ರಮ ಜೋಡಿಸಲು ವಿನಂತಿಸಿದಾಗ, ಅನಂತ್‌ಕುಮಾರ್ ಅವರು ನಿನ್ನೆ ಹರಿಹರಕ್ಕೆ ಬಂದು ಮತ್ತೆ ದಾವಣಗೆರೆಗೆ ಬರುವುದು ಸಾಧ್ಯವೇ.. ನೀನೇ ಯೋಚಿಸಬಹುದಾಗಿತ್ತಲ್ಲವೇ..? ಎಂದಾಗ ಬಂದ ದಾರಿಗೆ ಸುಂಕವಿಲ್ಲದಂತೆ, ಬಸ್ಸಿನಲ್ಲಿ ದಾವಣಗೆರೆಗೆ ಹೊರಟೆನು...!



## ಮೇರಾ ಪೈಸಾ ದೇತಾ ಹೂಂ ಕ್ಯಾ..

ಶ್ರೀ ವೆಂಕಯ್ಯ ನಾಯ್ಡು ಅವರು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗ ನಡೆದ ಘಟನೆ.. ಅವರೇ ಹೇಳಿದ್ದು ನೆನಪಿದೆ..

ಒಮ್ಮೆ ಅಟಲ್ ಜಿ ಯವರು ಕ್ಯಾಬಿನೆಟ್ ಸಭೆಯಲ್ಲಿ ಗ್ರಾಮೀಣ ರಸ್ತೆಗಳನ್ನು ಸುಧಾರಿಸಿ ಹತ್ತಿರದ ನಗರಗಳಿಗೆ ಜೋಡಿಸುವ ಬಗ್ಗೆ ಸಲಹೆ ನೀಡಿದರಂತೆ. ಅದರಂತೆ ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆಯೊಂದನ್ನು ರೂಪಿಸಿ ರಸ್ತೆಗಳಿಗೆ ಅಟಲ್ ಜಿ ಗ್ರಾಮ ಸಡಕ್ ಯೋಜನಾ ಎಂದು ಹೆಸರು ನೀಡಿ, ವೆಂಕಯ್ಯ ಜಿ ಯವರು

ಪ್ರಧಾನಿಗಳ ಅನುಮೋದನೆ ಪಡೆಯಲು ಕಡತದೊಂದಿಗೆ ಅಟಲ್ ಜಿ ಯವರ ಭೇಟಿ ಮಾಡಿದರಂತೆ. ಯೋಜನೆಯನ್ನು ಒಪ್ಪಿದ ಅಟಲ್ ಜಿ ಯವರು.. ಏತೋ ಠೀಕ್ ಹೈ.. ಲೇಕಿನ್ ಮೇರಾ ಪೈಸಾ ದೇತಾ ಹೂಂ ಕ್ಯಾ..?... ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನಾ ರಖೊ.. ಎಂದರಂತೆ.. ಅಂದರೆ ಸರಕಾರಿ ಕಾರ್ಯಕ್ರಮ ಅದಕ್ಕೆ ಹಣ ಕೊಡುತ್ತಿರುವುದು ಸರಕರ, ನಾನೇ ನೂ ಹಣ ಕೊಡುತ್ತಿಲ್ಲ. ನನ್ನ ಹೆಸರು ಏಕೆ ಎಂಬುದು ಅಟಲ್‌ಜೀಯವರ ಅನಿಸಿಕೆ. ಈ ದೃಷ್ಟಿಯಿಂದಲೇ ಅವರ ಕಾಲದಲ್ಲಿ ಅನುಷ್ಠಾನಗೊಂಡ ಸುವರ್ಣ ಚತುಷ್ಪಥ ರಸ್ತೆ ಯೋಜನೆಗೂ ತಮ್ಮ ಹೆಸರವನ್ನು ಇಡಲು ನಿರಾಕರಿಸಿದ್ದು ಅಟಲ್‌ಜೀಯವರ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಬಹುದಾದ ಹೆಗ್ಗಳಿಕೆಯ ವಿಷಯ. ಇದು ಅಟಲ್ ಜಿ ಹಾಕಿಕೊಟ್ಟ ಮಾರ್ಗ..

## ರಾಷ್ಟ್ರೀಯ ಅಧಿವೇಶನದಲ್ಲಿ ಭೋಜನಕ್ಕೆ ಸರತಿ ಸಾಲಿನಲ್ಲಿ ನಿಂತ ಪ್ರಧಾನಿ...

1998ರಲ್ಲಿ ಬೆಂಗಳೂರಿನಲ್ಲಿ ನಡೆದ ಬಿಜೆಪಿ ರಾಷ್ಟ್ರೀಯ ಅಧಿವೇಶನದ ಸಂದರ್ಭ. ಆಗ ಮಾನ್ಯ ಅಟಲ್ ಜಿ ಯವರು ಪ್ರಧಾನಮಂತ್ರಿಯಾಗಿ, ಶ್ರೀ ಅಡ್ವಾಣಿಜಿಯವರು ಉಪ ಪ್ರಧಾನಿಯಾಗಿ ಮತ್ತು ಗೃಹ ಸಚಿವರಾಗಿ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಶ್ರೀ ಕುಶಭಾವು ಠಾಕ್ರೆ ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದರು. ಶ್ರೀ ವೆಂಕಯ್ಯ ನಾಯ್ಡು ಅವರು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಜ್ಯಸಭಾ ಸದಸ್ಯರಾಗಿದ್ದರು. ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯನಾಗಿದ್ದ ನನಗೆ ರಾಜ್ಯ ಕಾರ್ಯದರ್ಶಿಯ ಜವಾಬ್ದಾರಿ ನೀಡಲಾಗಿತ್ತು. ಮಾನ್ಯ ಬಿ.ಎಸ್. ಯಡಿಯೂರಪ್ಪನವರು ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದರು. ರಾಷ್ಟ್ರೀಯ ಕಾರ್ಯಕಾರಿಣಿಯ ವ್ಯವಸ್ಥೆಯ ದೃಷ್ಟಿಯಿಂದ ರಚಿಸಲಾದ ತಂಡದಲ್ಲಿ ನನಗೆ 'ವೇದಿಕೆ ಮತ್ತು ವಸತಿ' ಜವಾಬ್ದಾರಿ ನೀಡಲಾಗಿತ್ತು.

ಬೆಂಗಳೂರಿನ ವುಡ್ ಲ್ಯಾಂಡ್ ಹೋಟೆಲಿನ ಸಭಾಂಗಣದಲ್ಲಿ ನಡೆದ ಕಾರ್ಯಕಾರಿಣಿ ಪ್ರತಿನಿಧಿಗಳಿಗೆ ಹೋಟೆಲ್‌ನಲ್ಲಿಯೇ ವಸತಿ ವ್ಯವಸ್ಥೆ ಮಾಡಲಾಗಿತ್ತು. ಸಭಾಂಗಣದ ವೇದಿಕೆಯ ಮುಂಭಾಗದಲ್ಲಿ ಇದ್ದ ಎರಡು ಕುಟೀರಗಳಲ್ಲಿ ಮಾನ್ಯ ಪ್ರಧಾನಿಗಳಿಗೆ ಹಾಗೂ ಉಪ ಪ್ರಧಾನಿಗಳಿಗೆ ತಾತ್ಕಾಲಿಕ ವಿಶ್ರಾಂತಿಗೆ ಮತ್ತು ಭೋಜನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಮೊದಲ ದಿನ ಉದ್ಘಾಟನಾ ಅವಧಿಯ ನಂತರ ಭೋಜನ ವಿರಾಮದ ಸಂದರ್ಭದಲ್ಲಿ, ಭೋಜನಕ್ಕೆ ಪ್ರತಿನಿಧಿಗಳಿಗೆ ಸಭಾಂಗಣದ ಹಿಂಬದಿಯಲ್ಲಿ, ಬಫೆ ವ್ಯವಸ್ಥೆ ಯೋಜನೆಯಾಗಿತ್ತು. ಮಾನ್ಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಕುಶಭಾವು ಜಿ ಅವರು ಪ್ರತಿನಿಧಿಗಳ ಜೊತೆ ಮಾತನಾಡುತ್ತ ಕುಳಿತಿದ್ದರು.. ಆಗ ವೆಂಕಯ್ಯಜಿಯವರು ನನಗೆ ಅಧ್ಯಕ್ಷ ಜಿ ಕೋ ಥಾಲಿ ಲೇಕರ್ ಆವೊ ಎಂದರು.. ಆಗ ನಾನು ಕುಶುಭಾವೂ ಜಿ ಯವರ ಬಳಿ ಹೋಗಿ ಆಪ್ ಕೋ ಮೈ ಥಾಲಿ ಲೇಕರ್ ಆವೂ ಎಂದು ಕೇಳಿದೆ..

ಅದಕ್ಕೆ ಅವರು ಅಟಲ್ ಜಿ ಕಿದರ್ ಹೈ ಎಂದು ಕೇಳಿದರು..

ನಾನು ಉನ್ಕಾ ಔರ್ ಅಡ್ವಾನಿ ಜಿ ಕಾ ಪ್ರಬಂಧ್ ರೂಮ್ ಮೇ ಹೋಗಯಾ ಹೈ ಎಂದೆ..

ಅಚ್ಚಾ ಎನ್ನುತ್ತಾ ತಿರುಗಿ ನೋಡಿದ ಕುಶುಬಾವುಜಿಯವರು.. ಅಟಲ್ ಜೀ ತೋ ಉದರ್ ಹೈ ಎಂದು 'ಬಫೆ'ಗೆ ಸರತಿಯಲ್ಲಿ ನಿಂತಿದ್ದ ಪ್ರತಿನಿಧಿಗಳ ಸಾಲಿನ ಕಡೆಗೆ ತೋರಿಸಿದರು..

ನೋಡಿದರೆ ಅಟಲ್ ಜಿ ಮತ್ತು ಅವರ ಹಿಂದೆ ಅಡ್ವಾಣಿ ಜಿ ತಟ್ಟೆ ಹಿಡಿದುಕೊಂಡು ಸಾಲಿನಲ್ಲಿ ನಿಂತಿದ್ದರು. ಅವರ ಮುಂದೆ ಪ್ರತಿನಿಧಿಗಳು ಇದ್ದರು. ನನಗೆ ಗಾಬರಿಯಾಯಿತು. ಏನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಕುಶುಬಾವು ಜಿ ಯವರು, ಅಗರ್ ಆಪ್ ಲೇಕರ್ ಆಯೆಂಗೆ ತೊ, ಆಪ್ ಕೋ ಜಿತನ ಮಾಂಗ್ ತೇ ಹೈ.. ಉತನ ಲೇಕರ್ ಆಯೆಂಗೆ.. ಲೆಕಿನ್ ಮೈ ಲಿಯಾ ತೊ ಮುಝೆ ಜಿತನಾ ಚಾಯೆ, ಉತನಾ ಲೇತಾ ಹೂಂ(ನೀವು ತೆಗೆದುಕೊಂಡು ಬಂದರೆ ನಿಮಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಬರುತ್ತೀರಾ, ನಾನೇ ಹೋಗಿ ತೆಗೆದುಕೊಂಡರೆ ನನಗೆ ಬೇಕಾದಷ್ಟನ್ನು ತೆಗೆದುಕೊಳ್ಳುತ್ತೇನೆ) ಎಂದು ಹೇಳುತ್ತಾ ಹೋಗಿ ತಟ್ಟೆ ತೆಗೆದುಕೊಂಡು ಅಡ್ವಾನಿ ಜಿ ಯವರ ಹಿಂದೆ ಸರತಿ ಸಾಲಿನಲ್ಲಿ ನಿಂತರು..!



## ಔರ್ ದೋ ಟೆಸ್ಟ್ ಕರೋ...

ಇದು ಸಹ ಮಾನ್ಯ ವೆಂಕಯ್ಯ ಜಿ ಅವರು ಅನೌಪಚಾರಿಕವಾಗಿ ಹೇಳಿದ ಮಾತುಗಳು ನೆನಪಿನಲ್ಲಿದೆ..

1998 ರ ಮೇ 11ರಂದು ಅಟಲ್ ಜಿ ಯವರು ಎರಡನೆಯ ಬಾರಿಗೆ ಪ್ರಧಾನಿಗಳಾಗಿದ್ದ ಸಂದರ್ಭದಲ್ಲಿ ರಾಜಸ್ಥಾನದ ಪೋಖ್ರಾನ್ ನಲ್ಲಿ ಮೂರು ಅಣು ಪರೀಕ್ಷೆ ಮಾಡಿದ್ದು ಅಮೆರಿಕ ಸೇರಿದಂತೆ ಪ್ರಪಂಚದ ಎಲ್ಲಾ ದೇಶಗಳಲ್ಲಿ ಸಂಚಲನ ಉಂಟು ಮಾಡಿ ಅನೇಕ ರಾಷ್ಟ್ರಗಳು ನಮ್ಮ ದೇಶದ ಮೇಲೆ ಆರ್ಥಿಕ ದಿಗ್ಬಂಧನ ಘೋಷಿಸಿದವು.

ಈ ವಿಷಯವನ್ನು ಪ್ರಧಾನಿಗಳ ಗಮನಕ್ಕೆ ತಂದಾಗ,

ಅಚ್ಛಾ ಪರಸೋ ಔರ್ ದೋ ಟೆಸ್ಟ್ ಕರೋ

(ಹೌದಾ, ನಾಡಿದ್ದು ಇನ್ನೆರಡು ಪರೀಕ್ಷಿಸಿ) ಎಂದರಂತೆ..!

ಆರ್ಥಿಕ ದಿಗ್ಬಂಧನದಿಂದ ರಾಷ್ಟ್ರದ ಅರ್ಥ ವ್ಯವಸ್ಥೆಯನ್ನು

ಸಂಧಾರಿಸಲು ಅಟಲ್ ಜಿ ಯುವರು ಎನ್. ಆರ್. ಬಾಂಡ್(KíUMLKíI SCTWSECKU @LKBT ) ಆರಂಭಿಸಿದ್ದು ನಮಗೆಲ್ಲರಿಗೂ ನೆನಪಿದೆ. ಪೋಖ್ರಾನ್ ಅಣು ಪರೀಕ್ಷೆಯ ನಂತರ ವಿಶ್ವದ ರಾಷ್ಟ್ರಗಳು ಭಾರತದ ಬಗ್ಗೆ ತೆಗೆದುಕೊಲಕ್ಕಬಹುದಾದ ಸಂಗತಿಗಳನ್ನು ಮೊದಲೇ ಅಟಲ್‌ಜೀ ಗ್ರಹಿಸಿದ್ದರು. ಆದ್ದರಿಂದಲೇ ಮೇ 11ರಂದು ಅಲ್ಲ ಅಟಲ್‌ಜೀಯವರ ಸಾಮರ್ಥ್ಯದ ಪರಿಚಯ ಜಗತ್ತಿಗೆ ಆದರೆ, ಮೇ 13ರಂದು ಅಟಲ್ ಜಿ ಯವರ ದೂರದೃಷ್ಟಿತ್ವದ ವ್ಯಕ್ತಿತ್ವ ವಿಶ್ವಕ್ಕೆ ತಿಳಿಯಿತು ಎಂದು ವೆಂಖಯ್ಯನಾಯ್ಡುರವರು ನುಡಿದರು.

## ನಾನಲ್ಲ ನೀನು . . .



1996ರಲ್ಲಿ ಮುಂಬೈಯಲ್ಲಿ ನಡೆದ ರಾಷ್ಟ್ರೀಯ ಅಧಿವೇಶನದಲ್ಲಿ ಸಮಾರೋಪದ ದಿನ ಅಂದಿನ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಶ್ರೀ ಅಡ್ವಾಣಿಜಿಯವರು ರಾಮ ಜ್ಯೋತಿಯ ರಥ ಯಾತ್ರೆಯ ಹಿನ್ನೆಲೆಯಲ್ಲಿ ರಾಷ್ಟ್ರದ ಯುವಜನರ ಹಿಂದುಗಳ ಪ್ರಶ್ನಾತೀತ ನಾಯಕರಾಗಿ ಜನಪ್ರಿಯತೆಯ ಉತ್ತುಂಗದಲ್ಲಿದ್ದರು. ಆದರೆ ಅವರು ಅಧ್ಯಕ್ಷರಾಗಿ ನಡೆದುಕೊಂಡ ರೀತಿ ಅತ್ಯಂತ ವಿಶೇಷವಾದುದು. ಅವರಿಗಿದ್ದು ಒಂದೇ ಚಿಂತೆ ಅದು ಬಿಜೆಪಿ.

ದೇಶದ ಜನತೆಯ ನಾಡಿ ಮಿಡಿತವನ್ನು ಅರಿತಿದ್ದ ಅವರು ಪ್ರಸ್ತುತ ಸಂಘಟನೆಯ ದೃಷ್ಟಿಯಿಂದ ಅಟಲ್‌ಜೀಯವರ ನೇತೃತ್ವದಲ್ಲಿಯೇ ಚುನಾವಣೆಗೆ ಹೋಗುವುದು ಅತ್ಯಂತ ಸೂಕ್ತ ಹಾಗೂ ಯೋಗ್ಯವಾದ ತೀರ್ಮಾನ ಎಂದು ಭಾವಿಸಿದರು. ತಾವೇ ರಥಯಾತ್ರೆಯ ರೂವಾರಿಯಾಗಿ ಯಶಸ್ವಿಯಾಗಿ ಜವಾಬ್ದಾರಿಯುನ್ನು ನಿರ್ವಹಿಸಿಯೂ, ಪ್ರಸ್ತುತ ಸಂದರ್ಭದಲ್ಲಿ ನನಗಿಂತ ಅಟಲ್‌ಜೀಯವರ ನೇತೃತ್ವವೇ ಸೂಕ್ತ ಎಂದು, ತಮ್ಮ ಅಧ್ಯಕ್ಷೀಯ ನುಡಿಗಳನ್ನು ಮುಗಿಸುವ ಸಂದರ್ಭದಲ್ಲಿ ಯಾರೂ ನಿರೀಕ್ಷಿಸದ ರೀತಿಯಲ್ಲಿ ನಮ್ಮ ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದಲ್ಲಿ ಲೋಕಸಭಾ ಚುನಾವಣೆಗೆ ಹೋಗುತ್ತೇವೆ ಎಂದು ಘೋಷಿಸಿದಾಗ ಕಿಕ್ಕಿರಿದು ತುಂಬಿದ್ದ ಇಡೀ ಮೈದಾನ ಪ್ರತಿನಿಧಿಗಳ ಸಾರ್ವಜನಿಕರ ಕಿವಿ ಗಡಿಚುಕ್ಕುವ ಹಾಗೆ ಘೋಷಣೆ, ಚಪ್ಪಾಳೆಗಳ ಮೊರೆತ ಕೇಳಿ ಬಂದು ಇಡೀ ವಾತಾವರಣದಲ್ಲಿ ಒಂದು ಸಕಾರಾತ್ಮಕ ಬದಲಾವಣೆ ಕಾಣಲಾರಂಭಿಸಿತು.. ನನ್ನ ಪಕ್ಕದಲ್ಲಿ ಕುಳಿತಿದ್ದ ನಮ್ಮ ಸ್ನೇಹಿತರಿಗೆ ನಾನು ಸಹಜವಾಗಿ ಅಡ್ವಾಣಿಜಿಯವರ ಈ ಘೋಷಣೆ ನಮ್ಮ ಪಕ್ಷಕ್ಕೆ ಕನಿಷ್ಠ 5% ಮತ ಗಳಿಕೆ ಮಾಡುತ್ತದೆ ಎಂದು ಹೇಳಿದ್ದು ನೆನಪಿದೆ..

ನಂತರ ಮಾತನಾಡಲು ಆರಂಭಿಸಿದ ಅಟಲ್ ಜಿ ರವರು ಮೇಲ್ನೋಟಕ್ಕೇ ಅಧ್ಯಕ್ಷರ ಘೋಷಣೆಯಿಂದ ಗಲಿಬಿಲಿಗೊಂಡಂತೆ ಕಾಣುತ್ತಿದ್ದರು. ಭಾಷಣದ ಆರಂಭದಲ್ಲಿಯೇ ಅವರು ಮಾನ್ಯ ರಾಷ್ಟ್ರೀಯ ಅಧ್ಯಕ್ಷರು ನನ್ನ ಹೆಸರನ್ನು ಪ್ರಧಾನಮಂತ್ರಿಯ ಸ್ಥಾನಕ್ಕೆ ಘೋಷಣೆ ಮಾಡಿರುತ್ತಾರೆ.. ಆದರೆ ಪ್ರಧಾನಮಂತ್ರಿಯನ್ನು ಆಯ್ಕೆ ಮಾಡುವವರು ಯಾರು..? ಚುನಾಯಿತ ಬಹುಸಂಖ್ಯಾತ ಲೋಕಸಭಾ ಸದಸ್ಯರು ನಿರ್ಣಯ ಮಾಡಬೇಕು.. ಎಂದಾಗ ಮತ್ತೊಮ್ಮೆ ಇಡೀ ಸಭೆಯಲ್ಲಿ ಕರತಾಡನವಾಯಿತು..

ಮಾತು ಮುಂದುವರೆಸಿದ ಅವರು ನನಗೆ ಎಲ್ಲಿಂದ ಮಾತು ಆರಂಭಿಸಬೇಕು ಎಂಬುದೇ ತಿಳಿಯದಂತಾಗಿದೆ ಎಂದು ಹೇಳುತ್ತಾ.. ನಮ್ಮ ಜನಸಂಘದ ಸಂಸ್ಥಾಪಕ ಅಧ್ಯಕ್ಷರಾದ ಡಾ. ಶಾಮ ಪ್ರಸಾದ್ ಮುಖರ್ಜಿ ಅವರು ಸಂವಿಧಾನದ 370ನೆಯ ವಿಧಿಯ ವಿರುದ್ಧ ಹೋರಾಟ ಆರಂಭಿಸಿ ಪರ್ಮಿಟ್ ಇಲ್ಲದೆ ಜಮ್ಮು ಕಾಶ್ಮೀರದ ಗಡಿಯನ್ನು ದಾಟಿದಾಗ ಅವರ ಬಂಧನವಾಗಿ ಆಗ ಅವರ ಆಪ್ತ ಕಾರ್ಯದರ್ಶಿಯಾಗಿದ ತಮಗೆ ಡಾ. ಮುಖರ್ಜಿ ಯವರು 'Atal, go back to India & tell the People of India that I have entered Jammu Kashmir Without Permit " ಎಂದು ಹೇಳಿದ್ದನ್ನು ನೆನಪಿಸಿಕೊಂಡು, ಆ ರೀತಿಯ ನಿರಂತರ ಹೋರಾಟಗಳಿಂದ ಇಂದು ನಾವು ಈ ಸ್ಥಿತಿ ತಲುಪಿದ್ದೇವೆ ಎಂದು ಹೇಳುತ್ತಾ ಮಾತು ಮುಂದುವರೆಸಿದರು ..

## ಮೈ ತೋ ಬ್ರಹ್ಮಚಾರಿ ಹೂಂ ಬೇಟ ಕೈಸೆ ದೇಗಾ..?

ಶಿವಮೊಗ್ಗದ ಹಿರಿಯ ಸ್ವಯಂಸೇವಕರಾದ ಶ್ರೀ ಡಿ.ಎಚ್ ಸುಬ್ಬಣ್ಣನವರು ವಿಧಾನಪರಿಷತ್ತಿನ ಮಾನ್ಯ ಸಭಾಪತಿಗಳಾಗಿದ್ದ ಶ್ರೀ ಡಿ.ಹೆಚ್. ಶಂಕರಮೂರ್ತಿ ಅವರ ಹಿರಿಯ ಸಹೋದರು ಅಟಲ್ ಜಿ ಅವರ ಪರಮಾಪ್ತ ಮಿತ್ರರು.. ಅಟಲ್‌ಜೀಯವರು ಬಂದ ಬಹುತೇಕ ಸಂದರ್ಭಗಳಲ್ಲಿ ಶ್ರೀ ಸುಬ್ಬಣ್ಣನವರೇ ಅವರಿಗೆ ಚಾಲಕರು.. ಹಾಗೂ ಅಟಲ್ ಜಿ ಯವರು ಅನೇಕ ಸಂದರ್ಭಗಳಲ್ಲಿ ಇವರ ಮನೆಯಲ್ಲಿಯೇ ಉಳಿದುಕೊಳ್ಳುತ್ತಿದ್ದರು.. 1977 ರಲ್ಲಿ ವಿದೇಶಾಂಗ ಸಚಿವರಾಗಿ ಶಿವಮೊಗ್ಗಗೆ ಭೇಟಿಕೊಟ್ಟ ಸಂದರ್ಭದಲ್ಲಿಯೂ ಇವರ ಮನೆಯಲ್ಲಿಯೇ ಉಳಿದಿದ್ದರು ಎಂದು ಶ್ರೀ ಡಿ ಎಚ್ ಶಂಕರಮೂರ್ತಿಗಳು ನೆನಪು ಮಾಡಿಕೊಂಡರು.



**60ರ ದಶಕದ ಕೊನೆಯಲ್ಲಿ ಹಾಗೂ 70ರ ದಶಕದ ಆರಂಭದಲ್ಲಿ ನಡೆದ ಘಟನೆಯನ್ನು ಡಿ.ಹೆಚ್. ಸುಬ್ಬಣ್ಣನವರು ನೆನಪು ಮಾಡಿಕೊಂಡರು. ಮುಂದಿನ ವಿವರಣೆ ಸುಬ್ಬಣ್ಣನವರ ಮಾತಿನಲ್ಲಿ...**

1968 ರಲ್ಲಿ ನಾನು ಹಾಗೂ ಅಟಲ್ ಜಿ ಇಬ್ಬರೂ ಅಂಬಾಸೆಡರ್ ಕಾರ್ (ನಂಬರ 1099)ನಲ್ಲಿ ಜೋಗ್ ಜಲಪಾತ ನೋಡಲು ಹೋದೆವು... ಇಬ್ಬರೂ ಕೆಳಗಿಳಿದು ಜೋಗ್ ಜಲಪಾತದ ತಳಕ್ಕೆ ಹೋದ ನಂತರ ಆ ಭವ್ಯ ದೃಶ್ಯವನ್ನು ನೋಡಿದ ಅಟಲ್ ಜಿ ಭಾವುಕರಾಗಿ ಅಲ್ಲಿಯೇ ಇದ್ದ ಒಂದು ಕಲ್ಲಿನ ಮೇಲೆ ಮಲಗಿಕೊಂಡು ಹಾಡುಗಳನ್ನು ಹೇಳಲು ಆರಂಭಿಸಿದರು.. ನಾನು ಮೌನವಾಗಿ ಆಲಿಸುತ್ತಾ ಆ ವಿಶೇಷ ಸಂದರ್ಭವನ್ನು ಅನುಭವಿಸುತ್ತಿದ್ದೆ. ಸಮಯ ಏರುತ್ತಾ ಬಿಸಿಲು ಚುರುಗುಟ್ಟಲು ಆರಂಭಿಸಿತು.

ಆಗ ಇಬ್ಬರೂ ಮೇಲೇರಲು ಪ್ರಾರಂಭಿಸಿದೆವು. ಏರುತ್ತಾ ಏರುತ್ತಾ ಕಡಿದಾದ ದಾರಿ, ಬಿಸಿಲಿನ ತಾಪ ಬೇರೆ, ನಾವು ಒಂದೊಂದೇ ಬಟ್ಟೆಗಳನ್ನು ಕಳಚುತ್ತಾ ಏರಲಾರಂಭಿಸಿದೆವು. ಅಟಲ್ ಜಿ ಅವರು ಹೆಜ್ಜೆಗಳನ್ನು ಎಣಿಸುತ್ತ.. ಏಕ್ ದೋ ತೀನ್ ಚಾರ್ ಎಂದು ಹತ್ತರವರೆಗೆ ಎಣಿಸಿ ದಸ್ ಅಬ್ ಬಸ್.. ಎಂದು ಒಂದೆರಡು ನಿಮಿಷ ಕುಳಿತು ದಣಿವಾರಿಸುತ್ತಿದ್ದರು. ಪೂರ್ಣ ಮೇಲೆ ಬಂದಾಗ ಇಬ್ಬರೂ ಕೇವಲ ಒಳ ಉಡುಪಿನಲ್ಲಿ(ಡ್ರಾಯರ್) ಇದ್ದೆವು...!

## ನೀವೂ ಬರೆದು ಕಳಿಸಬಹುದು...

**ಅಟಲ್‌ಜೀಯವರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ ಒಂದು ವರ್ಷ ಕಾಲ ಅಟಲ್‌ಜೀಯವರನ್ನು ಸ್ಮರಣೆ ಮಾಡುವ ಕಾರ್ಯವನ್ನು ಮಾಡುವ ಕಾರ್ಯವನ್ನು ಕಮಲಪಥ ಮಾಡುತ್ತಿದೆ. ಅಂದು ಅಟಲ್‌ಜೀಯವರ ಒಡನಾಡಿಗಳಾಗಿದ್ದವರು ಅವರೊಂದಿಗಿನ ಒಡನಾಟದ ಬರಹವನ್ನು ಕಮಲಪಥದಲ್ಲಿ ನಿಮ್ಮ ಭಾವಚಿತ್ರದೊಂದಿಗೆ ಪ್ರಕಟಿಸುತ್ತೇವೆ.**

ಈ ಘಟನೆ ನಡೆದು ಸುಮಾರು ನಾಲ್ಕು ವರ್ಷಗಳ ನಂತರ, 1972 ರಲ್ಲಿ ನಾನು ನನ್ನ ಧರ್ಮಪತ್ನಿಯ ಜೊತೆ ದೆಹಲಿ ಪ್ರವಾಸಕ್ಕೆ ಹೋಗಿದ್ದೆನು. ಆಗ ರೈಲ್ವೆ ಸ್ಟೇಷನ್ ನಿಂದ ಅಟಲ್ ಜಿ ಅವರ ನಿವಾಸಕ್ಕೆ ದೂರವಾಣಿ ಕರೆ ಮಾಡಿ ನಾನು ಸುಬ್ಬಣ್ಣ ಶಿವಮೊಗ್ಗ ಎಂದು ಹೇಳಿದೆ.. ಕೂಡಲೇ ಅಟಲ್ ಜಿ ಯವರು ಸುಬ್ಬಣ್ಣ, ಓಹ್, ಜೋಗ್ ಫಾಲ್ಸ್ ದೋಸ್ತ್ ಎಂದರು..

ನನಗೆ ಹಿಂದಿ ಮಾತನಾಡಲು ಸರಿಯಾಗಿ ಬರುವುದಿಲ್ಲ. ನಾನು ಅವರಿಗೆ ಮೈ ಚಾರ್ ಬಜೆ ಆತೂ.. ತುಮಾರ ಬೇಟಿ ಹೊನಾ ( ನನ್ನ ಮುರುಕು ಹಿಂದಿಯಲ್ಲಿ ಮಾತನಾಡಿ ನಾನು ನಾಲ್ಕು ಗಂಟೆಗೆ ಬರುತ್ತೇನೆ ನಿಮ್ಮ ಭೇಟಿ ಆಗಬೇಕು ಎಂದೆ )

ಅದಕ್ಕೆ ಅಟಲ್ ಜಿ ಅವರು ನಗುತ್ತಾ ಅರೆ ಸುಬ್ಬಣ್ಣ ಮೈ ತೋ ಬ್ರಹ್ಮಚಾರಿ ಹೂಂ ಬೇಟಿ ಕೈಸೆ ದೇಗಾ..? ಎಂದರು..

ನನಗೆ ಅದು ಅರ್ಥವಾಗದೆ ಮತ್ತೆ ಚಾರ್ ಬಜೆ ಆತು ಬೇಟಿ ದೇನಾ ಎಂದೆನು..

ಅವರು ನಗುತ್ತಾ ಅಚ್ಛಾ ಅವೋ ಎಂದು ತಮ್ಮ ಮನೆಗೆ ಕರೆಸಿಕೊಂಡು ಆತಿಥ್ಯ ನೀಡಿದರು ...

ಇದೊಂದು ಮರೆಯಲಾಗದ ಭೇಟಿ ಆಯಿತು...

## ಚರ್ಚೆಗೊಂದು ಸಾಲು...

**ಅಧಿಕಾರದಲ್ಲಿದ್ದಾಗ ಮಾಡಿದ ಸತ್ಕಾರ್ಯಗಳು ಮಾತ್ರ ಅಧಿಕಾರವನ್ನು ಉಳಿಸಬಲ್ಲದು**



# ಅಜಾತಶತ್ರು ಅಟಲ್ ಜಿ ಜನ್ಮ ಶತಮಾನೋತ್ಸವ ಅಭಿಯಾನ – 2025

## ಅಟಲ್ ಜಿ ರವರೊಂದಿಗೆ ಕಾರ್ಯ ನಿರ್ವಹಿಸಿದ್ದ ಕಾರ್ಯಕರ್ತರ ನಿವಾಸಕ್ಕೆ ಭೇಟಿ ಹಾಗೂ ಅಭಿನಂದನಾ ಕಾರ್ಯಕ್ರಮ



ಶ್ರೀ ಸುರೇಶ ರೇಣಕೆ – ಬಾಗಲಕೋಟೆ



ಶ್ರೀ ಬಸವರಾಜ ಪಾಟೀಲ್ ಸೇಡಂ – ಕಲಬುರಗಿ



ಶ್ರೀ ಬಾಬುಲಾಲ್ ಓಸ್ವಾಲ, ವಿಜಯಪುರ



ದಿ. ಶ್ರೀನಿವಾಸ ರವರ ಪತ್ನಿ ಸುಗುಣಮ್ಮ – ಕೋಲಾರ



ಶ್ರೀ ಬಹು ಕುಲಕರ್ಣಿ – ಬೆಳಗಾವಿ




ಡಾ. ಶಿಂಧೆ – ಬೆಳಗಾವಿ



ಕೆ.ಬಿ. ಶಂಕರನಾರಾಯಣ – ದಾವಣಗೆರೆ



ಶ್ರೀ ಮುಕುಂದ ಆಚಾರ್ಯ – ಯಾದಗಿರಿ





ಡಾ ಸುಧಾಕರ ಹೊಸಳ್ಳಿ
ಪತ್ರಕರ್ತರು

# ಮತ್ತೆ ಹುಟ್ಟಿ ಬಾರದ ಅಂಬೇಡ್ಕರರು!

**ಅಂಬೇಡ್ಕರ್‌ರವರ ಸಾಧನೆಗೆ ಅವರ ಪರಿಶ್ರಮ ಕಾರಣವೇ ಹೊರತು ನ್ಯೂನ್ಯತೆಗಳ ಎತ್ತಿ ತೋರಿಸುವ ಅದರೊಳಗೆ ಬೊಟ್ಟು ಮಾಡಿ ಸೋಲುವ ಸಂಕಲ್ಪ ಮಾಡಿದ್ದರಿಂದಲ್ಲ. ನಾವು ಅಂಬೇಡ್ಕರನ್ನು ಅವರ ಬದುಕಿನ ಮಾದರಿಯಲ್ಲಿ ಸ್ವೀಕಾರ ಮಾಡಬೇಕು. ಚೌಡರ ಕೆರೆಯ ಹೋರಾಟ ನಾಸಿಕ್‌ನ ಕಾಳರಾಮ ಗುಡಿಯ ಪ್ರವೇಶಕ್ಕೆ ಮಾಡಿದ ಹೋರಾಟ ಕೇವಲ ಹಕ್ಕುಗಳ ಭಾಗವಾಗಿ ಅಲ್ಲ, ಇಡೀ ಸಮಾಜವನ್ನು ಒಂದುಗೂಡಿಸುವ ಪ್ರಕ್ರಿಯೆ ಅಂಬೇಡ್ಕರರ ಹೆಸರು ಹೇಳುವ ಎಷ್ಟೋ ಮಂದಿ ಹಿಂದೂ ಸಮಾಜವನ್ನು ವಿಘಟಿಸುವ ಹೊಣೆಗಾರಿಕೆಯನ್ನು ಹೊತ್ತಿದ್ದಾರೆ. ದೇಶದ ವಿರುದ್ಧ ನಿಲ್ಲುವ ಅನೇಕ ನಕಲಿ ಹೋರಾಟಗಾರರ ಕೈಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವಿರುತ್ತದೆ. ಅಖಂಡ ಭಾರತದ ಕಲ್ಪನೆಯ ಮಹಾದಾಸೆ ಇಟ್ಟುಕೊಂಡಿದ್ದ ವೀರ ಭಾರತೀಯನ ಹೆಸರು ಹೇಳಿ ಭಾರತವನ್ನು ಚೂರು ಮಾಡುವವರ ಬಾಯಲ್ಲಿ ಅಂಬೇಡ್ಕರರ ಸ್ಮರಣೆ ಆಧುನಿಕ ಕಾಲಘಟ್ಟದ ವೈಪರಿತ್ಯವೇ ಸರಿ.**

ಭಾರತ ಮಾತ್ರವಲ್ಲದೆ, ಜಗತ್ತು ಬಾಬಾ ಸಾಹೇಬ್ ಅಂಬೇಡ್ಕರ್‌ರವರನ್ನು ಸ್ಮರಿಸಿಕೊಳ್ಳುತ್ತದೆ, ಎಷ್ಟೋ ಜನ ಸಾಮಾಜಿಕ ಸಮಾನತೆಗಾಗಿ ಸಮ- ಸಮಾಜದ ಸೃಷ್ಟಿಗಾಗಿ ಹೋರಾಡಿದ ಮಹಾಪುರುಷರ ಐತಿಹಾಸಿಕ ದಾಖಲೆ ಇದೆ. ಆದರೆ, ಸಾಮಾಜಿಕ ಸಮಾನತೆ ಎಂಬುದನ್ನು ಸಾಂವಿಧಾನಿಕ ಹಕ್ಕಾಗಿ ಮಾರ್ಪಡಿಸಿ ಹಾಗೂ ಅಸಮಾನತೆಯ ಆಚರಣೆಗೆ ಕಾನೂನಿನಡಿಯಲ್ಲಿ ಶಿಕ್ಷೆ ಗುರಿಪಡಿಸಿದ ಕಾರಣಕ್ಕಾಗಿ, ಅಂಬೇಡ್ಕರ್‌ರವನ್ನು ಸಮ- ಸಮಾಜದ ದಿಸೆಯಲ್ಲಿ ನಿಂತು ನೋಡುವ ಎಲ್ಲರೂ ತಮ್ಮೊಳಗೆ ಆತ್ಮಾರ್ಪಿಸಿಕೊಳ್ಳುತ್ತಾರೆ.

ಪ್ರಸ್ತುತ ಸಾಮಾಜಿಕ ಅಸಮಾನತೆ ಸಂಪೂರ್ಣ ನಾಶವಾಗಿದೆ, ಜಾತೀಯತೆ ಕಣ್ಮರೆಯಾಗಿದೆ ಎಂದು ಎದೆಯುಬ್ಬಿಸಿ ಹೇಳುವ ಅವಕಾಶ ಇಲ್ಲದಿರುವುದು ದಿಟ. ಆದರೆ ಸಮ -ಸಮಾಜದ ನಿರ್ಮಾಣದ ಕಾರ್ಯ ಆಶಾದಾಯಕ ನೆಲಗಟ್ಟಿನಲ್ಲಿ ಸ್ಥಾಪಿತವಾಗಿರುವುದನ್ನೂ, ಅಸ್ಪೃಶ್ಯತೆ ಆಚರಣೆಗೆ ಬೆನ್ನು ತೋರಿಸುವವರ ಸಂಖ್ಯೆ ಹಿರಿದಾದದ್ದನ್ನು ಅವಿತಿಡಲು ಸಾಧ್ಯವಿಲ್ಲ. ದೇಶ ಇಂತಹ ಸಕಾರಾತ್ಮಕ ಪಥದಲ್ಲಿ ಸಾಗಲು ಸಾಧ್ಯವಾದದ್ದು, ಅಂಬೇಡ್ಕರರ ಸಾಂವಿಧಾನಿಕ ಶಕ್ತಿಯಿಂದ ಎಂಬುದು ನಿರ್ವಿವಾದ.

ಈ ದೆಸೆಯಲ್ಲಿ ಶೋಷಿತರು, ಅಬಲರು, ತಳ ಸಮುದಾಯಗಳು ಈ ಪರಿನಿರ್ವಾಹಣಾ ದಿನವನ್ನು ಅತ್ಯಂತ ಪೂಜ್ಯ ಭಾವನೆಯಿಂದ ಸ್ಮರಿಸುವ, ಆಚರಿಸುವ ಮುಂದುವರಿದು ಪೂಜೆಗೈವ ಸಂಗತಿಗಳು ಕಾಣಸಿಗುತ್ತವೆ. ಈ ಸಮುದಾಯಗಳಲ್ಲದವರೂ ಪ್ರಜ್ಞಾವಂತ ಮನಸ್ಥಿತಿಯುಳ್ಳವರು, ಅಂಬೇಡ್ಕರರ ಸಮಾಜಪರ ಕೊಡುಗೆಗಳನ್ನು ಅಭಿನಂದಿಸಿರುತ್ತಾರೆ. ಹಾಗಾದರೆ, ಕೇವಲ ಸ್ಮರಣೆ ಮತ್ತು ಅಭಿನಂದನೆಗೆ ಸೀಮಿತವಾದರೆ, ಅದು ಅಂಬೇಡ್ಕರರಿಗೆ ಮಾಡುವ ಅಪಮಾನವೇ ಸರಿ. ಕಾರಣವಿಷ್ಟೇ, ಅಂಬೇಡ್ಕರರ ನೈಜ





ಆಶಯಗಳನ್ನು ಅವರ ಇರುವಿಕೆಯ ನಂತರ ಹಿಮ್ಮುಖವಾಗಿ ಬಿಂಬಿಸುವ ಕೆಲಸ ನಿರಂತರವಾಗಿ ಸಾಗುತ್ತಲೇ ಬಂದಿದೆ. ಅಂಬೇಡ್ಕರರು ಸಮಾಜದ ಭಾಗವಾಗಬೇಕೆನಿಸಿದ್ದ ಅನೇಕ ಸಂಗತಿಗಳನ್ನು, ವಿರುದ್ಧ ದಿಕ್ಕಿನಲ್ಲಿ ತೋರುವ ಮೂಲಕ ಯುವ ಸಮುದಾಯದಲ್ಲಿ ಗೊಂದಲ ಮತ್ತು ಅಸತ್ಯದ ಅಂಬೇಡ್ಕರನ್ನು ಅನುಸರಿಸುವಂತೆ ಅಪ ವ್ಯಾಖ್ಯಾನ ಮಾಡುತ್ತಲೇ ಬಂದಿದ್ದಾರೆ. ಅಪ್ರತಿಮ ರಾಷ್ಟ್ರಭಕ್ತರಾದ ಅಂಬೇಡ್ಕರರನ್ನು ಒಡಕಿನ, ದೇಶ ವಿರೋಧ ಹೋರಾಟಗಳಲ್ಲಿ ಪ್ರೇರಕ ಶಕ್ತಿಯಂತೆ ಬಿಂಬಿಸಲಾಗುತ್ತಿದೆ, ಈ ನಿಟ್ಟಿನಲ್ಲಿ ಅಂಬೇಡ್ಕರರು ಸಮಾಜಕ್ಕೆ ಮುಟ್ಟಿಸಬೇಕೆಂದಿದ್ದ ಅಂತರಾಳದ ಸಂಗತಿಗಳನ್ನು ಅವಲೋಕಿಸುವುದು ಈ ದಿವಸದ ಜರೂರು.

ಅಂತಹ ಅಪವ್ಯಾಖ್ಯಾನಗಳನ್ನು ಸಂಶೋಧಿತ ಪರಾಮರ್ಶೆಯ ಮುಖಾಂತರ ಒಡೆದು ಉರುಳಿಸುವ ಹೊಣೆಗಾರಿಕೆಯು ನಮ್ಮ ಮೇಲೆಯೇ ಇದೆ. ಉದಾಹರಣೆಗೆ, ಅಂಬೇಡ್ಕರ್ ಎಂದ ತಕ್ಷಣ ಕೇವಲ ಸಂವಿಧಾನ ಮತ್ತು ಮೀಸಲಾತಿಯ ದೃಷ್ಟಿಯಿಂದ ಮೇಳಯಿಸುವ ಪ್ರಕ್ರಿಯೆ ಅಪಾಯಕಾರಿಯಾದದ್ದೆ ಅಂಬೇಡ್ಕರನ್ನು ಅನ್ನದ ಅಸ್ತ್ರವನ್ನಾಗಿ ಮಾಡಿಕೊಂಡವರ ಸಂಖ್ಯೆ ದೊಡ್ಡದೇ ಇದೆ ಆತ್ಮಭಿಮಾನಕ್ಕೆ ಆತ್ಮ ಗೌರವಕ್ಕೆ ಆದರ್ಶಕ್ಕೆ ಅಂಬೇಡ್ಕರರ ಚಿಂತನೆಗಳನ್ನು ಕಾಪಿಟ್ಟುಕೊಳ್ಳದಿದ್ದರೆ ಅಂಬೇಡ್ಕರರಿಗೂ ಸಮಾಜಕ್ಕೂ ಗೌರವದ ಋಣ ತೀರಿಸಿದಂತಾಗುವುದಿಲ್ಲ ಎರಡು ವರ್ಷ 11 ತಿಂಗಳು 18 ದಿವಸಗಳು ತಮ್ಮ ಸಂವಿಧಾನ ರಚನಾ ಕಾರ್ಯದಲ್ಲಿ ಕೇವಲ ಎರಡು ಅಧಿವೇಶನಗಳಲ್ಲಿ ಮಾತ್ರ ಮೀಸಲಾತಿಯ ಕುರಿತಂತೆ ಬಾಬಾ ಸಾಹೇಬರು ಆಳವಾದ ಚರ್ಚೆ ಮಾಡಿದ್ದಾರೆ.

ಉಳಿದಂತ ಒಟ್ಟು ಸಾಂವಿಧಾನಿಕ ರಚನಾ ಕಾರ್ಯದಲ್ಲಿ ಭಾರತೀಯತೆ, ದರ್ಶನ ನೆಲಮೂಲದ ಸಂಸ್ಕೃತಿ ರಾಷ್ಟ್ರೀಯತೆಯ ಉತ್ತುಂಗತೆ ಶಿಕ್ಷಣ ಸ್ವಾಭಿಮಾನದ ನೆಲೆಗಟ್ಟು ಪರಂಪರೆ ಮಹಿಳಾ ಶಿಕ್ಷಣ ಹಕ್ಕುಗಳು ಜೀವನ ಪದ್ಧತಿ ಆರ್ಥಿಕ ಸ್ವಾವಲಂಬನೆ ಶೋಷಿತರ ರಾಜಕೀಯ ಧ್ವನಿ ಹೀಗೆ ಬಹುಕೋನಗಳಲ್ಲಿ ಅಂಬೇಡ್ಕರರ ವಿಶಿಷ್ಟ ಕೊಡುಗೆ ಇದೆ. ತಮ್ಮ ಜೀವನದ ಉದ್ದಕ್ಕೂ ಯಾವುದೇ ಮೀಸಲಾತಿ ವಿಶೇಷ ಅವಕಾಶಗಳು ಇಲ್ಲದೆ ಎದುರಾದ ಅಡ್ಡಿ ಆತಂಕಗಳ ನಡುವೆಯೂ ಜಾಗತಿಕ ಜ್ಞಾನ ಸಲೆಯಾಗಿ ಬೆಳೆದದ್ದು ಅಂಬೇಡ್ಕರರ ಹೆಗ್ಗಳಿಕೆ.

ಅವರ ಈ ಸಾಧನೆಗೆ ಅವರ ಪರಿಶ್ರಮ ಕಾರಣವೇ ಹೊರತು ನ್ಯೂನ್ಯತೆಗಳ ಎತ್ತಿ ತೋರಿಸುವ ಅದರೊಳಗೆ ಬೊಟ್ಟು ಮಾಡಿ ಸೋಲುವ ಸಂಕಲ್ಪ ಮಾಡಿದ್ದರಿಂದಲ್ಲ ನಾವು ಅಂಬೇಡ್ಕರನ್ನು ಅವರ ಬದುಕಿನ ಮಾದರಿಯಲ್ಲಿ ಸ್ವೀಕಾರ ಮಾಡಬೇಕು ಚೌಡರ ಕೆರೆಯ ಹೋರಾಟ ನಾಸಿಕ್‌ನ ಕಾಳರಾಮ ಗುಡಿಯ ಪ್ರವೇಶಕ್ಕೆ ಮಾಡಿದ ಹೋರಾಟ ಕೇವಲ ಹಕ್ಕುಗಳ ಭಾಗವಾಗಿ ಅಲ್ಲ ಇಡೀ ಸಮಾಜವನ್ನು ಒಂದುಗೂಡಿಸುವ ಪ್ರಕ್ರಿಯೆ ಅಂಬೇಡ್ಕರರ ಹೆಸರು ಹೇಳುವ ಎಷ್ಟೋ ಮಂದಿ ಹಿಂದೂ ಸಮಾಜವನ್ನು ವಿಘಟಿಸುವ ಹೊಣೆಗಾರಿಕೆಯನ್ನು ಒತ್ತಿದ್ದಾರೆ.

ದೇಶದ ವಿರುದ್ಧ ನಿಲ್ಲುವ ಅನೇಕ ನಕಲಿ ಹೋರಾಟಗಾರರ ಕೈಯಲ್ಲಿ ಅಂಬೇಡ್ಕರ್ ಅವರ ಭಾವಚಿತ್ರವಿರುತ್ತದೆ ಅಖಂಡ ಭಾರತದ ಕಲ್ಪನೆಯ ಮಹಾದಾಸ ಇಟ್ಟುಕೊಂಡಿದ್ದ ವೀರ ಭಾರತೀಯನ ಹೆಸರು ಹೇಳಿ ಭಾರತವನ್ನು ಚೂರು ಮಾಡುವವರ ಬಾಯಲ್ಲಿ ಅಂಬೇಡ್ಕರರ ಸ್ಮರಣೆ ಆಧುನಿಕ ಕಾಲಘಟ್ಟದ ವೈಪರಿತ್ಯವೇ ಸರಿ. ಹಾಗಾಗಿ ನಮಗೆ ನೈಜ ಅಂಬೇಡ್ಕರನ್ನು ಅವರ ಆಶಯಗಳನ್ನು ಹೃದಯಕ್ಕೆ ಸೇರಿಸಿಕೊಳ್ಳುವ ಪ್ರಜ್ಞೆ ಬೆಳೆಯಬೇಕು ಅವರ ಬದುಕು ಮಾದರಿಯಾಗಬೇಕು ಅವರ ಆಂತರಿಕ ಭಾಷೆ ಮಾಡಲಾಗಬೇಕು. ಈ ದೃಷ್ಟಿಯಲ್ಲಿ ಅವರ ಅಂತರಂಗವನ್ನು ತೆರೆದು ನೋಡುವ ಕೈಂಕರಿಯವನ್ನು ಮಾಡೋಣ

### ಬಾಪು ನಾವು ಹಿಂದುಗಳೇಕೆ ಅಲ್ಲಾಹು ಅಕ್ಬರ್ ಕೂಗಬೇಕು?

ಹಿಂದೂ ಮುಸ್ಲಿಂ ಐಕ್ಯತೆಗಾಗಿ ಹಿಂದೂ ಮತ್ತು ಮುಸ್ಲಿಂ ಇಬ್ಬರು ದೇವರು ಒಬ್ಬನೇ ಎಂಬುದನ್ನು ನಂಬಬೇಕು, ಆ ಕಾರಣಕ್ಕಾಗಿ ಇಬ್ಬರು ಅಲ್ಲಾ ಹೋ ಅಕ್ಬರ್ ಕೂಗಬೇಕೆಂದು ಸೆಪ್ಟೆಂಬರ್ 8 1920ರ ಯಂಗ್ ಇಂಡಿಯಾ ಲೇಖನದಲ್ಲಿ ಬರೆದ ಲೇಖನವನ್ನು ವಿಮರ್ಶೆ ಮಾಡುತ್ತಾ, ಗಾಂಧಿಯವರ ವೈಪರಿತ್ಯ ಮುಸ್ಲಿಂ ಓಲೈಕೆಯನ್ನು ತಿರಸ್ಕರಿಸಿದ್ದರು,

(ಆಧಾರ- ಅಂಬೇಡ್ಕರರ ಬದುಕು ಬರಹಗಳು ಮತ್ತು ಭಾಷಣಗಳು ಪುಟ ಸಂಖ್ಯೆ 514 – 515 ಸಂಪುಟ 6)



## ಸಾವರ್ಕರರ ಸಮರ್ಥನೆ

ಶ್ರೀ ಸಾವರ್ಕರ್‌ರವರು ಪಾಕಿಸ್ತಾನದ ನಿರ್ಮಾಣದ ಬದಲು ಸೂಚಿಸಿದ ಪರ್ಯಾಯ ವ್ಯವಸ್ಥೆಯಲ್ಲಿ ಸ್ಪಷ್ಟತೆ ಮತ್ತು ಖಚಿತತೆ ಇದ್ದು, ಅವುಗಳಲ್ಲಿರುವ ಅಲ್ಪಸಂಖ್ಯಾತರ ಹಕ್ಕುಗಳ ಬಗೆಗಿನ ಅನಿಯತೆ, ಅಸ್ಪಷ್ಟತೆ ಮತ್ತು ಅನಿರ್ದಿಷ್ಟತೆಗಳನ್ನು ಗುರುತಿಸುತ್ತವೆ. ಮುಸ್ಲಿಮರು ಇಲ್ಲಿಯ ತನಕ ಹೋಗಬಹುದು, ಇದಕ್ಕಿಂತ ಮುಂದೆ ಅಲ್ಲ ಎಂದು ಮುಸ್ಲಿಮರಿಗೆ ತಿಳಿಸುವ ಯೋಗ್ಯತೆ ಶ್ರೀ ಸಾವರ್ಕರ್ ಅವರ ಯೋಜನೆಗಿದೆ ಎಂದು ಪ್ರತಿಪಾದಿಸುವ ಮೂಲಕ ಸಾವರ್ಕರ್‌ರನ್ನು ಸಮರ್ಥಿಸಿದ್ದರು.

(ಆಧಾರ- ಅಂಬೇಡ್ಕರರ ಬದುಕು ಬರಹಗಳು ಮತ್ತು ಭಾಷಣಗಳು ಪುಟ ಸಂಖ್ಯೆ 492, 493 ,494 ಸಂಪುಟ- 6)

## 13 ಸಂವಿಧಾನ ರಚನೆಯ ಉಪ ಸಮಿತಿಗಳಲ್ಲಿ ಅಂಬೇಡ್ಕರನ್ನು ನಿರ್ಲಕ್ಷಿಸಲಾಗಿತ್ತು

ಆಗಸ್ಟ್ 29, 1947ಕ್ಕೆ ಅಂಬೇಡ್ಕರ್‌ರವರನ್ನು ಸಂವಿಧಾನ ರಚನಾ ಸಭೆಯು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡುವ ದಿವಸಕ್ಕಿಂತ ಮುಂಚೆ 265 ದಿನಗಳ ಸಂವಿಧಾನ ರಚನೆಯ ಪ್ರಾರಂಭದ ದಿನಗಳಲ್ಲಿ ರಚಿತವಾದ 13 ಉಪ ಸಮಿತಿಗಳಲ್ಲಿ ಅಂಬೇಡ್ಕರರಿಗೆ ಅಧ್ಯಕ್ಷೀಯ ಸ್ಥಾನವಿರಲಿ, ಸದಸ್ಯರಾಗಿಯೂ ಅವಕಾಶ ನೀಡಿರಲಿಲ್ಲ.

(ಆಧಾರ- ಸಂವಿಧಾನ ರಚನಾ ಸಭೆಯ ಚರ್ಚೆಗಳು, ಡಿಸೆಂಬರ್ 23 /1946 ಪುಟ ಸಂಖ್ಯೆ, 245, 246, 247 ಸಂಪುಟ -1)

## ಆರ್ಯ ಅನಾರ್ಯ ಸಿದ್ಧಾಂತ ತಿರಸ್ಕರಿಸಿದ್ದರು

ಆರ್ಯ ಜನಾಂಗವು ಭಾರತದ ಮೇಲೆ ದಾಳಿ ಮಾಡಿ ಅಲ್ಲಿನ ಮೂಲ ನಿವಾಸಿಗಳನ್ನು ದಾಸ್ಯಕ್ಕೆ ದೂಡಿದರು ಎಂಬುದಕ್ಕೆ ಯಾವ ಆಧಾರವಿದೆ? ಆರ್ಯರು ಹೊರಗಿನಿಂದ ಬಂದವರು ಎನ್ನುವುದಕ್ಕೆ ಲವಲೇಶದ ಆದರವೂ ಇಲ್ಲ, ಆರ್ಯ- ದ್ರಾವಿಡ ಸಿದ್ಧಾಂತವು ಎಂದು ಸತ್ತು ಹೋಗಬೇಕಿತ್ತು ಎಂದು ತಿಳಿಸಿದರು.

(ಆಧಾರ-ಅಂಬೇಡ್ಕರರ ಅವರ ಬದುಕು ಬರಹಗಳು ಮತ್ತು ಭಾಷಣಗಳು, ಪುಟ ಸಂಖ್ಯೆ 68, ಸಂಪುಟ- 6)




## ಬೌದ್ಧ ಮತದಲ್ಲಿ ಇರುವ ಜಾತಿ ಮತ್ತು ಪಂಥಗಳನ್ನು ತಿರಸ್ಕರಿಸಿದ್ದರು

ಅಕ್ಟೋಬರ್ 13, 1956ರ ಬೌದ್ಧ ಮತದ ಕುರಿತು ಅವರ ಭಾಷಣದಲ್ಲಿ I will accept and follow the teachings of Buddha. I will keep my people away from the different opinions of Hinayana and Mahayana, Our Buddhism is Navayana ಎಂಬ ಸಂದೇಶ ಕೊಟ್ಟಿದ್ದರು.

## ಅಂಬೇಡ್ಕರ್‌ರಿಂದ ಆರ್ ಎಸ್ ಎಸ್ ಶ್ಲಾಘನೆ


12.05.1939 ಪುಣೆಯ ಭಾವೆ ಶಾಲೆ ಆವರಣದಲ್ಲಿ ಈ ಶಿಬಿರದಲ್ಲಿ ನನಗೆ ನಿಮ್ಮ ನಡೆ-ನುಡಿ ಶಿಸ್ತು ಸಂಯಮ ಕಾರ್ಯ ಸಮಯ ಪಾಲನೆ ನೋಡಿ ಸೈನಿಕರ ನೆನಪಾಗಿದೆ ಸಂಘದ ಕಾರ್ಯ ಆದರ್ಶವಾದದ್ದು ಎಂದಿದ್ದರು. (ಆದರೆ-ಅಂಬೇಡ್ಕರರೇ ಸ್ಥಾಪಿಸಿದ್ದ ಎಸ್‌ಸಿ ಫೆಡರೇಶನ್ ರಾಜಕೀಯ ಪಕ್ಷದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದ ಬಾಳಾಸಾಹೇಬ್ ಸಾಳುಂಕೆ ಅವರ ದಿನಚರಿ ಆಧರಿಸಿದ ಹಮಾರೇ ಸಾಹೇಬ್ ಪುಸ್ತಕ)

## ಜಾತ್ಯತೀತತೆಯನ್ನು ಸಂವಿಧಾನದ ಒಳ ಬಿಡಲು ಸಾಧ್ಯವಿಲ್ಲ

ಜಾತ್ಯಾತೀತತೆಯನ್ನು ಸಂವಿಧಾನದ ಭಾಗವಾಗಬೇಕೆಂದು ಪ್ರೊ ಕೆ.ಟಿ ಷಾ ಮಂಡಿಸಿದ್ದ ತಿದ್ದುಪಡಿಯನ್ನು ತಿರಸ್ಕರಿಸಿ ಜಾತ್ಯಾತೀತೆ ಎಂಬುದು ಪಾಶ್ಚಿಮಾತ್ಯ ಚಿಂತನೆ, ಇದು ಈ ನೆಲದ ಗುಣಕ್ಕೆ ಹೊಂದುವುದಿಲ್ಲ ಎಂದಿದ್ದರು. (ಆಧಾರ-15 ನವಂಬರ್ 1948ರ ಸಂವಿಧಾನ ರಚನಾ ಸಭೆಯ ಚರ್ಚೆಗಳು, ಪುಟ ಸಂಖ್ಯೆ 547 ,548 ಸಂಪುಟ- 3)

ಹೀಗೆ ಅಂಬೇಡ್ಕರರ ವಾಸ್ತವದ ವ್ಯಾಖ್ಯಾನಗಳನ್ನು ಮುಖ ತಿರುಗಿಸಿ ನಿಲ್ಲಿಸುವ ಕೆಲಸಕ್ಕೆ, ಸಂಶೋಧನೆ ಎಂಬ ಅಸ್ತ್ರದ ಮೂಲಕ ತಡೆಯೊಡ್ಡಲೇ ಬೇಕಿದೆ, ಆ ಮುಖಾಂತರ ನೈಜ ಅಂಬೇಡ್ಕರನ್ನು ಅವರ ತತ್ವಗಳನ್ನು ಸಮಾಜಕ್ಕೆ ತಲುಪಿಸುವ ಕಾರ್ಯದೊಟ್ಟಿಗೆ ಅಂಬೇಡ್ಕರರಿಗೆ ಸಂಶೋಧನಾ ಗೌರವ ತಲುಪಿಸುವುದು ಪ್ರಾಜ್ಞರ ಗುರುತರ ಜವಾಬ್ದಾರಿ. ಇಷ್ಟೆಲ್ಲಾ ಅವಕಾಶಗಳ ಲಭ್ಯತೆಯ ಹೊರತಾಗಿಯೂ ನಮಗೆ ಮತ್ತೊಬ್ಬ ಅಂಬೇಡ್ಕರ್ ಯಾಕೆ ಸಿಗಲಿಲ್ಲ ಎನ್ನುವುದು ಕೌತಕ ಹೌದು ನೋವಿನ ಸಂಗತಿಯೂ ಹೌದು.

# ಎಸ್‌ಸಿ-ಎಸ್‌ಟಿ, ಟಿಎಸ್‌ಪಿ ಹಣ ಲೂಟಿ ಮಾಡುತ್ತಿರುವ ಕಳ್ಳ ಕೈ



**ಕಳೆದ ಹತ್ತು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಸುಮಾರು 2,85,000 ಕೋ.ರೂ. ರಾಜ್ಯಕ್ಕೆ ದಕ್ಕಿರುವ ಸ್ಪಷ್ಟ ಮಾಹಿತಿ ಕೇಂದ್ರದ ಆರ್ಥಿಕ ಇಲಾಖೆಯಲ್ಲಿದೆ. ಈ ಹಣದಲ್ಲಿ ನೀವು ದಲಿತರಿಗಾಗಿಯೇ ಬಳಸಿದ ಅನುದಾನದ ಬಗ್ಗೆ ಸ್ಪಷ್ಟ ಮಾಹಿತಿಯ ಶ್ವೇತಪತ್ರವನ್ನು ನೀವು ಹೊರಡಿಸಬಲ್ಲಿರೇ? ಅದರಿಂದಾದ ದಲಿತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಇಡೀ ರಾಜ್ಯಕ್ಕೆ ನೀವು ಕೊಡಬಲ್ಲಿರೇ? ಸಾಧ್ಯವೇ ಇಲ್ಲ ಯಾಕೆಂದರೆ ದಲಿತರ ಹೆಸರಿನಲ್ಲಿ ದುರ್ಬಳಕೆಯಾದ ಹಣಕ್ಕೆ ಇಲ್ಲಿ ಲೆಕ್ಕವೇ ಇಲ್ಲ. ಕಾಂಗ್ರೆಸ್ ಸರ್ಕಾರ ಬಂದ ದಿನದಿಂದಲೂ ದಲಿತರ ಹಣವನ್ನು ಮಾನ್ಯ ಸಿದ್ದರಾಮಯ್ಯನವರು ಬಿಟ್ಟಿ'ಭಾಗ್ಯ' ಗಳಿಗೆ ಬಳಸಿಕೊಳ್ಳುತ್ತಿರುವುದು ದಲಿತರ ದೌರ್ಭಾಗ್ಯವೇ ಸರಿ.**



**ಪರಮಾನಂದ**
ರಾಜ್ಯ ಕಾರ್ಯದರ್ಶಿ
ಎಸ್ ಸಿ ಮೋರ್ಚಾ, ಬಿಜೆಪಿ

**ಮೊ**ನ್ನೆಯಷ್ಟೇ ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಶ್ರೀ ಹೆಚ್.ಸಿ. ಮಹದೇವಪ್ಪನವರು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸುತ್ತ ಎಸ್ ಸಿ –ಎಸ್‌ಟಿ, ಟಿ ಎಸ್ ಪಿ ಒಂದು ಕಾಯ್ದೆ ಇದನ್ನು ತಂದವರು ಸಿದ್ದರಾಮಯ್ಯನವರು ಎಂಬ ದಾಷ್ಟ್ರ್ಯದ ಉತ್ತರವನ್ನು ಕೊಡುವ ಮೂಲಕ ಸಿದ್ದರಾಮಯ್ಯ ಒಬ್ಬರೇ ದಲಿತರ ಉದ್ಧಾರಕರು ಎಂಬರ್ಥದಲ್ಲಿ ವ್ಯಾಖ್ಯಾನಿಸಿದರು. ಆದರೆ ಇಡೀ ದಲಿತ ಸಮುದಾಯಕ್ಕೆ ತಿಳಿದಿರಬೇಕಾದ ಸತ್ಯವೇನೆಂದರೆ ಎಸ್ ಸಿ ಎಸ್ ಟಿ ಗಳನ್ನು ಉದ್ಧಾರ ಮಾಡಲು ಸಿದ್ದರಾಮಯ್ಯನವರು ತನ್ನ ಇಚ್ಛಾಶಕ್ತಿಯಿಂದ ತಂದ ಕಾಯ್ದೆಯಲ್ಲ ಇದು. ಇದನ್ನು ಸಿದ್ದರಾಮಯ್ಯ ಮಾತ್ರವಲ್ಲ, ಆ ಸ್ಥಾನದಲ್ಲಿ ಬೇರೆ ಯಾರೇ ಇದ್ದರೂ ಅನಿವಾರ್ಯವಾಗಿ ಈ ಕಾಯ್ದೆಯನ್ನು ಜಾರಿಗೆ ತರಬೇಕಾಗಿತ್ತು.

ಕಾರಣ ಇದು ಅಂದಿನ ಕೇಂದ್ರ ಸರ್ಕಾರದ ಯೋಜನಾ ಆಯೋಗದ ಕಡ್ಡಾಯ ನಿರ್ದೇಶನವೇ ಆಗಿತ್ತು. ಹಾಗಾಗಿ ಕರ್ನಾಟಕದ 2014ರ ಬಜೆಟ್ ನಲ್ಲಿ ಇದನ್ನು ಜಾರಿಗೆ ತರಲಾಯಿತು. ನಿಜವಾಗಿಯೂ ಈ ಎಸ್ ಸಿ/ಎಸ್ ಟಿ ಗಳ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ಈ ಯೋಜನೆಯ ಜನಕ ಮಾಜಿ ರಾಷ್ಟ್ರಪತಿಗಳು ಕೆ.ಆರ್. ನಾರಾಯಣ್. ದಲಿತ ಸಮುದಾಯದವರೇ ಆದ ಕೇರಳ ಮೂಲದ ಕೆ.ಆರ್. ನಾರಾಯಣರವರು ಕೇಂದ್ರ ಸರ್ಕಾರದ ಪ್ಲಾನಿಂಗ್ ಕಮಿಷನ್ ಸಚಿವರಾಗಿದ್ದಾಗ ಈ ಯೋಜನೆಯನ್ನು ಜಾರಿಗೆ

ತಂದರು. ಈ ಯೋಜನೆಯ ಮೂಲ ಉದ್ದೇಶವೇನೆಂದರೆ ಆಯಾ ರಾಜ್ಯಗಳಲ್ಲಿ ಎಸ್ ಸಿ–ಎಸ್ ಟಿ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನಲ್ಲಿ ಹಣವನ್ನು ನಿಗದಿಪಡಿಸಿ ಅದನ್ನು ಕೇವಲ ದಲಿತ ಸಮುದಾಯದ ಅಭಿವೃದ್ಧಿಗಾಗಿ ಬಳಸಬೇಕೆಂಬುದು ಕಾಯ್ದೆಯ ನಿಯಮ. ಮತ್ತು ಇದಕ್ಕೆ ನಿಗದಿಯಾದ ಹಣವನ್ನು ಉಳಿಸುವಂತಿಲ್ಲ ಮತ್ತು ದಲಿತ ಅಭಿವೃದ್ಧಿಗೆ ಸಂಬಂಧವಿಲ್ಲದೆ ಬೇರೆ ಯಾವುದೇ ಯೋಜನೆಗಳಿಗೆ ಈ ಹಣವನ್ನು ವರ್ಗಾಯಿಸುವಂತಿಲ್ಲ.

ಮಾನ್ಯ ಸಮಾಜ ಕಲ್ಯಾಣ ಇಲಾಖೆ ಸಚಿವರ ಮತ್ತೊಂದು ಉಡಾಫೆಯ ಮಾತು ಏನೆಂದರೆ.... ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್ ನಲ್ಲಿ ಎಸ್ ಸಿ ಎಸ್ ಟಿ ಗಳ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣವೆಷ್ಟು ? ಇದು ದಲಿತರಿಗೆ ಮೋಸಗೊಳಿಸಲು ಹೇಳುತ್ತಿದ್ದ ಒಂದು ಹಾಸ್ಯಸ್ಪದ ರಾಜಕೀಯದ ಹೇಳಿಕೆ. ಈ ಮಾತುಗಳು ಸಮಾಜ ಕಲ್ಯಾಣದ ಮುಖವಾಡದ ಹಿಂದೆ ಒಬ್ಬ ದಲಿತ ಮೋಸಗಾರ ಸಚಿವರಿರುವರೆಂದು ಭಾಸವಾಗುತ್ತಿತ್ತು. ಕಳೆದ ಹತ್ತು ವರ್ಷದಿಂದ ರಾಜ್ಯದಲ್ಲಿರುವ ಯಾವುದೇ ಸರ್ಕಾರವು ಕೇಂದ್ರದಿಂದ ಪಡೆಯಬೇಕಾದ ಅನುದಾನವನ್ನು ಎಲ್ಲ ಇಲಾಖೆಗಳಿಗೂ ಪಡೆಯುತ್ತಲೇ ಇದೆ. ಕಳೆದ ಹತ್ತು ವರ್ಷಗಳಿಂದ ಕೇಂದ್ರ ಸರ್ಕಾರದಿಂದ ಸುಮಾರು 2,85,000 ಕೋಟಿ ರೂಪಾಯಿಗಳು ರಾಜ್ಯಕ್ಕೆ ದಕ್ಕಿರುವ ಸ್ಪಷ್ಟ ಮಾಹಿತಿ ಕೇಂದ್ರದ ಆರ್ಥಿಕ ಇಲಾಖೆಯಲ್ಲಿದೆ.

ಈ ಹಣದಲ್ಲಿ ನೀವು ದಲಿತರಿಗಾಗಿಯೇ ಬಳಸಿದ ಅನುದಾನದ ಬಗ್ಗೆ ಸ್ಪಷ್ಟ ಮಾಹಿತಿಯ ಶ್ವೇತಪತ್ರವನ್ನು ನೀವು ಹೊರಡಿಸಬಲ್ಲಿರೇ? ಅದರಿಂದಾದ ದಲಿತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾಹಿತಿಯನ್ನು ಇಡೀ ರಾಜ್ಯಕ್ಕೆ ನೀವು ಕೊಡಬಲ್ಲಿರೇ? ಸಾಧ್ಯವೇ ಇಲ್ಲ ಯಾಕೆಂದರೆ ದಲಿತರ ಹೆಸರಿನಲ್ಲಿ ದುರ್ಬಳಕೆಯಾದ ಹಣಕ್ಕೆ ಇಲ್ಲಿ ಲೆಕ್ಕವೇ ಇಲ್ಲ. ಕಾಂಗ್ರೆಸ್ ಸರ್ಕಾರ ಬಂದ ದಿನದಿಂದಲೂ ದಲಿತರ ಹಣವನ್ನು ಮಾನ್ಯ ಸಿದ್ದರಾಮಯ್ಯನವರು ಬಿಟ್ಟಿ 'ಭಾಗ್ಯ' ಗಳಿಗೆ ಬಳಸಿಕೊಳ್ಳುತ್ತಿರುವುದು ದಲಿತರ ದೌರ್ಭಾಗ್ಯವೇ ಸರಿ.

ಯೋಜನಾ ಆಯೋಗದ ನಿಯಮದ ಪ್ರಕಾರ ಎಸ್ ಸಿ ಎಸ್ ಟಿ, ಟಿಎಸ್‌ಪಿ ಹಣವು ಕೇವಲ ದಲಿತರ ಅಭಿವೃದ್ಧಿಗಾಗಿ ಮಾತ್ರ ಬಳಸಬೇಕು. ಈ ಬಿಟ್ಟಿ ಭಾಗ್ಯಗಳಿಂದ ಎಷ್ಟು ದಲಿತರ ಅಭಿವೃದ್ಧಿಯಾಗಿದೆ ಎಂಬ ಸ್ಪಷ್ಟ ಮಾಹಿತಿ ಸರ್ಕಾರದ ಬಳಿ ಇದೆಯೇ? ಈ ಕಾಯ್ದೆಯ ಪ್ರಕಾರ ಶಾಸನಬದ್ಧವಾಗಿ ನಿಗದಿಯಾದ ಈ ಹಣ ಸಂಬಂಧಿಸಿದ ಧ್ಯೆಯೋದ್ದೇಶಗಳಿಗೆ ಮಾತ್ರ ವೆಚ್ಚ ಆಗಬೇಕೆಂಬುದು ಈ ಅಧಿನಿಯಮದ ಮೂಲ ಉದ್ದೇಶ ಮತ್ತು ಪ್ರಮುಖ ಗುರಿಯಾಗಿರುತ್ತದೆ.

ಎಸ್‌ಸಿ–ಎಸ್‌ಟಿ ಮತ್ತು ಟಿಎಸ್‌ಪಿ ಕಾಯ್ದೆಯ ಮೂಲ ಉದ್ದೇಶವೇ ಸಮಾಜದಲ್ಲಿ ಹಿಂದುಳಿದ ದಲಿತರನ್ನು ಸಮಾಜದಲ್ಲಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲ್ವರ್ಗದವರ ಸಮ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಒಂದು ಸಾಮಾಜಿಕ ನ್ಯಾಯದ ಕಾರಣಕ್ಕಾಗಿಯೇ ರೂಪಿತವಾದ ಯೋಜನೆ ಇದಾಗಿದೆ. ಈ ಯೋಜನೆಯಲ್ಲಿ ದಲಿತರನ್ನು ವ್ಯಕ್ತಿಗತವಾಗಿ ಮತ್ತು ಸಮುದಾಯವಾಗಿ ಅಭಿವೃದ್ಧಿಗೊಳಿಸುವ ಕ್ರಿಯಾಯೋಜನೆಯನ್ನು ರೂಪಿಸಲಾಗಿರುತ್ತದೆ. ಆದರೆ ಈ ಭಾಗ್ಯಗಳ ಹೆಸರಿನಲ್ಲಿ ದಲಿತರ ಹಣವನ್ನು ಕೇವಲ ದಲಿತರಿಗಾಗಿ ಮಾತ್ರ ಬಳಸದೆ ಎಲ್ಲಾ ಸಮುದಾಯದವರಿಗು ಕೊಡುತ್ತಿರುವುದು ಅನ್ಯಾಯವಲ್ಲವೇ?

ಎಸ್ ಸಿ ಎಸ್ ಪಿ – ಟಿ ಎಸ್ ಪಿ ಕಾರ್ಯಕ್ರಮದ ಅನುಷ್ಠಾನಗಳಲ್ಲಿ ಫಲಾನುಭವಿಗಳ ಆಯ್ಕೆ, ಹಾಗು ಫಲಾನುಭವಿಗಳ ಮಾಹಿತಿ ಸ್ಪಷ್ಟವಾಗಿ ಮತ್ತು ಪಾರದರ್ಶಕವಾಗಿರಬೇಕು. ಈ ರೀತಿಯ ಪ್ರಕ್ರಿಯೆಯು ಬಿಟ್ಟಿಭಾಗ್ಯಗಳಿಗೆ ಹಂಚಲಾಗುತ್ತಿರುವ ಅನುದಾನದ ಹಣದಿಂದ ನಮಗೆ ಸಿಗಬಹುದೇ? ಒಟ್ಟು 36 ಇಲಾಖೆಗಳ 470 ಕಾರ್ಯಕ್ರಮಗಳಿಗೆ ಹಂಚಲಾಗುವ ಈ ಅನುದಾನದಲ್ಲಿ ಪ್ರಮುಖವಾಗಿ ಕೃಷಿ ಇಲಾಖೆಯಲ್ಲಿ ಮಹಿಳೆಯರಿಗೆ ಭೂ ಒಡೆತನದ ಯೋಜನೆಗೆ ಈ ಹಣ ವಿನಿಯೋಗವಾಗಬೇಕು. ಕಾಂಗ್ರೆಸ್ ಸರ್ಕಾರವು ಕರ್ನಾಟಕದಲ್ಲಿ ರಚನೆಯಾದ ದಿನದಿಂದ ಇಲ್ಲಿಯವರೆಗೆ ಎಷ್ಟು ಜನ ದಲಿತ ಮಹಿಳೆಯರು ಭೂಮಿಯ ಒಡತಿಯರಾಗಿದ್ದಾರೆ? ಎಸ್ ಸಿ ಎಸ್ ಪಿ, ಟಿ ಎಸ್ ಪಿ ಯ ಈ ಹಣವು ಬಹಳ ಪ್ರಮುಖವಾಗಿ ವಿನಿಯೋಗಿಸಬೇಕಾದದ್ದು ದಲಿತ ಮಕ್ಕಳ ಶಿಕ್ಷಣಕ್ಕಾಗಿ. ಆದರೆ ಇದೇ ಹಣವು ನಮಗೆ ವಾಲ್ಮೀಕಿ ಹಗರಣದ ಮೂಲಕ ಬೆಳಕಿಗೆ ಬಂದಿದ್ದೇನೆಂದರೆ ತೆಲಂಗಾಣದ ಚುನಾವಣೆಗೆ ಬಳಸಿಕೊಂಡು ಭ್ರಷ್ಟಾಚಾರವಾಗಿದ್ದು. ಆ ಕಾರಣಕ್ಕಾಗಿಯೇ ಸಚಿವ ನಾಗೇಂದ್ರರವರು ಜೈಲಿಗೆ ಹೋಗಿದ್ದು. ಇದು ಮಹಾ ದಲಿತ ದ್ರೋಹವಲ್ಲವೇ?

ಎಸ್‌ಸಿ –ಎಸ್‌ಟಿ ಮತ್ತು ಟಿಎಸ್‌ಪಿಯ ಹಣ ಕ್ರಮವಾಗಿ ದುರ್ಬಳಕೆಯಾಗಿದ್ದು 2023–24ರ ಬಬಜೆಟ್‌ನಲ್ಲಿ 11,144 ಸಾವಿರ ಕೋಟಿ, 2024–25ರ ಸಾಲಿನಲ್ಲಿ 14,282 ಸಾವಿರ ಕೋಟಿ ಹಣ ಅಂದರೆ ಒಟ್ಟು 25,426 ಸಾವಿರ ಕೋಟಿ ಹಣ ಪಂಚ ಭಾಗ್ಯಗಳ ಹೆಸರಿನಲ್ಲಿ ಲೂಟಿ ಆಯ್ತು. ಮುಂದಿನ 2025–26ರ ಸಾಲಿನ 13,433.84 ಸಾವಿರ ಕೋಟಿ ಹಣವನ್ನು ಈ ಭಿಕ್ಷಾ ಭಾಗ್ಯಗಳಿಗೆ ಬಳಸುವ ಪ್ರಸ್ತಾವನೆ ಸಲ್ಲಿಸಲಾಗಿದೆಯಂತೆ. ಅಲ್ಲಿಗೆ ಮೂರು ವರ್ಷಗಳಲ್ಲಿ ಒಟ್ಟು 38,860 ಸಾವಿರ ಕೋಟಿ ಹಣ ವ್ಯಯವಾಗಿದೆ ಮತ್ತು ವ್ಯರ್ಥವಾಗಿದೆ. ಸಮಾಜ ಕಲ್ಯಾಣ ಇಲಾಖೆಯ ಆಣೆಗೂ ಸತ್ಯವೇನೆಂದರೆ ಈ ಹಣದಿಂದ ಇಡೀ ರಾಜ್ಯದಲ್ಲಿ ಕೇವಲ 30 ದಲಿತ ಕುಟುಂಬಗಳು ಉದ್ಧಾರವಾಗಿಲ್ಲ. ಅಲ್ಲಿಗೆ ದಲಿತರ ಹೆಸರಿನಲ್ಲಿ ಈ ರಾಜ್ಯದಲ್ಲಿ ದುರಾಡಳಿತದ ದರ್ಬಾರ ನಡೆಯುತ್ತಿದೆ ಎಂದು ದಲಿತರು ಈಗಲಾದರೂ ಅರ್ಥಮಾಡಿಕೊಳ್ಳಬೇಕಾಗಿದೆ.

ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಮಾನ್ಯ ಎಚ್ ಸಿ

ಮಾದೇವಪ್ಪನವರು 'ಸಂವಿಧಾನ ಜಾಥ' ಎಂಬ ಕಾರ್ಯಕ್ರಮದ ಹೆಸರಿನಲ್ಲಿ ದಲಿತರನ್ನು ಯಾಮಾರಿಸಿ ಎಸ್ ಸಿ ಎಸ್ ಪಿ-ಟಿ ಎಸ್ ಪಿ ಹಣವನ್ನು ಗೋತಾ ಮಾಡಿದ್ದಾರೆ. ದಲಿತರ ಉದ್ದಾರ ಅವರಿಗೆ ಆದ್ಯತೆಯ ವಿಷಯವಾಗಿಲ್ಲ. ಆದರೆ ರಾಜ್ಯದಲ್ಲಿರುವ ದಲಿತ ಮುಖಂಡರೆಲ್ಲರೂ ಈಗಲಾದರೂ ಜಾಗೃತರಾಗಿ ಈ ವಿಚಾರವಾಗಿ ಹೋರಾಟಕ್ಕಾಗಿ ಬೀದಿಗೆ ಇಳಿಯಬೇಕಾಗಿದೆ. ಇಲ್ಲದಿದ್ದರೆ ಭಾಗ್ಯಗಳ ಹೆಸರಿನಲ್ಲಿ ನಮ್ಮ ಸಮುದಾಯದ ಮೇಲಾಗುತ್ತಿರುವ 'ಆರ್ಥಿಕ ಶೋಷಣೆ'ಗೆ ವಿಮೋಚನೆಯೇ ಇಲ್ಲದಂತಾಗುತ್ತದೆ.

2023-24ರ ಫೆಬ್ರವರಿ ಯ ಚುನಾವಣಾ ಪೂರ್ವ ಬಜೆಟ್ ನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರು ಎಸ್ ಸಿ ಎಸ್ ಪಿ-ಟಿ ಎಸ್ ಪಿ ಕಾಯ್ದೆಯಲ್ಲಿ ಈ 7D ನಿಯಮವನ್ನು ರದ್ದುಪಡಿಸುವ ಪ್ರಸ್ತಾಪ ಮಾಡಿದ್ದರು. ಆದರೆ ಚುನಾವಣೆಯ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾಗಿ ಮಾನ್ಯ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯು ಆಗಿ ಅವರೇ ಅರ್ಥ ಸಚಿವರು ಆಗಿ ಅವರು ಮಂಡಿಸಿದ ಬಜೆಟ್ ನಲ್ಲಿ 7D ನಿಯಮವನ್ನು ರದ್ದುಗೊಳಿಸಿದರು. ಹೀಗೆ 7D ನಿಯಮವನ್ನು ಬೆಳಿಗ್ಗೆ ರದ್ದುಗೊಳಿಸಿ ನಾನೇ ದಲಿತೋದ್ಧಾರಕ ಎಂದು ಮೀಸೆ ತಿರುವುತ್ತಿದ್ದ ಸಿದ್ದರಾಮಯ್ಯರವರು ಅಂದು ಸಂಜೆಯೇ 7c ನಿಯಮದ ಮೂಲಕ ತನ್ನ ಕಳ್ಳ 'ಕೈ'ಯನ್ನು ಚಾಚಿ ಎಸ್ಸಿ ಎಸ್ ಪಿ-ಟಿ ಎಸ್ ಪಿ ಹಣವನ್ನು ಲೂಟಿ ಮಾಡಿದರು. 7c ನಿಯಮಾವಳಿಯಲ್ಲಿ ಎಸ್ ಸಿ ಎಸ್ ಸಿ ಪಿ, ಟಿ ಎಸ್ ಪಿ ಹಣ ಬಳಸುವುದಿದ್ದರೆ ಅದನ್ನು ಜನಸಂಖ್ಯೆ ಆಧಾರದ ಮೇಲೆ ವಿನಿಯೋಗಿಸಬೇಕಾಗುತ್ತದೆ. ಉದಾಹರಣೆಗೆ ನೂರು ಜನರಲ್ಲಿ 20 ಜನ ದಲಿತರಿದ್ದರೆ ಆ 20 ಜನರಿಗೆ ಮಾತ್ರ ಉಪಯೋಗವಾಗುವಂತೆ ಅನುದಾನ ನೀಡಬೇಕಾಗುತ್ತದೆ. ಬದಲಾಗಿ ಉಳಿದ 80ಜನರಿಗೆ ಆ ಹಣ ಉಪಯೋಗವಾಗುವುದಾದರೆ ಅದು ಈ ಯೋಜನೆಯ ಹಣವನ್ನು ದುರುಪಯೋಗ ಪಡಿಸಿಕೊಂಡಂತೆ. ಆದರೆ ಈ ಬಟ್ಟಿ ಭಾಗ್ಯಗಳಲ್ಲಿ ದಲಿತರಿಗಿಂತ ಉಳಿದ ಸಮುದಾಯದವರಿಗೆ ಬಳಕೆಯಾದ ಹಣ ಹೆಚ್ಚು. ಅತ್ತೆಯ ಆಸ್ತಿ ಅಳಿಯ ದಾನ ಮಾಡಿದಂತಾಗಿದೆ ಸರ್ಕಾರದ ಈ ನಡೆ. ಅಲ್ಲದೆ ಇದು ವರ್ಷದಿಂದ ವರ್ಷಕ್ಕೆ ಪ್ರಮಾಣದಲ್ಲಿ ಹೆಚ್ಚುತ್ತಿರುವ ಹಗಲು ದರೋಡೆಯೇ ಆಗಿದೆ.

ನಿಜ ಹೇಳಬೇಕು ಎಂದರೆ ದಲಿತರಲ್ಲಿ ಜ್ಞಾನದಾಹವೂ ಇಲ್ಲ ಹಣದಾಹವೂ ಇಲ್ಲ. ಈ ಎಸ್ ಸಿ ಎಸ್ ಪಿ-ಟಿ ಎಸ್ ಪಿ ಹಣ ನಮ್ಮ ಸಮುದಾಯಕ್ಕಾಗಿ ಹೇಗೆ ಬರುತ್ತದೆ ಅದು ಹೇಗೆ ಬಳಕೆಯಾಗಬೇಕು ಆದರೇ ಅದು ಹೇಗೆ ಮೋಸವಾಗುತ್ತಿದೆ ಎಂಬ ಸತ್ಯವಂಶವನ್ನು ತಿಳಿಯುವ ಜ್ಞಾನದಾಹವೂ ಇಲ್ಲ.ಅಥವಾ ಈ ಹಣವನ್ನು ನಾವು ಪಡೆದು ನಮ್ಮ ಸ್ವಾವಲಂಬಿ ಜೀವನ ರೂಪಿಸಿಕೊಳ್ಳುವ ಮೂಲಕ ಸಮಾಜದೊಳಗೆ ಎಲ್ಲರಂತೆ ಸಂಪಾದಿಸಿ ಸ್ವ ಮತ್ತು ಸಮುದಾಯದ ಅಭಿವೃದ್ಧಿಯಾಗಿ ಎಲ್ಲರ ಸಮಾನರಾಗಿ ಬದುಕಬೇಕೆಂಬ ಹಣದಾಹವೂ ಇಲ್ಲ. ಈ ದಲಿತ ಜನಾಂಗವು ಕಾಂಗ್ರೆಸ್ ಎಂಬ ತೋಳವು ನಮ್ಮಂಥ ಕುರಿಗಳನ್ನು ಕಾಯುವ ದೇವರಂತೆ ಎಂದು ನಂಬಿ ಬದುಕುತ್ತಿದೆ.

ಈ ಸಾಲಿನ ಮುಂಗಡ ಪತ್ರ ಓದಿದ ನಂತರ ನಮಗೆ ಸ್ಪಷ್ಟವಾಗಿ ಅರ್ಥವಾದ ವಿಚಾರವೇನೆಂದರೆ ಈ ದೇಶಕ್ಕೆ ಸ್ವತಂತ್ರ ಬಂದ ದಿನದಿಂದಲೂ ಇಂದಿನ ದಿನದ ವರೆಗೂ ಕಾಂಗ್ರೆಸ್ ಗೆ ಮುಸಲ್ಮಾನರ ಮೇಲೆ ಇರುವಷ್ಟು ಕಾಳಜಿಯ ಎಳ್ಳಷ್ಟು ದಲಿತರ ಮೇಲೆ ಇಲ್ಲ. ಈ ವಿಚಾರವನ್ನು ಸೆಪ್ಟೆಂಬರ್ 27, 1951 ರಂದು ತಮ್ಮ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವಾಗ ಬಾಬಾ ಸಾಹೇಬ್ ಬಿ.ಆರ್. ಅಂಬೇಡ್ಕರ್ ರವರು ತಮ್ಮ ರಾಜೀನಾಮೆ ಪತ್ರದ 5 ಅಂಶಗಳಲ್ಲಿ ಪ್ರಮುಖವಾಗಿ ಉಲ್ಲೇಖಿಸುವ ಒಂದು ಅಂಶವೇನೆಂದರೆ ಅವರು ನೆಹರುರವರನ್ನು ಕುರಿತು ಹೇಳುವ ಮಾತು ನೆಹರುರವರು ಅಸ್ಪಶ್ಯರ ಬಗ್ಗೆ ಉದಾಸೀನರಾಗಿದ್ದಾರೆ ಅಷ್ಟೇ ಅಲ್ಲ ಅವರು ಅಸ್ಪಶ್ಯರ ವಿರುದ್ಧವಾಗಿದ್ದಾರೆಂದು ತೋರುತ್ತದೆ. ನೆಹರು ಮತ್ತು ಕಾಂಗ್ರೆಸ್ ಮುಸ್ಲಿಮರಿಗೆ ನೀಡುವ ರಕ್ಷಣೆ ಮತ್ತು ಅವರ ಅಭಿವೃದ್ಧಿಗೆ ನೀಡುವ ಪ್ರಾಮುಖ್ಯತೆಯ ಆಸಕ್ತಿಯನ್ನು ಅಸ್ಪಶ್ಯರ ಮೇಲೆ ತೋರಿಸುತ್ತಿಲ್ಲ. ಎಂದಿದ್ದರು. ಅಂದಿನ ಬಾಬಾ ಸಾಹೇಬರ ಆ ಮಾತು ಈ ಸಾಲಿನ ರಾಜ್ಯದ ಬಜೆಟ್ ಮಂಡಿಸಿದ ನಂತರವಂತೂ ದಲಿತರ ಮೇಲೆ ಒಂದಿಂಚೂ ಬದಲಾಗದ ಕಾಂಗ್ರೆಸ್ ಮನಸ್ಥಿತಿ ಸಾಬೀತಾಗಿ ಹೋಯ್ತು. ಇನ್ನೂ ನಮ್ಮ ದಲಿತರು 'ಕಾಂಗ್ರೆಸ್ ನಮ್ಮನ್ನು ಉದ್ದಾರ ಮಾಡುತ್ತದೆ' ಎಂಬ ಭ್ರಮೆಯಲ್ಲಿರುವುದು ಮೂರ್ಖತನವೇ ಸರಿ.

ಎಸ್ ಸಿ-ಎಸ್ ಟಿ, ಟಿಎಸ್‌ಪಿ ಹಣದ ಅನುಷ್ಠಾನದ ಬಗ್ಗೆ ಪ್ರತೀ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವರ್ಷಕ್ಕೆ 4 ಸಭೆ ನಡೆಯಬೇಕು. ಆದರೇ ಒಂದೇ ಒಂದು ಸಭೆ ಕೂಡ ನಡೆಯುತ್ತಿಲ್ಲ. ನೂಡಲ್ ಅಧಿಕಾರಿಗಳ ವರದಿ ಇಲ್ಲ. ನಡೆಯುವ ಅಪರೂಪದ ಸಭೆಗಳಲ್ಲೂ ದಲಿತಪರ ಕಾಳಜಿ ಇರುವ ಯಾವ ವ್ಯಕ್ತಿಯೂ ಅಲ್ಲಿರುವುದಿಲ್ಲ. ಇರುವ ಮೇಲ್ವರ್ಗದ ಅಧಿಕಾರಿಗಳು ತಮಗೆ ಇಚ್ಚೆ ಬಂದ ಕ್ರಿಯಾ ಯೋಜನೆ ರಚಿಸಿಕೊಂಡು ದಲಿತರ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಎಸ್ ಸಿ -ಎಸ್ ಟಿ, ಟಿಎಸ್‌ಪಿ ಹಣದ ಅನುಷ್ಠಾನ ಮತ್ತು ಸದ್ಬಳಕೆಗಾಗಿ ಪ್ರತೀ ಜಿಲ್ಲೆಯಲ್ಲಿ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನೊಳಗೊಂಡಂತೆ ಸಮುದಾಯಪರ ಕಾಳಜಿ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸದಸ್ಯರ ಸಮಿತಿಯೊಂದನ್ನು ರಚಿಸುವ ನಿಯಮ ರೂಪಿಸಬೇಕು. ಆ ಹಣ ದುರ್ಬಳಕೆಯಾದರೇ ಈ ತಂಡವೇ ನೇರ ಹೊಣೆಗಾರರಾಗಬೇಕು. ಅಗಲಾದರೂ ದಲಿತರ ಉದ್ದಾರವಾಗಬಹುದ ಕಾದು ನೋಡಬೇಕು.

ದಲಿತರೆ ಜಾಗೃತರಾಗಿ, ಇಂಥಹ 'ಆರ್ಥಿಕ ಶೋಷಣೆ'ಯಿಂದ ಎಚ್ಚೆತ್ತುಕೊಳ್ಳಿ. ಇನ್ನು ಮುಂದಾದರೂ ನಿಮ್ಮ ಹಕ್ಕನ್ನು ನೀವೇ ಕೇಳಿ... ನಿಮಗೆ ತಿಳಿದ ಸತ್ಯವನ್ನು ನಾಲ್ಕು ಜನ ದಲಿತರಿಗೆ ಹೇಳಿ...

# ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ವಿಶ್ವದಾದ್ಯಂತ ಮಾರ್ಚ್ 8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. 'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಎಲ್ಲಿ ಸ್ತ್ರೀಯರಿಗೆ ಗೌರವ ಸನ್ಮಾನಗಳು ದೊರೆಯುತ್ತವೆಯೋ, ಅಲ್ಲಿ ದೇವತೆಗಳು ವಾಸಿಸುತ್ತಾರೆ. ಈ ಮಾತು ಭಾರತೀಯ ಪರಂಪರೆಯಲ್ಲಿ ಹೆಣ್ಣು ಮಕ್ಕಳ ಸ್ಥಾನಮಾನವನ್ನು ಸೂಚಿಸುತ್ತದೆ. ವಿಶ್ವಸಂಸ್ಥೆಯು 1975ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲು ಆರಂಭಿಸಿತು. ಮಹಿಳೆಯು ತಾಯಿಯಾಗಿ, ಸಹೋದರಿಯಾಗಿ, ಮಡದಿಯಾಗಿ, ಶತಮಾನಗಳಿಂದ ಪುರುಷರ ಬೆನ್ನೆಲುಬಾಗಿ ನಿಂತಿದ್ದಾಳೆ.**



**ಶ್ರೀ ರಜನಿ ಪೈ**
ರಾಜ್ಯ ಕಾರ್ಯಾಲಯ ಕಾರ್ಯದರ್ಶಿ
ಮಹಿಳಾ ಮೋರ್ಚಾ,
ಬಿಜೆಪಿ – ಕರ್ನಾಟಕ

ಪ್ರತಿಯೊಬ್ಬ ಮಹಿಳೆಯು ಸಾಧಕಿಯೇ. ಅಂತಹ ಮಹಿಳೆಯರ ಕೊಡುಗೆಗಳನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಸಲ್ಲಿಸುವ ವಿಶೇಷ ದಿನ. ದೇಶದ ಸರ್ವತೋಮುಖ ಪ್ರಗತಿಗೆ ಮಹಿಳೆಯರ ಪಾತ್ರ ಪ್ರಮುಖ ಮತ್ತು ಇದು ಅತ್ಯಗತ್ಯ. ಮನೆ ಮನೆಯಲ್ಲಿ ದೀಪ ಉರಿಸಿ ಹೊತ್ತು ಹೊತ್ತಿಗೆ ಅನ್ನ ಉಣಿಸಿ ನಿನಗೆ ಬೇರೆ ಹೆಸರು ಬೇಕೆ ಸ್ತ್ರೀ ಅಂದರೆ ಅಷ್ಟೇ ಸಾಕೇ.. ಅಂದರೆ ಮನೆಯ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು ಮನೆಯಿಂದ ಹೊರಗೆ ಎಲ್ಲಾ ಕ್ಷೇತ್ರಗಳಲ್ಲೂ ಅಂದರೆ ರಾಜಕೀಯ, ಸಾಮಾಜಿಕ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅನೇಕ ಸಾಧನೆಗಳನ್ನು ಮಾಡಿ ಸೈ ಎನಿಸಿಕೊಂಡಿದ್ದಾಳೆ.

ದೇಶದ ಮೊದಲ ಪ್ರಜೆ ದ್ರೌಪದಿ ಮುರ್ಮು, ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರನ್ನು ನಮ್ಮ ಪ್ರಧಾನಿ ಶ್ರೀ ನರೇಂದ್ರ ಮೋದಿಜಿ ಅವರು ಆಯ್ಕೆ ಮಾಡಿದ್ದಾರೆ. ನಮ್ಮ ನೆಚ್ಚಿನ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಮಹಿಳೆಯರ ಆರ್ಥಿಕ ಸಬಲೀಕರಣ ಹಾಗೂ ಅವರ ಕನಸನ್ನು ನನಸಾಗಿಸಲು ಅನೇಕ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಮಹಿಳಾ ದಿನಾಚರಣೆಯ ಅಂಗವಾಗಿ ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಆರೋಗ್ಯ ಜಾಗೃತಿಗಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ನೀಡಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಒದಗಿಸುವ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು ಹಾಗೂ ಈ ಯೋಜನೆಗಳ ಫಲಾನುಭವಿಗಳನ್ನು ಸನ್ಮಾನಿಸಿ ಅವರ ಯಶಸ್ಸಿನ ಕಥೆಗಳನ್ನು ಹಂಚಿಕೊಳ್ಳಲಾಯಿತು.

ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ಆಡಳಿತಾವಧಿಯಲ್ಲಿ ಜಾರಿಗೊಳಿಸಿದ ಯೋಜನೆಗಳು

ಅಂದರೆ ಮುದ್ರಾ ಯೋಜನೆ, ಜನ ಧನ್ ಯೋಜನೆ, ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ,ಸ್ವನಿಧಿ ಯೋಜನೆ ಹಾಗೂ ಇನ್ನಿತರ ಅನೇಕ ಯೋಜನೆಗಳ ಲಾಭಾರ್ಥಿಗಳನ್ನು ಗುರುತಿಸಿ ಈ ಯೋಜನೆಗಳ ಮೂಲಕ ಯಶಸ್ಸು ಸಾಧಿಸಿದ ಮಹಿಳೆಯರನ್ನು ಸನ್ಮಾನಿಸಿ ಅವರ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ಇತರ ಮಹಿಳೆಯರಿಗೆ ಪ್ರೇರಣೆ ನೀಡುವ ಕಾರ್ಯಕ್ರಮವು ನಮ್ಮ ರಾಜ್ಯದ 22 ಜಿಲ್ಲೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು ಹಾಗೂ ನರೇಂದ್ರ ಮೋದಿಜಿ ಅವರು ಮಹಿಳೆಯರ ಆರೋಗ್ಯದ ದೃಷ್ಟಿಯಿಂದ ಅಂಗಾಂಗ ದಾನ ಜಾಗೃತಿ ಶಿಬಿರ ಹಾಗೂ ಅಂಗಾಂಗ ದಾನದ ಮಹತ್ವದ ಕುರಿತು ಜಾಗೃತಿ ಮೂಡಿಸುವ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ಬೆಂಗಳೂರು ಮಹಾನಗರ ಜಿಲ್ಲೆಯ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಆಚರಿಸಲಾಯಿತು. ರಾಜ್ಯಾಧ್ಯಕ್ಷರೂ ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ದೇಶದ ಸರ್ವತೋಮುಖ ಪ್ರಗತಿಗೆ ಈ ದೇಶದ ತಾಯಂದಿರು, ನಾರಿಯರ ಪಾತ್ರ ಪ್ರಮುಖ ಮತ್ತು ಇದು ಅತ್ಯಗತ್ಯ. ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ಅಪೇಕ್ಷೆಯಂತೆ ಸಾಧಕರಾದ ತಾಯಿ, ಸಹೋದರಿಯರ ಸನ್ಮಾನ ಮಾಡುತ್ತಿದ್ದೇವೆ ಎಂದು ಹೇಳಿದರು. ದೇಶದೆಲ್ಲೆಡೆ ಇದರ ಆಚರಣೆ ಅರ್ಥಪೂರ್ಣವಾಗಿ ನಡೆಯುತ್ತಿದೆ ಎಂದು ವಿವರಿಸಿದರು. ಮನೆ ಮನೆಯಲ್ಲಿ ದೀಪ ಉರಿಸಿ, ಹೊತ್ತು ಹೊತ್ತಿಗೆ ಅನ್ನ ಉಣಿಸಿ.. ಸ್ತ್ರೀ ಅಂದರೆ ಅಷ್ಟೇ ಸಾಕೇ? ಎಂಬ ಕವಿತೆಯ ಸಾಲುಗಳನ್ನು ತಿಳಿಸಿದ ಅವರು, ದೇಶದ ಮೊದಲ ಪ್ರಜೆ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು, ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರನ್ನು ನಮ್ಮ ಪ್ರಧಾನಿ ಶ್ರೀ ನರೇಂದ್ರ ಮೋದಿಜೀ ಅವರು ಆಯ್ಕೆ ಮಾಡಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು.

ಮೋದಿಜೀ ಅವರ ಜನಧನ್ ಸೇರಿ ಎಲ್ಲ ಯೋಜನೆಗಳು, ಯಡಿಯೂರಪ್ಪ ಅವರ ಭಾಗ್ಯಲಕ್ಷ್ಮಿ ಯೋಜನೆಗಳನ್ನು ಬಿಜೆಪಿಯು ನೀಡಿದಾಗ ಅವು ಯಾವುದೇ ಜಾತಿಗೆ ಸೀಮಿತ ಆಗಿರಲಿಲ್ಲ ಎಂದು ತಿಳಿಸಿದರು. ಕೇಂದ್ರದ ಶೇ 33 ಮೀಸಲಾತಿಯಿಂದ ತಾಯಂದಿರ ಅವಕಾಶಗಳು ಹೆಚ್ಚಲಿವೆ ಎಂದು ಹೇಲಿದರು. ಈ ಕಾರ್ಯಕ್ರಮದಲ್ಲಿ 6 ಜನ ಸಾಧಕಿಯರನ್ನು ಸನ್ಮಾನಿಸಲಾಯಿತು. ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ, ರಾಜ್ಯ ಮಹಿಳಾ ಮೋರ್ಚಾ ನಿಕಟಪೂರ್ವ ಅಧ್ಯಕ್ಷೆ ಶ್ರೀಮತಿ ಗೀತಾ ವಿವೇಕಾನಂದ, ರಾಷ್ಟ್ರೀಯ ಮಹಿಳಾ ಮೋರ್ಚಾ ಕಾರ್ಯಕಾರಿಣಿ ಸದಸ್ಯೆ ಶ್ರೀಮತಿ ಶಾಂತಲಾ ಭಟ್, ಶ್ರೀಮತಿ ಪೂರ್ಣಿಮಾ ಪ್ರಕಾಶ್, ಡಾ. ವಸುಧಾ ಕುಲಕರ್ಣಿ ಹಾಗೂ ಬೆಂಗಳೂರು ಮಹಾನಗರದ ಮೂರು ಜಿಲ್ಲೆಯ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷರು ಉಪಸ್ಥಿತರಿದ್ದರು.



ಮೈಸೂರು ಮಹಾನಗರ ಜಿಲ್ಲೆಯ ನಗರ ನಗರ ಬಿಜೆಪಿ ಕಚೇರಿಯಲ್ಲಿ ಆಯೋಜಿಸಲಾದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾದ ಕು. ಸಿ. ಮಂಜುಳಾ ರವರು ಮಾತನಾಡಿ ಮಹಿಳೆಯರಿಗೆ ಆರ್ಥಿಕ ಸಬಲೀಕರಣ ಅರಿವು ಮೂಡಿಸುವುದರೊಂದಿಗೆ ಅವರ ಸಾಧನೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದು ಪಕ್ಷದ ಮಹತ್ವದ ಕಾರ್ಯ ಎಂದು ಹೇಳಿದರು. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದು ಸಂತಸದ ವಿಷಯವಾಗಿದೆ. ಬಿಜೆಪಿ ಪಕ್ಷ ಕೂಡ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುತ್ತಿದೆ. ಇದರ ಜತೆಗೆ ಮಹಿಳೆಯರಿಗೆ ಹಲವು ವಿಚಾರಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಇದರಲ್ಲಿ ಆಧುನಿಕ ಆರೋಗ್ಯ ಸೇವೆಯಲ್ಲಿ ಅಂಗಾಗ ದಾನ ಬಹುಮುಖ್ಯವಾಗಿದೆ ಎಂದರು.



ಮೈಸೂರು ಗ್ರಾಮಾಂತರದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಕೋಕೋ ವಿಶ್ವಕಪ್ ಆಟಗಾರ್ತಿಯಾದ ಕು. ಚೈತ್ರರನ್ನು ಸನ್ಮಾನಿಸಲಾಯಿತು ಹಾಗೂ ಅಂಗಾಂಗ ದಾನಿಗಳ ನೋಂದಣಿ ಕಾರ್ಯವನ್ನು ಆಯೋಜಿಸಲಾಗಿತ್ತು.



ಉಡುಪಿ ಜಿಲ್ಲಾ ಮಹಿಳಾ ಮೋರ್ಚಾದ ವತಿಯಿಂದ ಬಿಜೆಪಿ ಕಚೇರಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರ ಆರ್ಥಿಕ ಸಬಲೀಕರಣ ವಿಚಾರವಾಗಿ ಹಾಗೂ ಮಹಿಳೆಯರ ಆರೋಗ್ಯದ ಬಗ್ಗೆ ವಿಧಾನ ಪರಿಷತ್ ಸದಸ್ಯರಾದ ಡಾ. ಧನಂಜಯ್ ಸರ್ಜಿ ಅವರು ಮಾತನಾಡಿದರು.

ಹೀಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಮ್ಮ ರಾಜ್ಯದ 22 ಜಿಲ್ಲೆಗಳಲ್ಲಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷರಾದ ಸಿ. ಮಂಜುಳಾರವರ ಮಾರ್ಗದರ್ಶನದಲ್ಲಿ ಮಹಿಳಾ ಕಾರ್ಯಕರ್ತರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ಮಾಸದ ಮಾಧುರ್ಯ 95ನೇ ಕಾರ್ಯಕ್ರಮದಲ್ಲಿ ಜನಪದ ಸಂಗೀತ



ಆಶಾದೀಪ ಸಮುದಾಯ ಕಲಾ ಕೇಂದ್ರ (ರಿ)., ಚಿಕ್ಕೋಡಿ ಕಲಾವಿದರಿಂದ 'ಜನಪದ' ಸಂಗೀತ ಕಾರ್ಯಕ್ರಮ ಜಗನ್ನಾಥ ಭವನದ 95ನೇ ಮಾಸದ ಮಾಧುರ್ಯ ಕಾರ್ಯಕ್ರಮದಲ್ಲಿ ಆಗಮಿಸಿದ್ದ ಕಲಾಭಿಮಾನಿಗಳ ಶ್ಲಾಘನೆಗೆ ಕಲಾತಂಡದ ನೇತೃತ್ವ ವಹಿಸಿದ್ದ ಶ್ರೀ ಭರತ ಕಲಾಚಂದ್ರ ಮತ್ತು ಅವರ ತಂಡದ ಕಲಾವಿದರು ಭಾಜನರಾದರು.



ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶಿವಮೊಗ್ಗ ಜಿಲ್ಲೆಯ ಶಾಸಕರಾದ ಶ್ರೀ ಚನ್ನಬಸಪ್ಪನವರು ಕಾರ್ಯಕ್ರಮದ ಆರಂಭದಿಂದ ಮುಕ್ತಾಯದವರೆಗೂ ಉಪಸ್ಥಿತರಿದ್ದು ಕಲಾವಿದರನ್ನು, ಸಂಘಟಕರನ್ನು ಇಂತಹ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿ ನನ್ನ ಸಹಕಾರ ಪಡೆದಿದ್ದಕ್ಕೆ ಅತ್ಯಂತ ಪ್ರೀತಿಯಿಂದ ಧನ್ಯವಾದ ಎಂದು ಹೇಳಿದರು. ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ತಮ್ಮ ಮಾತುಗಳನ್ನು ಮುಂದುವರೆಸಿದ ಶಾಸಕರು ಇಂದು ಜನಪದ ಕಲೆ ಹಾಗೂ ಸಂಗೀತ ಮರೆಯಾಗುತ್ತಿದೆ. ನಿಸರ್ಗದ ಒಡಲಿನಲ್ಲಿ ಹುಟ್ಟಿ ಬೆಳೆದು, ಅಲ್ಲಿಯ ಪರಿಸರ, ವಾತಾವರಣಕ್ಕೆ ತಕ್ಕಂತಹ ಬೇಸಾಯ ಮಾಡುತ್ತಾ ದುಡಿಮೆಯ ದಣಿವನ್ನು ಹಾಡು ಹೇಳುವ ಮುಖಾಂತರ ತಂಪಾಗಿಸಿಕೊಳ್ಳುತ್ತಾರೆ. ಇಲ್ಲಿ ಅನುಭವವೇ ಸಾಹಿತ್ಯ ರೂಪವನ್ನು ಪಡೆಯುತ್ತದೆ. ರೈತನ ಹಾಗೂ ಶ್ರಮಿಕ ವರ್ಗದ ಜನರ ಬಾಯಿಂದ ಬಾಯಿಗೆ, ಅಂದಿನಿಂದ ಇಂದಿಗೂ ಜೀವಂತವಾಗಿಟ್ಟುಕೊಂಡು ತಮ್ಮ ಮುಂದಿನ ಪೀಳಿಗೆಗೆ ದಾಟಿಸುವ ಕೆಲಸಕ್ಕೆ ನನ್ನ ಅನಂತ ನಮಸ್ಕಾರ ಎಂದು ಹೇಳಿದರು.

ಈ ಕಲಾತಂಡದ ನೇತೃತ್ವವಹಿಸಿದ್ದ ಶ್ರೀ ಭರತ ಕಲಾಚಂದ್ರ ರವರು 1997ರಲ್ಲಿ ಪ್ರಧಾನಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿ ರವರಿಂದ ರಾಷ್ಟ್ರೀಯ ಯುವ ಪ್ರಶಸ್ತಿ ಪಡೆದವರು. ಶ್ರೀಯುತ ವಾಜಪೇಯಿ ರವರ ಜನ್ಮಶತಾಬ್ದಿ ಆಚರಿಸುತ್ತಿರುವ ಈ ವರುಷದಲ್ಲೇ ನಮಗೆ ಶ್ರೀ ಭರತ್ ಕಲಾಚಂದ್ರ ನಮ್ಮ ರಾಜ್ಯದ ಗಡಿಭಾಗದ ಚಿಕ್ಕೋಡಿ ಜಿಲ್ಲೆಯವರು ಬಂದು ಕಾರ್ಯಕ್ರಮ ನೆಡೆಸಿಕೊಟ್ಟಿದ್ದು ನಮ್ಮ ಸುಯೋಗವೇ ಸರಿ. ಅವರನ್ನು ಮುಖ್ಯ ಅತಿಥಿಗಳಾದ ಶ್ರೀ ಚನ್ನಬಸಪ್ಪನವರು, ಸಂಘಟಕರಾದ ಶ್ರೀ ದತ್ತಗುರು ಹೆಗಡೆ ರವರು ಹಾಗೂ ಅಟಲ್ ಜೀ ಜನ್ಮಶತಾಬ್ದಿ ಕಾರ್ಯಕ್ರಮದ ಉಸ್ತುವಾರಿಗಳಾದ ಶ್ರೀ ಜಗದೀಶ ಹಿರೇಮನಿಯವರು ವಿಶೇಷವಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲೇ ಹಿರಿಯರು ವಾಜಪೇಯಿ ರವರೊಂದಿಗೆ ಒಡನಾಡಿದ ಶ್ರೀ ಶ್ರೀಕಾಂತ ಕುಲಕರ್ಣಿ ರವರನ್ನೂ ಸನ್ಮಾನಿಸಲಾಯಿತು.

ಶ್ರೀ ಭರತ ಕಲಾಚಂದ್ರ ರವರೊಂದಿಗೆ ಕು. ಸುಜಾತ ಮಗದುಮ್ಮ ಅವರ ಗಾಯನ, ಕು. ಸುಪ್ರಿಯಾ ಕಲಾಚಂದ್ರ ರವರ ಗಾನವೂ ಸೇರಿ ಹೊಸದೊಂದು ಜಾನಪದ ಸಂಗೀತ ಲಹರಿ ಬಹಳ ಅದ್ಭುತವಾಗಿತ್ತು. ಜನಪದ, ತತ್ವಪದ, ಗೀಗಿ ಪದದ ಮುಖಾಂತರ ಜಾನಪದ ಲೋಕಕ್ಕೆ ಎಲ್ಲರನ್ನೂ ಕರೆದೊಯ್ದರು.

ತಬಲಾದಲ್ಲಿ ಶ್ರೀ ಮಹಬಲೇಶ್ವರ ಸಾಬಣ್ಣವರ್, ಢೋಲಕ ವಾದನದಲ್ಲಿ ಶ್ರೀ ಮಾರುತಿ ಕಾಮಗೌಡ, ಖಂಜೀರ್ ವಾದನದಲ್ಲಿ ಶ್ರೀ ಮಹೇಶ ಪಕಾಲೆ. ಶ್ರೀ ಪುಂಡಲೀಕ ನಾಯಕ ಹಾಗೂ ಶ್ರೀ ಸಂತ್ರಾಮ ಮಯೂರ್ ರವರು ಹಿಮ್ಮೇಳ ಗಾಯನದಲ್ಲಿ ಸಾಥ್ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ಕಲಾವಿದರಿಗೆ ಮುಖ್ಯ ಅತಿಥಿಗಳಿಂದ ಅಭಿನಂದನಾ ಪತ್ರ ನೀಡಿ ಸನ್ಮಾನಿಸಲಾಯಿತು.



ಮನ್ ಕಿ
# ಬಾತ್

## ಪ್ರಾಣಿ ಮತ್ತು ಮಾನವ ಸಂಘರ್ಷ

## ಕರ್ನಾಟಕ, ಕೇರಳ, ತಮಿಳುನಾಡು ಹುಲಿ ಕುಣಿತಕ್ಕೆ ಮೋದಿ ಮೆಚ್ಚುಗೆ

## ಮಕ್ಕಳಲ್ಲಿ ಬೊಜ್ಜು ಸಮಸ್ಯೆ ಹೆಚ್ಚುತ್ತಿರುವುದಕ್ಕೆ ಪ್ರಧಾನಿ ಕಳವಳ

## ಚಾಮರಾಜನಗರ ಸೋಲಿಗರಿಂದ ಹುಲಿ ಸಂರಕ್ಷಣೆ

**'ಮನ್ ಕಿ ಬಾತ್'**ನ 119ನೇ ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಮಾತನಾಡಿ, ದೇಶದ ಹಲವೆಡೆ ಪ್ರಾಣಿ ಮತ್ತು ಮಾನವ ಸಂಘರ್ಷ ಒಂದಲ್ಲ ಒಂದು ಸಂದರ್ಭದಲ್ಲಿ ನಡೆಯುತ್ತಲೇ ಇರುತ್ತದೆ. ಆದರೆ ದೇಶದಲ್ಲೇ ಅತಿ ಹೆಚ್ಚು ಹುಲಿಗಳು ಇರುವ ಪ್ರದೇಶವಾದ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿನ 'ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ಟೈಗರ್ ರಿಸರ್ವ್ ಫಾರೆಸ್ಟ್'ನಲ್ಲಿ ರಾಷ್ಟ್ರೀಯ ವನ್ಯಮೃಗವಾದ ಹುಲಿಗಳನ್ನು ಸಂರಕ್ಷಣೆ ಮಾಡುವುದರಲ್ಲಿ ಆ ಭಾಗದ ಸೋಲಿಗರ ಪರಿಶ್ರಮದ ಬಗ್ಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಮನತುಂಬಿ ಪ್ರಶಂಸೆ ಮಾಡಿದ್ದಾರೆ. ಇದೇ ವೇಳೆ, ಕರ್ನಾಟಕದ ಹೆಮ್ಮೆಯ ಹುಲಿವೇಷ, ಹುಲಿ ಕುಣಿತವನ್ನೂ ಪ್ರಧಾನಿ ಶ್ರೀ ಮೋದಿ ರವರು ಮೆಚ್ಚುಗೆ ವ್ಯಕ್ತಪಡಿಸಿದರು.

**ಬುಡಕಟ್ಟು ಭಾಷೆಗಳ ಸಂರಕ್ಷಣೆಗೆ ಎಐ:** ಕೃತಕ ಬುದ್ಧಿಮತ್ತೆ (ಎಐ) ಸಹಾಯದಿಂದ ಬುಡಕಟ್ಟು ಭಾಷೆಗಳ ಸಂರಕ್ಷಣೆಯಲ್ಲಿ ತೊಡಗಿರುವ ತೆಲಂಗಾಣದ ಆದಿಲಾಬಾದ್‌ನ ಶಿಕ್ಷಕರಾದ ತೋಡಸಂ ಕೈಲಾಶ್ ಕುರಿತು ಪ್ರಧಾನಿ ಶ್ರೀ ಮೋದಿ ರವರು ಮಾತನಾಡಿ ಡಿಜಿಟಲ್ ಹಾಡು ಮತ್ತು ಸಂಗೀತದಲ್ಲಿ ಕೈಲಾಶ್ ರವರ ಆಸಕ್ತಿ ದೇಶದಲ್ಲಿನ ಬುಡಕಟ್ಟು ಭಾಷೆ-ಸಂಸ್ಕೃತಿಯ ಸಂರಕ್ಷಣೆಗೆ ನೆರವಾಗುತ್ತಿದೆ ಎಂದು ಹೇಳಿದರು.

**ವನಿತೆಯರಿಗೆ ಮಾರ್ಚ್ 8 ಗೌರವ :** ಅಂತಾರಾಷ್ಟ್ರೀಯ ಮಹಿಳಾ ದಿನವಾದ ಮಾ.8 ರಂದು ಮಹಿಳೆಯರನ್ನು ಗೌರವಿಸುವ ಸಲುವಾಗಿ ಈ ಬಾರಿ ಪ್ರಧಾನಿ ಶ್ರೀ ಮೋದಿ ಅವರ ಸಾಮಾಜಿಕ ಜಾಲತಾಣ ಖಾತೆಗಳಾದ ಎಕ್ಸ್, ಇನ್‌ಸ್ಟಾಗ್ರಾಮ್, ಫೇಸ್ ಬುಕ್ ಮೊದಲಾದವನ್ನು ದೇಶದ ಕೆಲವು ಸ್ಫೂರ್ತಿದಾಯಕ ಮಹಿಳಾ ಮಣಿಯರಿಗೆ ಹಸ್ತಾಂತರಿಸುವ ಮೂಲಕ ಮಹಿಳಾ ದಿನದ ಉಡುಗೊರೆ ನೀಡುವುದಾಗಿ ಪ್ರಧಾನಿ ಶ್ರೀ ಮೋದಿ ಘೋಷಿಸಿದರು.

**ಬಾಹ್ಯಾಕಾಶದಲ್ಲಿ ಇಸ್ರೊ ಶತಕ :** ಇತ್ತೀಚಿನ ದಿನಗಳಲ್ಲಿ ಎಲ್ಲೆಡೆ ಕ್ರಿಕೆಟ್ ವಾತಾವರಣವಿದೆ. ಆದರೆ ಭಾರತದ ಪ್ರತಿಷ್ಠಿತ ಸಂಸ್ಥೆ 'ಇಸ್ರೊ' ಬಾಹ್ಯಾಕಾಶದಲ್ಲಿ ಶತಕ ಗಳಿಸಿದೆ ಎಂದು ಶ್ಲಾಘಿಸಿದರು. ಇಸ್ರೊ ಸಾಧನೆ ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಶ್ರೇಷ್ಠತೆ ಅನ್ವೇಷಣೆಯಲ್ಲಿ ಒಂದಾಗಿದ್ದು ಇದು 'ಸ್ಮರಣೀಯ ಹೆಜ್ಜೆ', ದೇಶದ ಜನರು ವರ್ಷದಲ್ಲಿ ಕನಿಷ್ಠ ಒಂದು ದಿನವಾದರೂ ವಿಜ್ಞಾನಿಗಳಾಗಬೇಕು, ವಿಜ್ಞಾನಕ್ಕೆ ಸಂಬಂಧಿಸಿದ ಕೇಂದ್ರಗಳಿಗೆ ಭೇಟಿ ನೀಡಬೇಕು ಎಂದು ಕರೆ ನೀಡಿದರು. ಕಳೆದ 10 ವರ್ಷಗಳಲ್ಲಿ 460 ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಇದರಲ್ಲಿ ಬೇರೆ ದೇಶಗಳ ಅನೇಕ ಉಪಗ್ರಹಗಳು ಸೇರಿವೆ. ಇತ್ತೀಚಿನ ವರ್ಷಗಳಲ್ಲಿ, ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತದ ಮಹಿಳಾ ಶಕ್ತಿಯ ಭಾಗವಹಿಸುವಿಕೆಗೆ ಪ್ರಧಾನಿ ಶ್ರೀ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದರು.

**ಪರೀಕ್ಷಾ ಪೆ ಚರ್ಚಾಗೆ ಸಾಂಸ್ಥಿಕ ರೂಪ :** ಪ್ರತಿವರ್ಷ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮ ಈ ಬಾರಿಯಿಂದ ಸಾಂಸ್ಥಿಕೀಕರಣಗೊಂಡಿದೆ. ಈ ಕಾರ್ಯಕ್ರಮಕ್ಕೆ ಅನೇಕ ಹೊಸ ತಜ್ಞರು ಸಹ ಸೇರುತ್ತಿದ್ದಾರೆ. ಹಲವು ವಿಷಯ ತಜ್ಞರನ್ನೊಳಗೊಂಡ 8 ವಿಭಿನ್ನ ಸಂಚಿಕೆಗಳನ್ನು ಸೇರಿಸಿರುವುದು ಸಂತಸದ ಸಂಗತಿಯಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದರು.

**ದೊಡ್ಡದಾಗುತ್ತಿದೆ ಬೊಜ್ಜು ಸಮಸ್ಯೆ! :** ಕೆಲ ವರ್ಷಗಳಿಂದ ಬೊಜ್ಜು ಸಮಸ್ಯೆ ದ್ವಿಗುಣಗೊಂಡಿದೆ. ಮಕ್ಕಳಲ್ಲಿ ಬೊಜ್ಜಿನ ಸಮಸ್ಯೆ 4 ಪಟ್ಟು ಹೆಚ್ಚಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ಕಳವಳ ವ್ಯಕ್ತಪಡಿಸಿ, ಸಣ್ಣ ಸಣ್ಣ ಪ್ರಯತ್ನಗಳಿಂದಲೇ ಬೊಜ್ಜಿನ ಸಮಸ್ಯೆಯನ್ನು ನಿವಾರಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು. ಜನರು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಡಬಲ್ ಒಲಿಂಪಿಕ್ ಪದಕ ವಿಜೇತ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ, ಮತ್ತು ಬಾಕ್ಸಿಂಗ್ ಚಾಂಪಿಯನ್ ನಿಖತ್ ಜರೀನ್ ಅವರ ಸಂದೇಶಗಳನ್ನು ಅವರು ಉಲ್ಲೇಖಿಸಿದರು. ಭಾರತ ಆರೋಗ್ಯವಂತ ರಾಷ್ಟ್ರವಾಗಲು ಜನರು ಬೊಜ್ಜಿನ ಸಮಸ್ಯೆಯಿಂದ ಮುಕ್ತಿ ಹೊಂದಬೇಕಿದೆ ಎಂದು ತಿಳಿಸಿದರು. ಮಾ.4 ವಿಶ್ವ ದಢೂತಿ ದೇಹ ದಿನವಾಗಿದೆ. ಭಾರತದಲ್ಲಿನ 5 ರಿಂದ 19 ವರ್ಷದವರೆಗಿನ ವಯೋಮಿತಿಯವರಲ್ಲಿ ಬೊಜ್ಜು ಹೆಚ್ಚುತ್ತಿದ್ದು, 1.25 ಕೋಟಿ ಮಕ್ಕಳು, ಬಾಲಕ-ಬಾಲಕಿಯರು ದಢೂತಿ ದೇಹ ಹೊಂದಿರುವ ಅಂಕಿ ಅಂಶ ದಾಖಲಾಗಿದೆ ಎಂದು ಪ್ರಧಾನಿ ಶ್ರೀ ಮೋದಿ ಆತಂಕ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷರಿಂದ ಶಾಸಕರ ಹಕ್ಕು ಮೊಟಕುಗೊಳಿಸುತ್ತಿರುವ ಕೆಲಸವಾಗುತ್ತಿರುವ ಹಿನ್ನಲೆಯಲ್ಲಿ ಬಿಜೆಪಿ ಶಾಸಕರಿಂದ ರಾಜ್ಯಪಾಲರಿಗೆ ಮನವಿ



ತೆರಿಗೆಹಣ ದುರುಪಯೋಗ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಶಾಸಕರಿಂದ ಪ್ರತಿಭಟನೆ



ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಶಿಕ್ಷಣ ತಜ್ಞರಾದ ಪ್ರೊ. ಎಂ.ಆರ್ ದೊರೆಸ್ವಾಮಿ ಅವರ ಶ್ರದ್ಧಾಂಜಲಿ ಕಾರ್ಯಕ್ರಮ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಭಾವುರಾವ್ ದೇಶಪಾಂಡೆ ರವರ ಜನ್ಮ ದಿನಾಚರಣೆ



ಅಟಲ್ ಬಿಹಾರಿ ವಾಜಪೇಯಿ ಜನ್ಮ ಶತಮಾನೋತ್ಸವ – ಅಟಲ್ ವಿರಾಸತ್ ವಾಕಾಥಾನ, ಬೀದರ್



ಯಲಹಂಕ ಶಾಸಕರಾದ ಶ್ರೀ ಎಸ್.ಆರ್. ವಿಶ್ವನಾಥ ರವರು ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ದ್ವಿತೀಯಸ್ಥಾನ ಪಡೆದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನ ಸಿಬ್ಬಂದಿಗಳು



ಕಾಲೇ ವರ್ಷತು ಪರ್ಜನ್ಯಃ



# ಕೃಷ್ಣನ ನೇತೃತ್ವ...!!

ವೈಯುಕ್ತಿಕ ಬದುಕಿಗಾಗಲಿ, ಸಂಘಟನಾತ್ಮಕ ದೃಷ್ಟಿಯಿಂದಾಗಲಿ ಮಹಾಭಾರತದ ಪ್ರತಿಯೊಂದು ಘಟನೆ ಏನನ್ನು ಮಾಡಬೇಕು, ಮಾಡಬಾರದು ಎಂಬುದನ್ನು ಹೇಳುತ್ತದೆ. ಅದರಲ್ಲೂ ಸೂತ್ರದಾರ ಕೃಷ್ಣನ ಪ್ರತಿಯೊಂದು ನಡೆ –ನುಡಿಗೆ ಒಂದೊಂದು ಮಹತ್ವವಿದೆ. ಕೃಷ್ಣ ಸೂತ್ರಧಾರನಾಗಿ, ನಾಯಕನಾಗಿ, ಅಣ್ಣನಾಗಿ, ಗೆಳೆಯನಾಗಿ, ಬಂಧುವಾಗಿ ಎಲ್ಲಾ ಪಾತ್ರ ನಿಭಾಯಿಸುವಲ್ಲಿ ಯಶಸ್ವಿಯಾದವನು.

ನಾಯಕ ಹೇಗಿರಬೇಕು, ಏನೆಲ್ಲವನ್ನು ಎದುರಿಸಬೇಕು ಎಂಬುದು ಕೃಷ್ಣನನ್ನು ನೋಡಿ ಕಲಿಯಬೇಕು. ಕೃಷ್ಣ ಭಗವಂತನ ಅವತಾರ. ಮಹಾಭಾರತದ ಪ್ರತಿಯೊಂದು ನಡೆ ಅವನ ಸೂತ್ರದಡಿಯೇ ನಡೆದಿರುವುದು. ಕೃಷ್ಣ ಮನಸು ಮಾಡಿದ್ದರೆ ಯಾವುದನ್ನು ಹೇಗೆ ಬೇಕಾದರೂ ಮಾಡಬಹುದಿತ್ತು, ಆದರೆ ಹಾಗೆ ಮಾಡಲಿಲ್ಲ. ಮಹಾಭಾರತದ ನಾಯಕನಾದ ಕೃಷ್ಣ ಅವಮಾನಗಳನ್ನು ಎದುರಿಸಿದ, ಅಪಹಾಸ್ಯಕ್ಕೊಳಗಾದ, ಆರೋಪಗಳನ್ನು ಹೊತ್ತುಕೊಂಡ, ತನ್ನವರನ್ನು ಕಳೆದುಕೊಂಡ, ಸಂಧಾನಕಾರನಾದ, ಮಾರ್ಗದರ್ಶಕನಾದ. ಕೃಷ್ಣನನ್ನು ನೋಡಿ ನಕ್ಕರು, ಕುಹಕವಾಡಿದರು, ಆತನನ್ನು ಕೊಲ್ಲಲು ಪ್ರಯತ್ನಿಸಿದರು, ಕ್ರೂರ, ಕಪಟಿ ಎಂದು ಜರಿದರು. ಆದರೆ ಕೃಷ್ಣ ಮಾತ್ರ ಎಲ್ಲವನ್ನು ಸಮಚಿತ್ತದಿಂದ ಸ್ವೀಕರಿಸಿದ.

ಯುದ್ಧ ಭೂಮಿಯಲ್ಲಿ ಅರ್ಜುನ ಕೈ ಚೆಲ್ಲಿ ನಿಂತಾಗ ಆತನಿಗೆ ವಿರಾಟರೂಪ ದರ್ಶನ ಮಾಡಿ ಮತ್ತೆ ಕ್ರಿಯೆಯಲ್ಲಿ ತೊಡಗುವಂತೆ ಮಾಡಿದ. ತಪ್ಪು ಮಾಡುವವರಿಗೆ ತಪ್ಪು ಮಾಡಲೂ ಬಿಟ್ಟ, ತಪ್ಪುಗಳನ್ನು ತಿದ್ದಿಕೊಳ್ಳಲು ಸಹ ಬಿಟ್ಟ. ದುರ್ಯೋಧನನ ಬಳಿ ಸಹ ಸಂಧಾನಕ್ಕೆ ಬಂದಿದ್ದ, ಸಂಧಾನ ಫಲಪ್ರದವಾಗಲಿಲ್ಲವೆಂದು ಧುರ್ಯೋಧನನ್ನು ಕಡೆಗಣಿಸಲಿಲ್ಲ, ಕುರುಕ್ಷೇತ್ರ ಯುದ್ಧ ನಿರ್ಧಾರವಾದಾಗ ಯುದ್ಧ ಸಮಯದಲ್ಲಿ ನಿನ್ನ ಪರವಾಗಿ ನಾನು ಬೇಕೊ ಅಥವಾ ನನ್ನ ಹದಿನಾರು ಅಕ್ಷೋಹಿಣಿ ಸೇನೆ ಬೇಕೊ ಎಂದು ಕೇಳಿದ. ದುರ್ಯೋಧನ ಕೃಷ್ಣನನ್ನು ಬಿಟ್ಟು ಅವನ ಸೈನ್ಯವನ್ನು ಆಯ್ಕೆ ಮಾಡಿಕೊಂಡ. ಜರಾಸಂಧನಿಗೆ ನೂರಾ ಒಂದು ತಪ್ಪು ಮಾಡಲು ಅವಕಾಶ ಕೊಟ್ಟು ನಂತರ ಅವನನ್ನು ವಧೆ ಮಾಡಿಸಿದ. ಭೀಷ್ಮರಂತ ರಾಜನನ್ನೂ ಅಧರ್ಮದ ಪರವಾಗಿ ನಿಂತಿದ್ದಕ್ಕೆ ಬಿಡಲಿಲ್ಲ, ಆದರೂ ಭೀಷ್ಮನ ಜೇಷ್ಠತೆಗೆ, ಶ್ರೇಷ್ಠತೆಗೆ ಏನು ಗೌರವ ಸಲ್ಲಬೇಕೋ, ಸಲ್ಲಿಸಬೇಕೋ ಸಲ್ಲಿಸಿದ.

ಕೃಷ್ಣನಿಗೆ ಯಾವುದು ಅಸಾಧ್ಯವಾಗಿರಲಿಲ್ಲ. ತನ್ನ ಸಹೋದರಿಯ ಪುತ್ರ ಅಭಿಮನ್ಯು ಚಕ್ರವ್ಯೂಹದಲ್ಲಿ ಸಿಲುಕಿ ಪ್ರಾಣ ಬಿಡುತ್ತಾನೆಂಬುದು ತಿಳೀಯದೆ ಇರಲಿಲ್ಲ. ಆದರೂ ನ್ಯಾಯ, ಧರ್ಮದ ಹೋರಾಟದಲ್ಲಿ ನಮ್ಮದು ಎನ್ನುವ ಒಂದಿಷ್ಟನ್ನು ಕಳೆದುಕೊಳ್ಳಬೇಕಾಗುತ್ತದೆಂಬುದನ್ನು ಸಾಕ್ಷೀಕರಿಸಿಬಿಟ್ಟ.

ಇದೆಲ್ಲದರ ಜೊತೆಗೆ ಅವತಾರ ಪುರುಷನಾದ ಕೃಷ್ಣ ಅರ್ಜುನನಿಗೆ ಒಬ್ಬ ಸಾಮಾನ್ಯ ಸಾರಥಿಯಾಗಿಯೇ ಅರ್ಜುನನ ರಥವನ್ನು ಮಾತ್ರವಲ್ಲ, ಇಡೀ ಕುರುಕ್ಷೇತ್ರವನ್ನೇ ನಡೆಸಿಬಿಟ್ಟ.

ಇಡೀ ಮಹಾಭಾರತದಲ್ಲಿ ಎಲ್ಲಿಯೂ ಕೃಷ್ಣ ಶಸ್ತ್ರ ಪ್ರಯೋಗಮಾಡಲಿಲ್ಲ, ಹಾಗೆಂದು ಶತ್ರುಗಳನ್ನು ಅಳಿಸದೆ ಇರಲಿಲ್ಲ. ತನ್ನ ಬುದ್ಧಿವಂತಿಕೆ, ತಾಳ್ಮೆ, ಸಹನೆ, ಪ್ರೀತಿ, ತಂತ್ರಗಳಿಂದಲೆ ಎಲ್ಲವನ್ನೂ ನಿಭಾಯಿಸಿ ಧರ್ಮ ಸ್ಥಾಪನೆ ಮಾಡಿದ. ಅವನಿಗೆ ಧರ್ಮ ಉಳಿಯಯಬೇಕು, ಅಧರ್ಮ ನಶಿಸಬೇಕು ಎಂಬುದಷ್ಟೆ ಅವನ ಉದ್ದೇಶವಾಗಿತ್ತು.

ಒಬ್ಬ ಸಂಘಟನಾ ಮತ್ತು ಯಶಸ್ವಿ ನಾಯಕ ಹೇಗಿರಬೇಕು ಎಂಬುದಕ್ಕೆ ಕೃಷ್ಣ ಸ್ಪಷ್ಟ ಉದಾಹರಣೆ. ಎಲ್ಲಿಯೂ ಸಿಟ್ಟಾಗಲಿಲ್ಲ, ಹಮ್ಮು ಬಿಮ್ಮು ತೊರಲಿಲ್ಲ, ನಾನೆ ಎಲ್ಲ, ಎಲ್ಲವೂ ನನ್ನಿಂದಲೆ ಅನ್ನಲಿಲ್ಲ. ತನಗಿಂತ ಚಿಕ್ಕವರ ಬಳಿಯು ತಲೆಬಾಗಿ ನಿಂತ, ದೊಡ್ಡವರ ಬಳಿ ಗೌರವದಿಂದ ನಡೆದುಕೊಂಡ. ಶಕ್ತಿ, ಸಾಮರ್ಥ್ಯ, ಯುಕ್ತಿ, ದೈವತ್ವಗಳೆಲ್ಲವೂ ಇದ್ದರೂ ನೋವು ನಲಿವುಗಳನ್ನು ಎದುರಿಸಿದ ಯಾರಿಗೆಲ್ಲ ಏನಲ್ಲಾ ಸಿಗಬೇಕೊ ಅದನ್ನು ಸಲ್ಲಿಸಿದ. ಕೊನೆಯಲ್ಲಿ ಧರ್ಮ ಸ್ಥಾಪನೆಯಾಗಬೇಕೆಂಬ ತನ್ನ ಉದ್ದೇಶವನ್ನು ಈಡೇರಿಸಿಕೊಂಡ.

ಹೀಗೆ ಒಂದು ಪಕ್ಷ ಅಥವಾ ಸಂಘಟನೆ ಬಲವಾಗಿ ಬೆಳೆದು ತನ್ನ ಗುರಿ ತಲುಪಬೇಕೆಂದರೆ ಸಂಘಟನೆಗೆ ಕೃಷ್ಣನಂತ ನೇತೃತ್ವವಿರಬೇಕು. ಉದ್ದೇಶ ಸಾಧನೆಗಾಗಿ ಪಡೆದು ಕೊಳ್ಳಲು ಸಿದ್ದರಿರಬೇಕು, ಕಳೆದುಕೊಳ್ಳುವ ಸಂದರ್ಭ ಬಂದಾಗ ಸ್ವೀಕರಿಸುವ ಮನಸ್ಥಿತಿಯಿರಬೇಕು. ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಿ, ದ್ವೇಷ ಸಾಧಿಸದೆ ಚಾಣಾಕ್ಷತನದಿಂದ ಸವಾಲುಗಳನ್ನು ಎದುರಿಸಿ ಮುನ್ನಡೆದಾಗ ಸಂಘಟನೆಯ ಉದ್ದೇಶ ಸಾಧಿತವಾಗುವುದು. ಅದಕ್ಕೆ ಕೃಷ್ಣನಂತಹ ನೇತೃತ್ವ ಎಂದಿಗೂ ಅವಶ್ಯಕ ಹಾಗೂ ಅನಿವಾರ್ಯ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**